ತೆಗೆದುಕೊಂಡುಬಿಟ್ಟಿದ್ದೀರಿ. ಸ್ವಾಧೀನ ಪ್ರಕ್ರಿಯೆ ವಿವಿಧ ಹಂತಗಳಲ್ಲಿದೆ. ಹಣ ನಮಗೆ ಬೇಕೇ ಬೇಕು ತೆಗೆದುಕೊಳ್ಳಬೇಡಿ ಎಂದು ಹೇಳಿದ್ದಾರೆ. ಆದರೂ ಕೂಡ ತೆಗೆದುಕೊಂಡಿದ್ದೀರಿ. ನೀವು ತೆಗೆದುಕೊಂಡಿಲ್ಲ. President Rule ಇರುವಾಗ ತೆಗೆದುಕೊಂಡಿದ್ದಾರೆ. ಅದಾದ ಮೇಲೆ ನೀವು ದುಡ್ಡು ಬಿಡುಗಡೆ ಮಾಡಿ ಅಂದ ತಕ್ಷಣ ಇನ್ನು ದುಡ್ಡು ಬಿಡುಗಡೆ ಮಾಡಲಿಲ್ಲ. ಇದು ಒಂದು. ಎರಡನೆಯದು. ಅಲ್ಲಿ ಎಷ್ಟು ಎಕರೆ ಬೇಕು ಅಷ್ಟು ಎಕರೆಯಲ್ಲಿ ಸರ್ಕಾರದ ಜಮೀನು ಅಲ್ಲಿ ಇದೆಯೋ ಇಲ್ಲವೋ ಖಾಸಗಿ ಜಮೀನು ತೆಗೆದುಕೊಳ್ಳಬೇಕಾದರೆ ಸೆಕ್ಷನ್ 4ರ ಪ್ರಕಾರ issue ಆಗಿದೆಯೋ ಇಲ್ಲವೋ. ಅವಾರ್ಡ್ ಕೊಡತಕ್ಕಂತಹ position ಗೆ ಬಂದಿದೆಯೋ ಇಲ್ಲವೋ? ಯಾವ ಹಂತದಲ್ಲಿ ಇದೆ ಎಂದು ಸ್ವಲ್ಪ ಹೇಳಿ ನೋಡೋಣ.

ಶ್ರೀ ಪ್ರಕಾಶ್ ಹುಕ್ಕೇರಿ ಬಿ : ಮಾನ್ಯ ಅಧ್ಯಕ್ಷರೆ. ದುಡ್ಡು ಬಿಡುಗಡೆ ಆಗಿದ್ದು ಇನ್ನು PD Account ನಲ್ಲಿದೆ. ಅದನ್ನು withdraw ಮಾಡಬಾರದು ಎಂದು ಹೇಳುತ್ತಿದ್ದೇವೆ. 1.04.2008 ರಂದು ಜಿಲ್ಲಾಧಿಕಾರಿಗಳು ಬರೆದಿರುವಂತಹ ಪತ್ರವನ್ನು ಓದಿ ತೋರಿಸಿದ್ದೇನೆ. ಈ ಪತ್ರವನ್ನು ತಾವು ಸುಳ್ಳು ಎಂದು ಹೇಳುತ್ತಿರಾ?

ಶ್ರೀ ಕರುಣಾಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ. ಆ ಹಣ ಇನ್ನು withdraw ಆಗಿಲ್ಲ. ಅಲ್ಲಿಯೇ ಇದೆ ಎಂದರೆ ಅಲ್ಲಿಯೇ ಉಳಿಸಿಕೊಡುತ್ತೇವೆ. ಬೆಳಗಾಂ ಹಿತವನ್ನು ನಾವು ಖಂಡಿತವಾಗಿ safeguard ಮಾಡುತ್ತೇವೆ. ಅಲ್ಲಿ ಏನು ಹಣ ಬೇಕು ಅದನ್ನು ಕೊಡುತ್ತೇವೆಂದು ಹೇಳುತ್ತಿದ್ದೇವೆ. ಆ ಹಣ ಡಿ.ಸಿ. ಆಫೀಸ್‌ನಲ್ಲಿ ಅಲ್ಲಿಯೇ ಇದ್ದರೆ ಅಲ್ಲಿಯೇ ಉಳಿಸಿ ಕೊಡುತ್ತೇವೆ.

ಅಧ್ಯಕ್ಷರು : ಒಂದು ಆರ್ಡರ್ ಮಾಡಿಬಿಡಿ.

ಶ್ರೀ ದೊಡ್ಡನಗೌಡ ಜಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಬಾಗಲಕೋಟೆ ಜಿಲ್ಲೆ ಬಗ್ಗೆ ಹೇಳುತ್ತಿದ್ದೇನೆ. ಮಲಪ್ರಭಾ ನದಿ ಮತ್ತು ಕೃಷ್ಣ ನದಿಯಿಂದ ಆಗಿರುವಂತಹ ಸುಮಾರು 20 ಕ್ಕೂ ಹೆಚ್ಚು ಗ್ರಾಮಗಳು ಅದೇ ಪರಿಸ್ಥಿತಿಯಲ್ಲಿವೆ.

ಅಧ್ಯಕ್ಷರು : ಸಪರೇಟಾಗಿ ಕೇಳಿ ತಕ್ಷಣ ಮಾಹಿತಿ ಕೊಡಿ ಎಂದರೆ ಅವರು ಹೇಗೆ ಕೊಡುತ್ತಾರೆ. ನೀವು ಸಪರೇಟ್ ನೋಟಿಸ್ ಕೊಡಿ.

6 ವಿತ್ತೀಯ ಕಾರ್ಯಕಲಾಪ

2008–2009ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ ಹಾಗೂ 1 ರಿಂದ 28 ರವರೆಗಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) ; ಮಾನ್ಯ ಅಧ್ಯಕ್ಷರೆ. ರಾಜ್ಯದಲ್ಲಿ BJP ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ್ದಾರೆ. ನಮ್ಮ ಸರ್ಕಾರದ ಗುರಿ ರೈತರ ಅಭಿವೃದ್ಧಿ ಎನ್ನುವಂತಹ ಘೋಷಣೆಯನ್ನು ಸಹ ಮಾಡಿದ್ದಾರೆ. ಇವರ ಸರ್ಕಾರ ಬಂದ ದಿವಸದಿಂದ ಅಭಾವ ಪ್ರಾರಂಭವಾಗಿದೆ. ಒಂದು ಕಡೆ ಗೊಬ್ಬರಕ್ಕೆ ಅಭಾವ. ಇನ್ನೊಂದು ಕಡೆ ಇಂಧನಕ್ಕೆ ಅಭಾವ. ಇನ್ನೊಂದು ಕಡೆ ಡೀಸೆಲ್ ಮತ್ತು ಪೆಟ್ರೋಲ್‌ಗೆ ಅಭಾವ. ಸರ್ಕಾರ ಪ್ರಾರಂಭದಲ್ಲಿ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಮೇಲೆ ಅಭಾವದಿಂದಲೇ ಪ್ರಾರಂಭವಾಗಿದೆ. ಪ್ರಾರಂಭದಲ್ಲಿಯೇ ಅಭಾವ ಬಂದಂತಹ ಸರ್ಕಾರ ಎಂದು ಹೇಳಬೇಕಾಗುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಪ್ರಮಾಣವಚನ ಸ್ವೀಕರಿಸಿದ ತಕ್ಷಣ ನವದೆಹಲಿಗೆ ಪ್ರಯಾಣ ಬೆಳೆಸಿದರು. ನವದೆಹಲಿಯಲ್ಲಿ ಅವರ ಪಕ್ಷದ ಮುಖಂಡರನ್ನು ಭೇಟಿ ಮಾಡಿದರು. ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದರು. ಆದರೆ ಈ ಸಂದರ್ಭದಲ್ಲಿ ಏನು ರೈತರ ಗೊಬ್ಬರದ ಗಲಾಟೆ ಪ್ರಾರಂಭವಾಗಿತ್ತು. ಅದರ ಬಗ್ಗೆ ಪ್ರಧಾನ ಮಂತ್ರಿಗಳ ಹತ್ತಿರ ಏನು ಮಾತನಾಡಿದರೋ ಗೊತ್ತಿಲ್ಲ. ಕೇಂದ್ರದ ನಮ್ಮ Fertilzers Minister ಹತ್ತಿರ ಏನು ಮಾತನಾಡಿದರೋ ಗೊತ್ತಿಲ್ಲ. ಏಕೆಂದರೆ ಅವತ್ತಿನ ದಿವಸ ಕೆಲವು ಕಡೆ ಸರ್ಕಾರ ರಚನೆ ಆದ ಮೂರು ದಿವಸಕ್ಕೆ ಈ ರಾಜ್ಯದಲ್ಲಿ ನಾಲ್ಕಾರು ಕಡೆ ಗೊಬ್ಬರಕ್ಕೋಸ್ಕರ ಹಾಹಾಕಾರ ನಡೆಯುತ್ತಿದ್ದಂತಹ ಸಂದರ್ಭ ತಮಗೆಲ್ಲಾ ಗೊತ್ತಿದೆ.

(ಈ ಹಂತದಲ್ಲಿ ಶ್ರೀ ಎನ್.ಯೋಗೀಶ್ ಭಟ್ ರವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಆದರೆ ಕೇಂದ್ರದ Fertilizer Minister ಗೆ ನಮ್ಮ ಹಾಸನ ಜಿಲ್ಲೆಯಲ್ಲಿಯೂ ಗೊಬ್ಬರದ ತೊಂದರೆ ಇತ್ತು. ಅಲ್ಲಿಯ ಸ್ಥಳೀಯ ಲೋಕಸಭಾ ಸದಸ್ಯರು Fertilizer Minister ಹತ್ತಿರ ಮಾತನಾಡಿ. ಮಾರನೇ ದಿನ ಬೆಳಿಗ್ಗೆಯೇ Fertilizer Minister ಮೀಟಿಂಗ್ ಕರೆಯುತ್ತಾರೆ. ಕರೆದಂತಹ ಸಂದರ್ಭದಲ್ಲಿ ಇವರನ್ನು ಕೇಳಿದಾಗ ನಮ್ಮ ರಾಜ್ಯದಲ್ಲಿ ಸಾಕಷ್ಟು ಗೊಬ್ಬರ ಇದೆ. ಗೊಬ್ಬರದ ತೊಂದರೆ ಇಲ್ಲವೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳು Fertilizer Minister ಗೆ ಹೇಳಿದ್ದಾರೆ. ಇದು ಪತ್ರಿಕೆಯಲ್ಲಿಯೂ ಬಂದಿದೆ. ಅದನ್ನು ನಾವು ಸದನದಲ್ಲಿಯೂ ಸಹ ಹಲವು ಬಾರಿ ಹೇಳಿದ್ದೇವೆ. ಇದು ಒಂದು ಭಾಗ ಆದರೆ. ಗಲಾಟೆ ಆಗುತ್ತದೆ ಎನ್ನುವ ದೃಷ್ಟಿಯಿಂದ ಜನತೆಯನ್ನು ಸಮಾಧಾನ ಮಾಡುವುದಕ್ಕಾಗಿ ನಾನು ಈ ರಾಜ್ಯದ ಜನತೆಗೆ ಸುಳ್ಳು ಹೇಳಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಸದನದಲ್ಲಿ

ಒಪ್ಪಿಕೊಂಡಿದ್ದಾರೆ. ಇದು ಒಂದು ಭಾಗ. ಗೊಬ್ಬರ ಕೇಳುವುದಕ್ಕೆ ಹೋದಂತಹ ರೈತರ ಮೇಲೆ ಒಂದು ಕಡೆ ಗೋಲಿಬಾರ್ ಆಗುತ್ತದೆ. ಇನ್ನೊಂದು ಕಡೆ ಸಿಕ್ಕ ಸಿಕ್ಕವರನ್ನೆಲ್ಲಾ ಎಳೆದುಕೊಂಡು ಹೋಗಿ ಪೋಲಿಸ್‌ನವರು ಯಾವ ಯಾವ ತರಹದ ಕೇಸ್ ಹಾಕಿದ್ದಾರೆಂದರೆ, ಒಬ್ಬೊಬ್ಬರ ಮೇಲೆ 5.6.7.8 ಕೇಸ್‌ಗಳನ್ನು ಹಾಕಿದ್ದಾರೆ. ಅವರು ಜಾಮೀನು ತೆಗೆದುಕೊಂಡು ಬಂದರೆ ಮತ್ತೆ ಮಾರನೆ ದಿನ ಬೆಳಿಗ್ಗೆ ಬೇರೆ ಕೇಸ್‌ನಲ್ಲಿ ಅರೆಸ್ಟ್ ಮಾಡಿ ಒಳಗೆ ಹಾಕುತ್ತಾರೆ. ಈ ಸರ್ಕಾರ ರೈತರ ಪರ ಇದೆ ಎನ್ನುವುದಕ್ಕೆ ಮೊದಲನೆಯದಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ರೈತರ ಪರವಾಗಿ ಓಟ್ ತೆಗೆದುಕೊಂಡು ರೈತರು ಅವರಿಗೆ ಬೇಕಾದಂತಹ ಗೊಬ್ಬರ ಕೇಳುವುದಕ್ಕೆ ಹೋದರೆ ಅವರ ಮೇಲೆ ಕೇಸ್ ಹಾಕುತ್ತಾರೆ. ಶಾಸಕರಿಗೆ ಮಂತ್ರಿ ಕೊಡಲಿಲ್ಲವೆಂದು ಕೆಲವು ಕಡೆ ಗಲಾಟೆ ಆದಂತಹ ಸಂದರ್ಭ ಇದೆ. ಬೆಂಗಳೂರು ನಗರದಲ್ಲಿ ಬಸ್ಸು ಸುಟ್ಟು ಹಾಕಿದರು. ಆನೇಕಲ್‌ನಲ್ಲಿ ಬಸ್ ಸುಟ್ಟು ಹಾಕಿದರು. ಮೈಸೂರಿನಲ್ಲಿ ಬಸ್ ಸುಟ್ಟು ಹಾಕಿದರು. ಧಾರವಾಡದಲ್ಲಿ ಬಸ್ ಸುಟ್ಟು ಹಾಕಿದರು. ಹುಬ್ಬಳ್ಳಿಯಲ್ಲಿ ಬಸ್ ಸುಟ್ಟು ಹಾಕಿದರು. ಅವರಲ್ಲಿ ಒಬ್ಬರ ಮೇಲೂ ಇವತ್ತಿನವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಿನ್ನೆ ಮಾನ್ಯ ಕುಮಾರಸ್ವಾಮಿಯವರ ಪ್ರಶ್ನೆಗೆ ಲಿಖಿತ ಮೂಲಕ ಉತ್ತರ ಬಂದಿದೆ. ನಾವು ಇವತ್ತಿನವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳುತ್ತೀರಿ. ಆದರೆ ರೈತರು ಗೊಬ್ಬರ ಕೇಳುವುದಕ್ಕೆ ಹೋದವರ ಮೇಲೆ ಏನು ಕೇಸ್ ಹಾಕಿದ್ದೀರಿ? ಅವರು ಬೇಲ್ ತೆಗೆದುಕೊಂಡು ಬಂದರೆ ಮತ್ತೆ ಅರೆಸ್ಟ್ ಮಾಡುತ್ತಾರೆ. ಇನ್ನು ಕೆಲವು ರೈತರು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಯಾರೂ ಕೇಳುವವರು ಇಲ್ಲ. ಶಾಸಕರ ಅಭಿಮಾನಿಗಳು ಅವರಿಗೆ ಮಂತ್ರಿ ಮಾಡಿ ಎಂದು ಕೇಳುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಜನಸಾಮಾನ್ಯರ ಆಸ್ತಿಯನ್ನು ನಾಶ ಮಾಡಿದವರ ಮೇಲೆ ಇವತ್ತಿನವರೆಗೂ ಯಾವುದೇ ಕ್ರಮ ಇಲ್ಲ. ಯಾವ ಉದ್ದೇಶಕ್ಕೆ ಇವರು ಬಿಜೆಪಿ ಕಾರ್ಯಕರ್ತರು ಎಂದು ಅವರ ಮೇಲೆ ಕೇಸ್ ಹಾಕಲಿಲ್ಲವಾ? ಸಾಮಾನ್ಯ ಒಬ್ಬ ರೈತ ಇವತ್ತು ಗೊಬ್ಬರ ಕೇಳುವುದಕ್ಕೆ ಹೋದರೆ ಅವನ ಮೇಲೆ ಹಲವಾರು ಕೇಸ್ ಹಾಕುತ್ತಾರೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಸರ್ಕಾರ ಪ್ರಾರಂಭದಲ್ಲಿಯೇ ಒಂದು ದೀರ್ಘಾವದಿ ಬಜೆಟನ್ನು ಜನಪ್ರಿಯತೆಗಾಗಿ ಘೋಷಣೆ ಮಾಡಿದೆ. ಸಾರ್ವಜನಿಕ ಹಣ ಖಾತೆಯಲ್ಲಿ ಕಳೆದ ವರ್ಷ ಸುಮಾರು 2.550 ಕೋಟಿ ರೂ. ಇತ್ತು. ಈ ವರ್ಷ ಬಜೆಟ್‌ನಲ್ಲಿ ಏನು ಹೇಳುತ್ತಾರೆ. ಸಾಲದ ಮುಖೇನ ಕಳೆದ ವರ್ಷ 2.550 ಕೋಟಿ ರೂ. ಇತ್ತು. ಇದನ್ನು 7.432 ಕೋಟಿ ರೂ. ಗೆ ಹೆಚ್ಚಿಸಿದ್ದಾರೆ. ಈ ರಾಜ್ಯದ ಐದು ಕೋಟಿ ಜನರ ಮೇಲೆ ಇವತ್ತು ಏನು ಕಳೆದ ಸಾರಿ 2.550 ಕೋಟಿ ರೂ. ಮತ್ತು 4.500 ಕೋಟಿ

ರೂ. ಸಾಲ ಎತ್ತಬೇಕೆಂದು ಏನು ಅಭಿಪ್ರಾಯ ಇತ್ತು. ಅದನ್ನು 9.000 ಕೋಟಿ ರೂ. ಗೆ ತೆಗೆದುಕೊಂಡು ಹೋಗಿದ್ದಾರೆ. ರಾಜ್ಯದ ಐದು ಕೋಟಿ ಜನತೆಯ ಮೇಲೆ ಈ ಸರ್ಕಾರ ಐದು ಕೋಟಿ ಸಾಲದ ಹೊರೆಯನ್ನು ಹೇರಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದು BJP ಸರ್ಕಾರ ಕೊಟ್ಟಂತಹ ಕೊಡುಗೆ ಎಂದು ಹೇಳಬೇಕಾಗುತ್ತದೆ. ಈ ಹಣವನ್ನು ಯಾವ ರೀತಿ ವಿನಿಯೋಗ ಮಾಡಬೇಕು. Plan or Non Plan ಗೆ ಏನು ಮಾಡಿದ್ದಾರೆ. Plan ಗೆ ಎಷ್ಟು ಖರ್ಚು ಮಾಡಿದ್ದಾರೆ. ಇದರಲ್ಲಿ ನಾನು ನೋಡಿರುವ ಪ್ರಕಾರ 9.000 ಕೋಟಿ. ರೂ. ನಲ್ಲಿ ಸಾಲದ ರೂಪದಲ್ಲಿ 15% ಇವತ್ತು ಏನು ತೆಗೆದುಕೊಂಡಿದ್ದಾರೆ. ಅದರಲ್ಲಿ ಯೋಜನೇತರ ಕೆಲಸಕ್ಕೆ ಬರೀ 52% ಈ ಸರ್ಕಾರದವರು ಇಟ್ಟಿದ್ದಾರೆ. ಇನ್ನು ಬಾಕಿ 48% ಮುಂದಿನ ಲೋಕಸಭಾ ಚುನಾವಣೆ ಏನು ಬರುತ್ತಿದೆ. ಆ ದೃಷ್ಟಿಯಿಂದ 48% ನ್ನು ಐದು ಕೋಟಿ ಜನತೆಯ ದುಡ್ಡನ್ನು ಯಾವ ರೀತಿ ವಿಲೇವಾರಿ ಮಾಡಿದ್ದಾರೆ ಎನ್ನುವುದು ಬಜೆಟ್ ಮಂಡನೆ ಮಾಡಿರುವುದರಲ್ಲಿ ಕಾಣುತ್ತಿದೆ. 52% ನಮ್ಮ ಐದು ಕೋಟಿ ಜನತೆಯ ದುಡ್ಡನ್ನು ಸಾಲದ ರೂಪದಲ್ಲಿ ತಂದು ಕೊಟ್ಟಂತಹ ಕೊಡುಗೆ ಇದು. 52% ನ್ನು ಏನು ಪ್ಲಾನ್‌ಗೆ ಇಟ್ಟಿದ್ದಾರೆ. ಇನ್ನು 42% ಹಣವನ್ನು ಯಾವುದಕ್ಕೆ ಇಟ್ಟಿದ್ದಾರೆಂದು ದಯಮಾಡಿ ಹೇಳಲಿ, ಶಿಕ್ಷಣ ಕ್ಷೇತ್ರಕ್ಕೆ ಇಟ್ಟಿದ್ದಾರಾ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೆ. ಮಾನ್ಯ ರೇವಣ್ಣನವರು ಬಹಳ ಗಂಭೀರವಾಗಿ ಚರ್ಚೆ ಮಾಡುತ್ತಿದ್ದಾರೆ. ಸದನದಲ್ಲಿ ಇಬ್ಬರು ಸಚಿವರು ಇದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ ; ಬೇಡ ಬಿಡಿ. ಗೃಹ ಸಚಿವರು ನಮ್ಮ ರಕ್ಷಣೆಗೆ ಇದ್ದಾರೆ. ಇವರೇ ಇರುವಾಗ ನಮಗೆ ಬೇರೆಯವರು ಏಕೆ ಬಿಡಿ. ಬೇರೆ ಸಚಿವರು 42% ಕೊಟ್ಟಿರುವುದರ ಬಗ್ಗೆ ನಿರತರಾಗಿದ್ದಾರೆ. ಇನ್ನು 48% ಏನೇನು ಕೊಟ್ಟಿದ್ದೇವೆ. ಲೋಕಸಭೆಗೆ. ಅದರಲ್ಲಿ ಓಟ್ ಏನೇನು ಗಳಿಸಬಹುದು ಎಂದು ಹೇಳಿಕೊಂಡು ಅದರ ಬಗ್ಗೆ ಲೆಕ್ಕಚಾರ ಹಾಕುವುದಕ್ಕೆ ಅವರು ಹೊರಗಡೆ ಹೋಗಿದ್ದಾರೆ. ಪಾಪ. ಇಲ್ಲಿ ರಕ್ಷಣಾ ಸಚಿವರನ್ನು ನಮ್ಮ ರಕ್ಷಣೆಗೆ ಬಿಟ್ಟುಹೋಗಿದ್ದಾರೆ. ನಾವು ಈಗ ಹೇಳಬೇಕಾದ್ದನ್ನು ಹೇಳೋಣ. ಅವರಿಗೆ ಇಂಟರೆಸ್ಟ್ ಇದ್ದರೆ ಬರಲಿ. ಇಂಟರೆಸ್ಟ್ ಇಲ್ಲವೆಂದರೆ ಬೇಡ. ರಕ್ಷಣಾ ಸಚಿವರ ಬಗ್ಗೆ ನಮಗೆ ಅಭಿಮಾನವಿದೆ.

ಶ್ರೀ ಮಹದೇವಪ್ರಸಾದ್ :- ಒಂದು ಸಂತೋಷದ ವಿಚಾರವೆಂದರೆ. ರಕ್ಷಣಾ ಸಚಿವರು ಬರೆದುಕೊಳ್ಳುತ್ತಿದ್ದಾರೆ. ಆದುದರಿಂದ ಅವರೊಬ್ಬರೇ ಇದ್ದರೂ ಕೂಡ ನಮಗೆ ಸಮಾಧಾನ.

ಶ್ರೀ ಹೆಚ್.ಡಿ. ರೇವಣ್ಣ : ಇಂದು ಶೇಕಡ 100 ರಲ್ಲಿ 52% ಮಾತ್ರ ಪ್ಲಾನ್‌ಗಿಟ್ಟು ಇನ್ನು 48% ಬಿ.ಜೆ.ಪಿ.ಯ ಕಾರ್ಯಕ್ರಮಕ್ಕೆ ಯಾವ ಯಾವುದಕ್ಕೆ ಇಡಬೇಕೆಂದು ಮುಂದಿನ ಚುನಾವಣೆಗೆ ಮುಂಚೆ ಯಾವ ಯಾವ ವರ್ಗವನ್ನು ಸಂತೈಸಬೇಕು ಎಂದು ತಿಳಿದುಕೊಂಡು ಆ ದೃಷ್ಟಿಯಿಂದ ಇವತ್ತು ಬಜೆಟ್ ಮಾಡಲಾಗಿದೆಯೆಂದು ಹೇಳಬೇಕಾಗುತ್ತದೆ. ಏಕೆಂದರೆ 5 ಕೋಟಿ ಜನತೆಗೆ ಕೊಟ್ಟಂಥ ಸಂಕಲ್ಪ ಪುಸ್ತಕವೇನಿದೆ. ಅದರಲ್ಲಿ ಏನೇನು ಇದೆ ಎಂದು ಬೇಕಾದರೆ ಹೇಳಬಹುದು. ಇವರು ಚುನಾವಣೆಯಲ್ಲಿ 110 ಸೀಟ್‌ಗಳನ್ನು ತೆಗೆಯಬೇಕೆಂದು ಹೇಳಿ ಏನು ಸಂಕಲ್ಪ ಬುಕ್ ಮಾಡಿದರೋ ಅದನ್ನೇ ಮತ್ತೆ ಮುಂದೆ ಲೋಕಸಭಾ ಸೀಟ್‌ಗಳನ್ನು ಈ ರಾಜ್ಯದಲ್ಲಿ ಗೆಲ್ಲಬೇಕು ಎನ್ನುವ ದೃಷ್ಟಿಯಿಂದ 48 % ನಾನ್-ಪ್ಲಾನಿಂಗ್‌ನಲ್ಲಿ ಇಟ್ಟಿದ್ದಾರೆ. ಏಕೆಂದರೆ ಇವತ್ತು ಒಂದು ಉದಾಹರಣೆಯನ್ನು ಹೇಳುವುದಾದರೆ. ಮೊದಲನೆಯದಾಗಿಯೇ ಶಾಕ್ ಕೊಟ್ಟುಬಿಟ್ಟಿದ್ದಾರೆ. ಮೊದಲನೆಯ ಶಾಕ್ ಎಂದೇ ಈ ರಾಜ್ಯ ಸರ್ಕಾರ ಮುಖ್ಯಾಂಶಗಳಲ್ಲಿ ಏನು ಹೇಳಿದೆಯೆಂದರೆ ಕ್ರೃಷಿ ರಂಗ. ಈ ಕೃಷಿ ರಂಗದ ಮುಖ್ಯಾಂಶವೇನೆಂದರೆ, 10ಹೆಚ್.ಪಿ.ಯ 15 ಲಕ್ಷ ಐ.ಪಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದಾರೆ. ಇದರಲ್ಲಿ 2050 ಕೋಟಿ ಹಣವಿಟ್ಟಿದ್ದೇವೆಂದು ಹೇಳಿದ್ದಾರೆ. ನಾನು ಇವತ್ತು ಇಂಧನ ಇಲಾಖೆ ಬಗ್ಗೆ ಹೇಳಬೇಕಾಗುತ್ತದೆ. ಮೊನ್ನೆ ಕೆಲವು ಸದಸ್ಯರು ಇಂಧನ ಇಲಾಖೆ ಬಗ್ಗೆ ಮಾತನಾಡಿದ್ದಾರೆ. ಹಿಂದೆ ಮೂರು ವರ್ಷ ರೇವಣ್ಣನವರೆ. ನೀವೇ ಇಂಧನ ಸಚಿವರಾಗಿ ಇದ್ದಿರಲ್ಲಾ. ಆಗ ನೀವು ಏನೇನು ಮಾಡಿದಿರಿ ಎಂದು ಕೇಳಿದರು. ಇವತ್ತು ಬೆಂಗಳೂರು ನಗರ ಒಂದರಲ್ಲಿಯೇ 2004 ರಲ್ಲಿ 22 ಲಕ್ಷ ಗ್ರಾಹಕರಿದ್ದರು. ಇವತ್ತು ಬೆಂಗಳೂರು ನಗರದಲ್ಲಿ ಸುಮಾರು 30 ಲಕ್ಷ ಗ್ರಾಹಕರಿದ್ದಾರೆ. ಅಂದರೆ ಕಳೆದ ನಾಲ್ಕು ವರ್ಷದಲ್ಲಿ 8 ಲಕ್ಷ ಬೆಂಗಳೂರು ನಾಗರಿಕರಿಗೆ ನಾವು ಹೊಸದಾಗಿ ಕನೆಕ್ಷನ್ ಕೊಟ್ಟಿದ್ದೇವೆಂದು ಈ ಸದನದಲ್ಲಿ ಹೇಳಬಯಸುತ್ತೇನೆ. ಈ ರೇವಣ್ಣ ಹಿಂದೆ ಮೂರು ವರ್ಷದಲ್ಲಿ ಏನು ಮಾಡಿದ್ದಾನೆ ಎಂದು ಈ ಸದನದ ಮುಂದೆ ಹೇಳಬಯಸುತ್ತೇನೆ. 2004 ರಲ್ಲಿ ಬೆಂಗಳೂರು ನಗರದಲ್ಲಿ ವಿದ್ಯುತ್ ಬೇಡಿಕೆ ಇದ್ದದ್ದು 5114 ಮಿಲಿಯನ್ ಯೂನಿಟ್ ಇತ್ತು. ಇವತ್ತು 9 ಸಾವಿರ ಮಿಲಿಯನ್ ಯೂನಿಟ್ ಇದೆ. ಅದೇ ರೀತಿ ಇವತ್ತು ಇನ್ನೂ ಹೆಚ್ಚು ಬೇಡಿಕೆ ಇದ್ದರೂ ಅದನ್ನು ಪೂರೈಸುವುದಕ್ಕೆ ಆಗಿಲ್ಲ. 2004 ರಲ್ಲಿಯೇ ಬೆಂಗಳೂರು ನಗರದಲ್ಲಿ 11 ಸಾವಿರ ಗರಿಷ್ಟ ಬೇಡಿಕೆ ಇತ್ತು. ಆದರೆ ಕೊಟ್ಟಿದ್ದು ನಾವು ಕೇವಲ 5 ಸಾವಿರ. ಈಗ ಬೆಂಗಳೂರು ನಗರಕ್ಕೆ 17 ಸಾವಿರ ಮಿಲಿಯನ್ ಯೂನಿಟ್ ಬೇಕಾಗುತ್ತದೆ. ಇದಲ್ಲದೇ ಬೆಂಗಳೂರು ನಗರಕ್ಕೆ 2011-2012ಕ್ಕೆ ಕನಿಷ್ಟ

ಇನ್ನೂ 2600 ಮಿಲಿಯನ್ ಯೂನಿಟ್ ಬೇಕಾಗುತ್ತದೆ. ಇದರಲ್ಲಿ 15 ಸಾವಿರ ಯೂನಿಟ್ ಮುಂದಿನ 2012 ರವರೆಗೆ ಬೇಕಾಗುತ್ತದೆ ಎಂದು ಮಾನ್ಯ ಇಂಧನ ಸಚಿವರ ಗಮನಕ್ಕೆ ತರುತ್ತೇನೆ. ಇದಕ್ಕೆ ಕಾರ್ಯಕ್ರಮವನ್ನು ರೂಪಿಸಿದ್ದಾರೆಯೇ? ಇದಲ್ಲದೇ ಇನ್ನೊಂದು ಉದಾಹರಣೆಗೆ ಹೇಳುವುದಾದರೆ, ಇವತ್ತು ಬೆಂಗಳೂರು ನಗರಕ್ಕೆ ನೀರು ಸರಬರಾಜು ವಿಷಯದಲ್ಲಿ ಏನು ಮಾಡಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಇದನ್ನು ಏನಾದರೂ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ನೀರು ಸರಬರಾಜು ಬಗ್ಗೆ ಇರಬಹುದು. ಐ.ಟಿ. ಬಿ.ಟಿ. ಇರಬಹುದು. ಕಾಲ್ ಸೆಂಟರ್ ಇರಬಹುದು. ಇವೆಲ್ಲವೂ ಬೇರೆ ರಾಜ್ಯಕ್ಕೆ ಹೋಗಬಹುದಾದಂಥ ಸನ್ನಿವೇಶ ಬರುತ್ತದೆ. ಆದುದರಿಂದ ಇದನ್ನು ಇಂಧನ ಸಚಿವರು ಗಂಭೀರವಾಗಿ ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ನಾನು ಇಂಧನ ಸಚಿವನಾಗಿ 3 ವರ್ಷ 6 ತಿಂಗಳು ಕಾಲ ಇದ್ದಾಗ ಬೆಂಗಳೂರು ನಗರದಲ್ಲಿ ಹೊಸದಾಗಿ 24 ಸಬ್ ಸ್ಟೇಶನ್‌ಗಳನ್ನು ಮಾಡಿಸಿದ್ದೇನೆ. ನಾನು ಇದ್ದಂಥ ಕಾಲದಲ್ಲಿ 1524 ಕೋಟಿ ರೂಪಾಯಿಗಳ ಕೆಲಸವನ್ನು ಬೆಂಗಳೂರು ನಗರಕ್ಕೆ ಮಾಡಿಸಿದ್ದೇನೆ. ಇದು ಕೇವಲ ಸಬ್ ಸ್ಟೇಶನ್‌ಗಳದ್ದು. ಟ್ರಾನ್ಸ್‌ಮಿಶನ್‌ಗಳದ್ದು ಇದರಲ್ಲಿ ಸೇರಿಲ್ಲ. ಕೇವಲ ಸಬ್ ಸ್ಟೇಶನ್‌ಗಳದ್ದು. ಆ ಕಾರ್ಯಕ್ರಮಕ್ಕೆ ಇಂದಿನ ಮುಖ್ಯಮಂತ್ರಿಗಳಾಗಿರುವ ಯಡಿಯೂರಪ್ಪನವರನ್ನು ಕರೆದಿದ್ದೆ. ಆಗ ಅವರು ಉಪ ಮುಖ್ಯಮಂತ್ರಿಗಳಾಗಿದ್ದರು. ನಮ್ಮ ಅಶೋಕಣ್ಣನವರನ್ನು ಕರೆದಿದ್ದೆ. ಆಗ ಅವರಿಗೆ ಬೆಂಗಳೂರು ನಗರದ ಜನಕ್ಕೆ ವಿದ್ಯುತ್ ಕೊಡುವಂಥ ಕಾರ್ಯಕ್ರಮಕ್ಕೆ ಬರಲು ಬಿಡುವಿರಲಿಲ್ಲ. ಆ ಕಾರ್ಯಕ್ರಮಕ್ಕೆ ಅವರು ಬಂದಿಲ್ಲ. ಬೆಂಗಳೂರು ನಗರಕ್ಕೆ ನಾನು ಏನು ಮಾಡಿದ್ದೇನೆ ಎಂಬುದನ್ನು ಇವತ್ತು ಉದಾಹರಣೆಗೆ ಹೇಳುವುದಾದರೆ 24. 24. ಹೀಗೆ 48 ಹೊಸ ಸ್ಟೇಶನ್‌ಗಳು ಬೆಂಗಳೂರು ನಗರಕ್ಕೆ ಬರುತ್ತಿದೆ. ಕಳೆದ 9 ತಿಂಗಳಲ್ಲಿ ನಾವು ಅಧಿಕಾರದಿಂದ ಇಳಿದ ಮೇಲೆ ಒಂದೇ ಸಬ್ ಸ್ಟೇಶನ್ ಮಾಡುವುದಕ್ಕೆ ಆಗಿಲ್ಲ. 9 ತಿಂಗಳಿನಿಂದೀಚೆಗೆ ಒಂದು ಸಬ್ ಸ್ಟೇಶನ್‌ಗಳನ್ನು ಮಾಡಿದ್ದಾರೆಯೇ ಎಂದು ದಯಮಾಡಿ ಇವರು ಹೇಳಲಿ, ಇಂಧನ ಸಚಿವರು ಒಂದೇ ಒಂದು ಸಬ್ ಸ್ಟೇಶನ್ ಮಾಡಿದ್ದರೆ ಅವರು ಹೇಳಿದ್ದಕ್ಕೆ ನಾನು ಭಾಗಿಯಾಗುತ್ತೇನೆ. ಮತ್ತೆ ಇದಲ್ಲದೇ ಬೆಂಗಳೂರು ನಗರದಲ್ಲಿ ಬೆಸ್ಕಾಂ ವತಿಯಿಂದ ಕಳೆದ ಮೂರು ವರ್ಷದಲ್ಲಿ ವಿದ್ಯುತ್ ಡಿಸ್ಟಿಬ್ಯೂಶನ್ ಮಾಡುವುದಕ್ಕೆ ಮತ್ತು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಸುಮಾರು 1050 ಕೋಟಿ ಹಣವನ್ನು ವಿನಿಯೋಗ ಮಾಡಿದ್ದೇವೆ. ಒಟ್ಟು ಕೆ.ಪಿ.ಟಿ.ಸಿ.ಎಲ್. ಮತ್ತು ಬೆಸ್ಕಾಂ ವತಿಯಿಂದ 2570 ಕೋಟಿ ರೂಪಾಯಿ ಹಣ ವಿನಿಯೋಗವಾಗಿರುವುದು. ಒಂದಲ್ಲ.

ಎರಡಲ್ಲ. 2570 ಕೋಟಿ. ಬೆಂಗಳೂರು ಬೆಸ್ಕಾಂ ಮತ್ತು ಕೆ.ಪಿ.ಟಿ.ಸಿ.ಎಲ್. ಎರಡೂ ಸೇರಿ 2570 ಕೋಟಿ ರೂಪಾಯಿ ಹಣವನ್ನು ಕಳೆದ ಮೂರು ವರ್ಷದಲ್ಲಿ ವಿನಿಯೋಗ ಮಾಡಿದ್ದೇವೆನ್ನುವ ವಿಷಯವನ್ನು ಈ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ಮುಖ್ಯಮಂತ್ರಿಗಳು ಬೆಂಗಳೂರು ನಗರಕ್ಕೆ 1800 ಕೋಟಿ ರೂಪಾಯಿಗಳ ಕೊಡುಗೆಯೆಂದು ಹೇಳಿದ್ದಾರೆ. 1800 ಕೋಟಿ ಯಾವ ಯಾವುದರಲ್ಲಿ ಕೊಡುಗೆಯನ್ನು ಕೊಟ್ಟಿದ್ದಾರೆ? ಮೆಟ್ರೋದಲ್ಲಿ 750 ಕೋಟಿ. ಮತ್ತೆ ಮೆಟ್ರೋದಲ್ಲಿ ಸುಮಾರು 700 ಕೋಟಿ. ಬಿ.ಡಿ.ಎ. ಮೂಲಗಳಿಂದ 700 ಕೋಟಿ ರೂಪಾಯಿ, ಅಂದರೆ ಸುಮಾರು 7 ಸಿ.ಎಂ.ಸಿ.ಗಳಿವೆಯಲ್ಲಾ. ಈ ಏಳು ಸಿ.ಎಂ.ಸಿ.ಗಳಿಗೆ ಸೇರಿದಂತೆ ಬೆಂಗಳೂರು ನಗರಕ್ಕೆ ಭಾರಿ ಕೊಡುಗೆಯನ್ನು ಕೊಟ್ಟಿದ್ದೇವೆಂದು ಈ ಪುಸ್ತಕದಲ್ಲಿ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, 1995ನೇ ಇಸವಿಯಲ್ಲಿ ಮೆಟ್ರೋ ಪ್ರಾರಂಭವಾಗಿದ್ದು. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಮೊದಲು ಮೆಟ್ರೋ ರೈಲನ್ನು ಪ್ರಾರಂಭ ಮಾಡುವುದಕ್ಕೆ ಒಂದು ಬುನಾದಿಯನ್ನು ಹಾಕಿದ್ದು ಎಂದು ಈ ಸಭೆಗೆ ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಅಂದು ಬೆಂಗಳೂರು ನಗರದಲ್ಲಿ ಯಾವ ಯಾವ ವಾಹನಗಳು ಓಡಾಡುತ್ತವೆಯೋ ಅದರ ಮೇಲೆ ಟ್ಯಾಕ್ಸ್ ರೂಪದಲ್ಲಿ ಅವತ್ತಿಂದ 2003 ರವರೆಗೆ ಸುಮಾರು 750 ಕೋಟಿಯವರೆಗೆ ಹಣವನ್ನು ಕ್ರೋಢೀಕರಣ ಮಾಡಿದ್ದು. ಆ 750 ಕೋಟಿ ರೂಪಾಯಿ ಹಣದಲ್ಲಿ. ಮೆಟ್ರೋ ರೈಲಿನ ಯೋಜನೆಯ ಒಟ್ಟು ಯೋಜನೆ ವೆಚ್ಚ 6395 ಕೋಟಿ ರೂಪಾಯಿಗಳು. ಈ ಯೋಜನೆ 2011 ಕ್ಕೆ ಮುಗಿಯಬೇಕು. ಈ ಯೋಜನೆಗೆ ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ 828 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಆದರೆ ಕಳೆದ ವರ್ಷ ರಾಜ್ಯ ಸರ್ಕಾರ ಕೇವಲ 507 ಕೋಟಿ ರೂಪಾಯಿಗಳನ್ನು ಕೊಟ್ಟರು. 828 ಕೋಟಿ ರೂಪಾಯಿಗಳನ್ನು ಇಟ್ಟಿರುವುದಕ್ಕೆ ಕೊಟ್ಟಿದ್ದು ಕೇವಲ 507 ಕೋಟಿ. ಆದರೆ ಈ ವರ್ಷ ಇವರು ಹೇಳಿಕೊಳ್ಳುತ್ತಾರೆ. ಈ ವರ್ಷ ನಾವು 750 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದಿದ್ದಾರೆ. ಯಾರು ಇದ್ದರೂ ಕೂಡ ಹಣ ಇಡಬೇಕಾಗುತ್ತದೆ. ಯಡಿಯೂರಪ್ಪನವರು ಇದ್ದರೂ ಇಡಬೇಕಾಗುತ್ತದೆ. ಯಾರು ಮುಖ್ಯಮಂತ್ರಿಗಳಿದ್ದರೂ ಕೂಡ ಹಣ ಇಡಬೇಕಾಗುತ್ತದೆ. ಏಕೆಂದರೆ ಇದು on going. ಮೆಟ್ರೋ ಹೊಸ work ಅಲ್ಲ. 6.995 ಕೋಟಿ ರೂಪಾಯಿ ಏನಿದೆ. ಅದು ಯಡಿಯೂರಪ್ಪನವರಿಂದ ಮಾತ್ರ ಇಡುವುದಕ್ಕೆ ಸಾಧ್ಯವೆಂದು ತಿಳಿದುಕೊಂಡಿದ್ದರೆ ಅದು ಸರಿ ಅಲ್ಲ. ಇದು on going work. ಯಾರೇ ಮುಖ್ಯಮಂತ್ರಿಗಳಿದ್ದರೂ ಕೂಡ ಪ್ರತಿವರ್ಷ ಕೊಡಬೇಕಾದಂತಹ ಹಣ ಇದು. ಕೊಟ್ಟಿದ್ದಾರೆ. ಕಳೆದ ವರ್ಷ ಸುಮಾರು 300

ಕೋಟಿ ರೂಪಾಯಿ ಕಡಿಮೆ ಕೊಟ್ಟಿದ್ದರು. ಆದುದರಿಂದ ಈ ವರ್ಷ ರಾಜ್ಯ ಸರ್ಕಾರ 650 ಕೋಟಿ ರೂಪಾಯಿ ಮೆಟ್ರೋಗೆ ಹಣ ಇಡಬೇಕಾಗಿತ್ತು. ಈ ವರ್ಷ 650 ಕೋಟಿ ರೂಪಾಯಿ ಏನು ಹಣ ಇಡಬೇಕಾಗಿತ್ತು. ಅದಕ್ಕೆ ಈ ವರ್ಷ 750 ಕೋಟಿ ರೂಪಾಯಿ ಇಟ್ಟಿದ್ದಾರೆ. ಕಳೆದ ವರ್ಷ 300 ಕೋಟಿ ರೂಪಾಯಿ shortfall ಇತ್ತಲ್ಲ. ಅದರ ಜೊತೆಗೆ ಈ ವರ್ಷ 50 ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದಾರೆಯೇ ಹೊರತು ಇದು ಹೊಸದೇನಲ್ಲ. ಬೆಂಗಳೂರಿಗೆ 750 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಹೊಸ ಮೆಟ್ರೋ ಮಾಡಿದ್ದಾರೆ ಎಂದು ನನಗೆ.....

ಶ್ರೀ ಎಂ. ಶ್ರೀನಿವಾಸ್ : ಏಳು cmcಗೆ 700 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಏಳು cmcಗೆ 700 ಕೋಟಿ ರೂಪಾಯಿಯನ್ನು ರಾಜ್ಯದ ಯಾವುದೇ ಸರ್ಕಾರ ಇಟ್ಟಿಲ್ಲ. ಮಾನ್ಯ ಯಡಿಯೂರಪ್ಪನವರು ಇಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಶ್ರೀನಿವಾಸರವರು ಹಿರಿಯರಿದ್ದಾರೆ. ಅವರು ಅರ್ಥ ಮಾಡಿಕೊಳ್ಳಬೇಕು. ಅವರು ನಮ್ಮ ತಂದೆ ಸಮಾನ ಇದ್ದಾರೆ. ನಾನು ಹೇಳುವವರೆಗೂ ತಾವು ಸುಮ್ಮನೆ ಕೇಳಿ. ಮಾನ್ಯ ಅಧ್ಯಕ್ಷರೆ. ನಾನು ಹೇಳಿ ಆದ ಮೇಲೆ ತಾವು ಅವರಿಗೆ ಅರ್ಧ ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಏನೇನು ಬೇಕೋ ಅದನ್ನೆಲ್ಲಾ. ನಾನು ಏನೇನು ತಪ್ಪು ಹೇಳುತ್ತೇನೆ ಅದನ್ನು ಗುರುತು ಹಾಕಿಕೊಂಡು. ಅದನ್ನೆಲ್ಲ ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಡಿ. ನನ್ನದೇನೂ ಅಭ್ಯಂತರವಿಲ್ಲ. ಏಕೆಂದರೆ ಯಡಿಯೂರಪ್ಪನವರು ಬಂದಮೇಲೆ ಬೆಂಗಳೂರು ನಗರಕ್ಕೆ 1800 ಕೋಟಿ ರೂಪಾಯಿ ಹೊರಿಸಿದ್ದಾರೆಂಬ ಭಾವನೆ ಬರುವುದು ಬೇಡ ಎಂದು ನಾನು ಮಾನ್ಯ ಶ್ರೀನಿವಾಸಣ್ಣನವರಿಗೆ ಹೇಳುತ್ತೇನೆ. ನೀವು ಸ್ವಲ್ಪ speed ಕಡಿಮೆ ಮಾಡಿ. ಆರು ವರ್ಷ diesel ಇರಲಿಲ್ಲ. ಯಡಿಯೂರಪ್ಪನವರು ಬಂದಮೇಲೆ diesel ಹಾಕಿಕೊಂಡು ನೀವು ಏಕೆ ಇಷ್ಟೊಂದು speed ಆಗುತ್ತೀರಿ? ಒಳ್ಳೆಯದಾಗಲಿ. ತಮಗೆ ಹೆಚ್ಚಿನ ರೀತಿಯಲ್ಲಿ ಅಧಿಕಾರ ಕೊಡಲಿ. ನೀವು ನಮ್ಮ ಅಣ್ಣನವರು, ಮಂತ್ರಿಯಾಗಲಿ. ನಮಗೆಲ್ಲ ಕೆಲಸ ಮಾಡಿ ಕೊಡಿ. ಮೆಟ್ರೋಗೆ ಕೇಂದ್ರ ಸರ್ಕಾರ ಎಷ್ಟು ಹಣ ಕೊಟ್ಟಿದೆ? ರಾಜ್ಯ ಸರ್ಕಾರದ ಪಾಲು ಏನು? ದಯಮಾಡಿ ತಿಳಸಿ. ಕೇಂದ್ರ ಸರ್ಕಾರದಿಂದ 305 ಕೋಟಿ ರೂಪಾಯಿ ಬರಬೇಕಾಗಿತ್ತು. ಆದರೆ ಕೇವಲ 174 ಕೋಟಿ ರೂಪಾಯಿ ಬಂದಿರುವುದು. ಈ ಸರ್ಕಾರ ಅದರ ಬಗ್ಗೆ ಏನಾದರೂ ಒತ್ತಾಯ ಮಾಡುತ್ತಿದ್ದಾರಾ? ತಾವು ಒತ್ತಾಯ

ಮಾಡಿದ್ದರೆ ಸಂತೋಷ. ಈ ವರ್ಷ ಕೇಂದ್ರ ಸರ್ಕಾರ 750 ಕೋಟಿ ರೂಪಾಯಿ ಮಾತ್ರ ಕೊಟ್ಟಿದ್ದು. ಈ ವರ್ಷ ಕೇಂದ್ರದ ಬಾಬ್ತು 754 ಕೋಟಿ ರೂಪಾಯಿ ಕೊಡಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರ provide ಮಾಡಿರುವುದು ಎಷ್ಟು? ಕೇವಲ 255 ಕೋಟಿ ರೂಪಾಯಿ provide ಮಾಡಿದ್ದಾರೆ. 1.800 ಕೋಟಿ ರೂಪಾಯಿಯಲ್ಲಿ 750 ಕೋಟಿ ರೂಪಾಯಿ ಎನ್ನುವುದನ್ನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುತ್ತೇನೆ. ಇದು ಹಿಂದಿನಿಂದ ಎಂದರೆ 1955ನೇ ಇಸವಿಯಿಂದ ಬಂದಿರುವಂತಹ on going work. ರಾಜ್ಯದ. ಅದೂ ಬೆಂಗಳೂರು ನಗರದ ಜನತೆಗೆ ಈ ಸರ್ಕಾರ ಏನು ಸುಳ್ಳು ಹೇಳುತ್ತಿದೆ ಎನ್ನುವುದನ್ನು ಈ ಸದನದ ಮುಖೇನ ತಮ್ಮ ಗಮನಕ್ಕ ತರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಬೇಕಾದರೆ clarification ಕೊಡಲಿ. ಬೆಂಗಳೂರು ನಗರಕ್ಕೆ CMCಗಳಿಗೆ 700 ಕೋಟಿ ರೂಪಾಯಿ ಹಣ ಕೊಡುತ್ತೇವೆಂದು ಹೇಳುತ್ತಾರೆ. ಇದು ಯಾವ ಮೂಲದಿಂದ ಬರುತ್ತದೆ? ಇದು ರಾಜ್ಯ ಸರ್ಕಾರದಿಂದ ಬರುತ್ತದೋ? ಅಥವಾ BDAನಿಂದ ಕೊಡುತ್ತಾರೋ ಎಂದು ದಯವಿಟ್ಟು clarify ಮಾಡುವುದಕ್ಕೆ ಹೇಳಿ. ಏಳು CMC ವ್ಯಾಪ್ತಿನಲ್ಲಿ BDA site ಇತ್ತು. ಅವುಗಳು corner site ಇರಬಹುದು. ಕೆಲವು ನಿವೇಶನಗಳು ಇರಬಹುದು. ಅವುಗಳನ್ನು ಮಾರಿದಂತಹ ದುಡ್ಡನ್ನು. CMC ಗಳಿಗೆ ಕೊಡುತ್ತಿರುವುದು. ಆ ಏಳು areaದಲ್ಲಿ BDAನವರು site ಮಾಡುವುದಕ್ಕೆ ಅವಕಾಶವಿಲ್ಲ. BDA ದಿಂದ ಮೂಲೆ ನಿವೇಶನಗಳನ್ನು ಮಾರಿದ್ದಾರಲ್ಲ. ಆ ದುಡ್ಡು 700 ಕೋಟಿ ರೂಪಾಯಿ ಕೊಡುತ್ತಿರುವುದು. ಈ ಏಳು CMCಗಳಿಗೆ ರಾಜ್ಯ ಸರ್ಕಾರ ದುಡ್ಡು ಕೊಡುತ್ತಿಲ್ಲ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ತಿಳಿಸಲಿ. BDA corner site ಮಾರಾಟ ಮಾಡಿ ಅದರಿಂದ ಬರುವಂತಹ ಹಣವನ್ನು ತೆಗೆದುಕೊಂಡು BDA ಮೂಲದಿಂದ 700 ಕೋಟಿ ರೂಪಾಯಿ ಹಣ ಕೊಟ್ಟಿದ್ದಾರೆ. 750+700 ಸೇರಿ 1.450 ಕೋಟಿ ರೂಪಾಯಿ ಆಯಿತು. ಈ ವರ್ಷ 350 ಕೋಟಿ ರೂಪಾಯಿ ಕಾರ್ಪೊರೇಷನ್‌ಗೆ ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಸರ್ಕಾರ ಬೆಂಗಳೂರು ನಗರದ ಜನತೆಗೆ ಕೊಡುಗೆ ಕೊಟ್ಟಿರುವುದು ಏನೆಂದರೆ ಕೇವಲ 350 ಕೋಟಿ ರೂಪಾಯಿ. ಇದು ಅವರದೇ ಇಲಾಖೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಏಕೆಂದರೆ ಇವತ್ತು 300 ಕೋಟಿ ರೂಪಾಯಿ ಕೊಡುವ ಕಾರ್ಯಕ್ರಮ ಯಾರ ಕಾಲದಲ್ಲಿ ಪ್ರಾರಂಭವಾಗಿದ್ದು? ಹಿಂದಿನ ಯಾವ ಸರ್ಕಾರವೂ ಕೂಡ ಕೊಟ್ಟಿಲ್ಲ. ಇದು ಪ್ರಥಮವಾಗಿ ಪ್ರಾರಂಭ ಮಾಡಿ. ಬೆಂಗಳೂರು ನಗರ ಪಾಲಿಕೆಗೆ ಕೊಟ್ಟಂತಹ

ಸರ್ಕಾರ ಯಾವುದಾದರೂ ಇದೆಯೆಂದರೆ ಅದು ಮಾನ್ಯ ಕುಮಾರಸ್ವಾಮಿಯವರ ಸರ್ಕಾರ. ಅದನ್ನು ಈ ಸರ್ಕಾರ 350 ಕೋಟಿ ರೂಪಾಯಿ continue ಮಾಡಿದ್ದಾರೆ. ಮಹಾನಗರ ಪಾಲಿಕೆ ಚುನಾವಣೆ ಇಲ್ಲದೆ ಹೋಗಿದ್ದರೆ ಅದನ್ನೂ ಬೇಕಾದರೆ red ink ಹಾಕುತ್ತಿದ್ದರು. ಮುಂದಿನ ಮಹಾನಗರ ಪಾಲಿಕೆ ಚುನಾವಣೆ ದೃಷ್ಟಿಯಿಂದ ಈ ಕಾರ್ಯಕ್ರಮದ ಹೆಸರು ಹೇಳುತ್ತಿದ್ದಾರೆಯೇ ಹೊರತು. ಇದು ಬೇರೆ ಏನೂ ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, 1.800 ಕೋಟಿ ರೂಪಾಯಿಯ ವಿಚಾರದಲ್ಲಿ ನಾನು ಏನು ಮಾತನಾಡಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ದಯವಿಟ್ಟು clarification ಕೊಡಿಸಿ. ಇದಲ್ಲದೆ ಇವತ್ತು BDAನವರು. ಬೆಂಗಳೂರು ನಗರಕ್ಕೆ peripheral Ring Road ಮಾಡಿದ್ದೇವೆಂದು ಹೇಳಿದ್ದಾರೆ. ಯಾವ್ಯಾವ ring road ಮಾಡಿದ್ದೀರಿ ಸ್ವಾಮಿ? ಬೆಂಗಳೂರು ನಗರಕ್ಕೆ BDA ನಿಂದ ಯಾವುದು ಮಾಡಿದ್ದೀರಿ? PWDಯಿಂದ ಯಾವುದು ಮಾಡಿದ್ದಾರೆ? ಏಕೆಂದರೆ ನಾನು ಇಂಧನ ಇಲಾಖೆ ಒಂದರಿಂದಲೇ 36 ತಿಂಗಳಲ್ಲಿ ಬೆಂಗಳೂರು ನಗರಕ್ಕೆ 2.570 ಕೋಟಿ ರೂಪಾಯಿ ಹಣ ಖರ್ಚು ಮಾಡಿದ್ದೇವೆ. ಇವತ್ತು BDA ನಲ್ಲಿ ಮಾನ್ಯ ಕುಮಾರಸ್ವಾಮಿಯವರ ಸರ್ಕಾರ ಇದ್ದಂತಹ ಕಾಲದಲ್ಲಿ ಏನು ಕಾರ್ಯಕ್ರಮ ರೂಪಿಸಿದರು. ಅದು ಬಿಟ್ಟರೆ ಹೊಸ ಕಾರ್ಯಕ್ರಮಗಳು ಯಾವುದೂ ಇಲ್ಲ. ನಾನು ಸರ್ಕಾರದ ಆದೇಶದ ಸಮೇತ ಈ ಸದನದ ಮುಂದೆ ಇಡುವುದಕ್ಕೆ ತಯಾರಿದ್ದೇನೆ. ಮಾನ್ಯ ಕುಮಾರಸ್ವಾಮಿಯವರ ಸರ್ಕಾರ ಇದ್ದಂತಹ ಕಾಲದಲ್ಲಿ ಬೆಂಗಳೂರು ನಗರದ ring road ಇರಬಹುದು. ಇವತ್ತು ಉದಾಹರಣೆಗೆ ಹೇಳುವುದಾದರೆ. ಬೆಂಗಳೂರು ನಗರ ಮುಂದೆ ಬೆಳೆಯುತ್ತಿರುವ ದೃಷ್ಟಿಯನ್ನು ಇಟ್ಟುಕೊಂಡು 116 ಕಿ.ಮೀ. ಉದ್ದದ ಹೊರವಲಯದ ಸಂಪರ್ಕ ರಸ್ತೆ ಮಾಡುವುದಕ್ಕೆ ಮಾನ್ಯ ಕುಮಾರಸ್ವಾಮಿಯವರು. ಅವರ ಸರ್ಕಾರ ಇದ್ದಂತಹ ಕಾಲದಲ್ಲಿ ಆದೇಶ ಮಾಡಿದರು. ಇದಕ್ಕೆ ಒಂದು ಕೋಟಿ, ಎರಡು ಕೋಟಿ ರೂಪಾಯಿ ಅಲ್ಲ 5.600 ಕೋಟಿ ರೂಪಾಯಿ ಇಟ್ಟಿದ್ದು. STR roadಗೆ ಜಮಿನು acquire ಮಾಡುವುದಕ್ಕೆ 400 ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದೇವೆ. ಅದಕ್ಕೆ ಹಿಂದಿನ ಸರ್ಕಾರದಲ್ಲಿ ಆದೇಶವಾಗಿದೆ. ಇಲ್ಲವೆಂದು ಬೇಕಾದರೆ ಹೇಳಲಿ ನೋಡೋಣ. ಇದು ಒಂದು ಭಾಗವಾದರೆ, ಎರಡನೆಯದು ನೂರು ಮೀಟರ್ ಉದ್ದದ ನಾಲ್ಕು ಪಥದ ಎರಡು ಹೊಸ ಬಸ್ಸು ಮಾರ್ಗ. ಎರಡು service road. ಮೆಟ್ರೋ ರೈಲು, 14 ಮೀಟರ್‌ನ buffer zone. Corridor Road ಇದೆಲ್ಲಾ ಸೇರಿ 3.532 ಎಕರೆ ಜಮೀನನ್ನು ಮಾನ್ಯ

ಕುಮಾರಸ್ವಾಮಿಯವರ ಕಾಲದಲ್ಲೇ acquire ಮಾಡಿದ್ದಾರೆ. ಅದಕ್ಕೆ 4(1) notification ಆಗಿದೆ. ಅದನ್ನು ಕೂಡ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಬೆಂಗಳೂರು ನಗರಕ್ಕೆ ಈ ಸರ್ಕಾರ ಬಂದಮೇಲೆ ಎಲ್ಲಾ ಮಾಡಿರುವುದು. ಹಿಂದಿನ ಸರ್ಕಾರಗಳೆಲ್ಲ ಕಣ್ಣು ಮುಚ್ಚಿಕೊಂಡು ಮಲಗಿಕೊಂಡಿದ್ದವು. ಈ ಸರ್ಕಾರ ಬಂದಮೇಲೆ ಎದ್ದು ನಿಂತುಕೊಂಡಿದೆ ಎನ್ನುವ ರೀತಿಯಲ್ಲಿ ಆಗಿದೆ. ಈ ವಿಚಾರದಲ್ಲಿ ಹಿಂದೆಯೇ 4(1) notification ಆಗಿದೆ. ಅದನ್ನು ಬೇಕಾದರೆ ತರಿಸಿಕೊಳ್ಳಲಿ. ಇಲ್ಲವೆಂದರೆ ನಾನು ಒಂದು ಸೆಟ್ ಕಳುಹಿಸಿಕೊಡುತ್ತೇನೆ. ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ 4(1) notification ಆಗಿರುವುದು ಮತ್ತು ಸರ್ಕಾರಿ ಆದೇಶ ಎಲ್ಲ ಬೇಕೆಂದರೆ ತರಿಸಿಕೊಡುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ರೇವಣ್ಣನವರೇ. ಮಾನ್ಯ ಧರ್ಮಸಿಂಗ್‌ರವರ ಸರ್ಕಾರದ ಬಗ್ಗೆ ಕೂಡ ಹೇಳಿ. ಮಾನ್ಯ ಕುಮಾರಸ್ವಾಮಿಯವರ ಸರ್ಕಾರದ ಬಗ್ಗೆ ಮಾತ್ರ ಹೇಳುತ್ತಿದ್ದೀರಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಧರ್ಮಸಿಂಗ್ ಸಾಹೇಬರದ್ದು ಹಾಗೂ ನಮ್ಮಿಬ್ಬರದು ಹೇಳೋಣ. ಸ್ವಲ್ಪ ಇರಿ. ಒಂದೊಂದಾಗಿ ಹೇಳಿಕೊಂಡು ಬರುತ್ತೇನೆ. ನೀವು ಹೇಳುವುದಕ್ಕೆ ಅವಕಾಶ ಕೊಟ್ಟರೆ ಹೇಳುತ್ತೇನೆ. ಮಧ್ಯ ಮಧ್ಯದಲ್ಲಿ ಎದ್ದು ನಿಂತರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಭಾಧ್ಯಕ್ಷರು ನಮಗೆ ದೇವರ ವರ ಪ್ರಸಾದದ ರೀತಿಯಲ್ಲಿ ಅವಕಾಶ ಕೊಟ್ಟರೆ ನೀವು ಏಕೆ ತೊಂದರೆ ಮಾಡುತ್ತೀರಿ? 3.532 ಎಕರೆ ಜಮೀನು acquire ಆಗಿದೆ. ಅದಕ್ಕೆ 4(1) notification ಆಗಿದೆ. ಸರ್ಕಾರಿ ಆದೇಶವಾಗಿದೆ. ಇದು ಒಂದು ಭಾಗ. ಎರಡನೇ ಹಂತದ ಕಾಮಗಾರಿ ತುಮಕೂರು ರಸ್ತೆ. ಬಳ್ಳಾರಿ ರಸ್ತೆ. ಹಳೇ ಮದ್ರಾಸ್ ರಸ್ತೆ. ವರ್ತೂರು– ಸರ್ಜಾಪುರ ಮಾರ್ಗವಾಗಿ ಹೊಸೂರು ರಸ್ತೆಗೆ ಭೂಸ್ವಾಧೀನ ಅಂತಿಮ ಹಂತದಲ್ಲಿದೆ. ಅದು 65 ಕಿ.ಮೀ ರಸ್ತೆ ಇದ್ದು. ಅದಕ್ಕೆ ಭೂಮಿ acquisition ಆಗಿ ಎಲ್ಲಾ ready ಆಗಿದೆ. ನಾವೆಲ್ಲ ready ಮಾಡಿ ಇಟ್ಟಿದ್ದೇವೆ. ಈಗ tender ಮಾತ್ರ ಕರೆಯಬೇಕು. ಹಿಂದೆ Government Order ಎಲ್ಲಾ ಆಗಿದೆ. ಮತ್ತೆ ಹೊಸೂರು ರಸ್ತೆಯಿಂದ ಕನಕಪುರ ರಸ್ತೆ. ಮೈಸೂರು ರಸ್ತೆ, ಮಾಗಡಿ ರಸ್ತೆಯಿಂದ ತುಮಕೂರು ರಸ್ತೆಗೆ 51 ಕಿ.ಮೀಗೆ land acquisition ಪ್ರಕ್ರಿಯೆ ಆಗಬೇಕಾದಂತಹ ಪರಿಸ್ಥಿತಿ ಇದೆ. ಅದಕ್ಕೆ ಹಿಂದೆ ಸರ್ಕಾರಿ ಆದೇಶವಾಗಿದೆ. ಇದು ಅಲ್ಲದೇ ಮೆಟ್ರೋ ರೈಲಿಗೆ ಬೇಕಾದ 12 ಕಿ.ಮೀ. ಆಗಿರಬಹುದು. ಮತ್ತೆ ಪ್ರಧಾನ ಮಾರ್ಗಕ್ಕೆ ನಾಲ್ಕು ಪಥದ ರಸ್ತೆ ಇರಬಹುದು. ಬಸ್ಸುಗಳಿಗೆ ಪ್ರತ್ಯೇಕ ಮಾರ್ಗವಿರಬಹುದು. ಸರ್ವೀಸ್ ರೋಡ್‌ಗೆ ಪ್ರತ್ಯೇಕ ಮಾರ್ಗವಿರಬಹುದು. ಬಸ್ಸುಗಳಿಗೆ

ಪ್ರತ್ಯೇಕವಾಗಿ ಒಂದೂವರೆ ಪಥದ ರಸ್ತೆಯನ್ನೇ ಮಾಡಿದ್ದೇವೆ. ಇವೆಲ್ಲಾ ಪ್ಲಾನನಲ್ಲೇ ಇದೆ. ಇದು ಬಿ.ಡಿ.ಎ.ನಲ್ಲಿ ಮಾಡಿರುವಂಥ ಕಾರ್ಯಕ್ರಮವಾಗಿದೆ. ಇದು ಅಲ್ಲದೇ ಹೊಸದಾಗಿ ಬೆಂಗಳೂರು ನಗರಕ್ಕೆ 45.000 ನಿವೇಶನಗಳನ್ನು ಕೆಂಪೇಗೌಡ ನಗರವೆಂದು ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಆರ್ಥಿಕವಾಗಿ ಹಿಂದುಳಿದವರ ಜನರಿಗೆ ಮನೆಗಳನ್ನು ಕಟ್ಟುವ ಉದ್ದೇಶದಿಂದ 327 ಎಕರೆ ಜಮೀನನ್ನು ಫ್ರೀಯಾಗಿ ಕೊಟ್ಟಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ ಮಾನ್ಯ ಕುಮಾರಸ್ವಾಮಿಯವರು 20 ತಿಂಗಳುಗಳು ಮಲಗಿದ್ದರೆಂಬ ಉದ್ದೇಶಕ್ಕೆ ಬರಬಾರದೆಂಬ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. 327 ಎಕರೆ ಜಮೀನಿನಲ್ಲಿ 45.000 ಮನೆಗಳನ್ನು ಕಟ್ಟುವುದಕ್ಕೆ free costನಲ್ಲಿ ಹಣವನ್ನು ಕೊಟ್ಟಿದ್ದಾರೆ. ಇದು Revenue Department ನಿಂದ hand over ಆಗಿದೆ. ಈ ಬಗ್ಗೆ ಸರ್ಕಾರಿ ಆದೇಶವಿದೆ. ತಮಗೆ ಬೇಕಾದರೆ ಅದನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಆರ್.ಧ್ರುವನಾರಾಯಣ : ಆಗ ನೀವಿಬ್ಬರೂ 20 ತಿಂಗಳು ಜೊತೆಯಲ್ಲೆ ಇದ್ದರಲ್ಲಾ. ತಾವು ಬರೀ ಕುಮಾರಸ್ವಾಮಿಯವರದ್ದನ್ನೇ ಹೇಳುತ್ತಿದ್ದೀರಲ್ಲಾ......

ಶ್ರೀ ಹೆಚ್.ಡಿ. ರೇವಣ್ಣ : ಈಗ ಜೊತೆಯಲ್ಲಿ ಇಲ್ಲವಲ್ಲಾ...

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗ ಜೊತೆಯಲ್ಲಿರುವುದನ್ನೇ ಹೇಳುತ್ತಿರುವುದು. ತಾವು ಕುಳಿತುಕೊಂಡು ಕೇಳಿ. ಇನ್ನು ಸ್ವಲ್ಪ ಹೊತ್ತು ಬಿಟ್ಟುಕೊಂಡು ನಾವು ನೀವು ಇರುವುದನ್ನು ಹೇಳುತ್ತಾರೆ. ಅದನ್ನು ಕೇಳಿ. ಎರಡೂ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಅಧ್ಯಕ್ಷರೆ. ಮಾನ್ಯ ಧ್ರುವನಾರಾಯಣ್‌ರವರು ಆಮೇಲೆ ಅರ್ಧ ಗಂಟೆ ಕಾಲಾವಕಾಶವನ್ನು ತೆಗೆದುಕೊಂಡು ಮಾತನಾಡಲಿ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ತಾವು ಎರಡು ನಿಮಿಷ ತಾಳ್ಮೆಯಿಂದ ಇರಬೇಕು.

ಶ್ರೀ ಎಂ. ಶ್ರೀನಿವಾಸ್ : National Highway ರಸ್ತೆ Bangalore to Mysore ಮತ್ತು ಕನಕಪುರ ರಸ್ತೆಯನ್ನು ಮಾನ್ಯ ವಾಜಪೇಯಿಯವರು ಪ್ರಧಾನಮಂತ್ರಿಯಾಗಿದ್ದ ಕಾಲದಲ್ಲಿ 350 ಕಿ.ಮೀ. ರಸ್ತೆಯನ್ನು ಆಗ ನಾನು ಮಾಡಿದ್ದು. ಅದನ್ನು ಇವರು ಕುಮಾರಸ್ವಾಮಿಯವರ ಕಾಲದಲ್ಲಿ National Highway ರಸ್ತೆಯನ್ನು ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಅದಕ್ಕೆ ನಾನು clarification ಕೇಳಿದ್ದು.

ಶ್ರೀ ಹೆಚ್.ಡಿ. ರೇವಣ್ಣ ; ಇನ್ನು ನಾನು National Highway ವಿಷಯಕ್ಕೆ ಬಂದಿಲ್ಲ. ಮಾನ್ಯ ಶ್ರೀನಿವಾಸ್‌ರವರಿಗೆ ಗೊತ್ತಿಲ್ಲ. ಅವರು ಐದಾರು ತಿಂಗಳುಗಳು

ಆರಾಮವಾಗಿ ಮನೆಯಲ್ಲಿ ಇದ್ದರು. ಮಾನ್ಯ ವಾಜಪೇಯಿಯವರ ಕಾಲದಲ್ಲಿ National Highway ರಸ್ತೆಯನ್ನು ಮಾಡಿದ್ದಾರೆ. ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಾನು ಇನ್ನು National Highway ಬಗ್ಗೆ ಮಾತನಾಡಿಲ್ಲ. ಆಮೇಲೆ ಅದರ ಬಗ್ಗೆ ನಾನು ಮಾತನಾಡುತ್ತೇನೆ. ಈಗ ನಾನು ಬೆಂಗಳೂರು ನಗರದ ಬಿ.ಡಿ.ಎ. ಬಗ್ಗೆ ಮಾತನಾಡುತ್ತಿರುವಂಥದ್ದನ್ನು ಮಾನ್ಯ ಶ್ರೀನಿವಾಸ್‌ರವರು ತಿಳಿದುಕೊಳ್ಳಬೇಕು.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ವಾಜಪೇಯಿಯವರು 2003ರಲ್ಲಿ ಮಾಡಿದ್ದು.

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಶ್ರೀನಿವಾಸ್‌ರವರೆ. ತಾವು National Highway ಬಗ್ಗೆ ಹೇಳುತ್ತಿರುವುದು. ನಾನು ಆಮೇಲೆ National Highway ಬಗ್ಗೆ ಮಾತನಾಡುತ್ತೇನೆ. ಈಗ ಬೆಂಗಳೂರು ನಗರದ ಬಿ.ಡಿ.ಎ.ಗೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೇನೆ. ಇದು ಹೊಸೂರು ರಸ್ತೆಯಲ್ಲ. ಕನಕಪುರ ರಸ್ತೆಯಿಂದ ಒಂದು internal road ಬರುತ್ತದೆ. ಅಲ್ಲಿ ring road ಬರುತ್ತದಲ್ಲ. ಆ ವಿಷಯವನ್ನು ನಾನು ಹೇಳುತ್ತಿದ್ದೇನೆ. ಈಗ ಒಂದೆರಡು ನಿಮಿಷ ನಂತರ ಮಾನ್ಯ ಶ್ರೀನಿವಾಸ್‌ರವರು ಮಾತನಾಡಲಿ. ಇದಕ್ಕೆ 327 ಎಕರೆ ಜಮೀನನ್ನು ಕಂದಾಯ ಇಲಾಖೆಯಿಂದ ಜಮೀನನ್ನು ಬಿ.ಡಿ.ಎ.ಗೆ ಕೊಟ್ಟಿದ್ದಾರೆ. ಈ ಯೋಜನೆಗೆ ಟೆಂಡರ್ ಮಾಡುವ ಹಂತದಲ್ಲಿ ಇದೆ. ಇಲ್ಲಿ 45.000 ಮನೆಗಳನ್ನು ಕಟ್ಟುವಂಥದ್ದು ಇದೆಯಲ್ಲಾ ಇದಕ್ಕೆ ಕಕಂ ಯನ್ನು ಬಿ.ಡಿ.ಎ.ನಲ್ಲಿ ಮಾಡಿ 327 ಎಕರೆ ಜಮೀನನನ್ನು ಕಂದಾಯ ಇಲಾಖೆಯಿಂದ ಬಿ.ಡಿ.ಎ.ಗೆ ಕೊಟ್ಟಿದ್ದಾರೆಂಬುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದು ಬೆಂಗಳೂರು ನಗರಕ್ಕೆ 45.000 ಮನೆಗಳನ್ನು ಕಟ್ಟುವಂಥಾದ್ದು. ಬೆಂಗಳೂರು ನಗರದ ಜನ ಸಾಮಾನ್ಯರಿಗೆ ಅಂದರೆ ಅವರು first Division Clerk ಇರಬಹುದು. Second Division Clerk ಇರಬಹುದು. Attender ಇರಬಹುದು. Driver ಇರಬಹುದು. Auto rickshaw driver ಇರಬಹುದು. ಇವರಿಗೆ ಏನೆಂದರೆ ಜೀವನದಲ್ಲಿ ಒಂದು ಮನೆಯನ್ನು ಕಟ್ಟಬೇಕು ಮತ್ತು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಬೇಕೆಂಬ ಆಸೆ ಇರುತ್ತದೆ. ಆ ದೃಷ್ಟಿಯನ್ನು ಇಟ್ಟುಕೊಂಡು ಮಾನ್ಯ ಕುಮಾರಸ್ವಾಮಿಯವರು ಬೆಂಗಳೂರಿನ ನಾಗರೀಕರಿಗೆ ಸುಮಾರು 1.44.000 ನಿವೇಶನಗಳನ್ನು ಮಾಡುವುದಕ್ಕೆ ಐದು ಹೊಸ ಬಡಾವಣೆಗಳನ್ನು ಮಾಡುವುದಕ್ಕೆ ಆಗ ಬಿ.ಡಿ.ಎ.ಗೆ permission ಕೊಟ್ಟಿದ್ದಾರೆ. ಅದನ್ನು ಬೇಕಾದರೆ ದಾಖಲೆಯನ್ನು ತೆಗೆದು ನೋಡಿ, ಅವು ಯಾವುವೆಂದರೆ. (1) ನಾಡ ಪ್ರಭು ಕೆಂಪೇಗೌಡರ ಬಡಾವಣೆಯಲ್ಲಿ 4.814 ಎಕರೆ. ಅದರಲ್ಲಿ 65.184 ನಿವೇಶನ (2) ಮಾಜಿ

ಮುಖ್ಯಮಂತ್ರಿಗಳಾದ ಮಾನ್ಯ ಕೆ.ಸಿ.ರೆಡ್ಡಿ ಬಡಾವಣೆ. ಇದಕ್ಕೆ ಸುಮಾರು 2.134 ಎಕರೆ 26.734 ನಿವೇಶನ. (3) ಶಿವರಾಮ ಕಾರಂತರ ಬಡಾವಣೆ 3.546 ಎಕರೆ 18.975 ನಿವೇಶನ. (4) ನಿಜಲಿಂಗಪ್ಪನವರ ಬಡಾವಣೆ 2.806 ಎಕರೆ 35.451 ನಿವೇಶನ. (5) ಮಾನ್ಯ ಡಿ.ದೇವರಾಜ ಅರಸುರವರು ನಮ್ಮ ಹಿಂದುಳಿದ ನಾಯಕರು ಇದ್ದಾರಲ್ಲ. ಅವರ ಹೆಸರಿನಲ್ಲಿ ಒಂದು ಬಡಾವಣೆ 1.976 ಎಕರೆ 24.724 ನಿವೇಶನ. ಒಟ್ಟು 1.44.000 ನಿವೇಶನಕ್ಕೆ ಮಾನ್ಯ ಕುಮಾರಸ್ವಾಮಿಯವರು ಅವತ್ತು ಯೋಜನೆಯನ್ನು ಸಿದ್ದಪಡಿಸಿರುವಂಥದ್ದನ್ನು ಇವತ್ತು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಅಲ್ಲದೇ ಇವತ್ತು ಈ ಬಡಾವಣೆಯನ್ನು ಮಾಡುವುದಕ್ಕೆ ಅಗತ್ಯವಾಗಿರುವಂಥ ಭೂ ಅಭಿವೃದ್ಧಿಪಡಿಸಲು ನಿವೇಶನ 40%ರಷ್ಟು ಭಾಗ ನಿಯೋಜಿತ ರೈತರಿಗೆ ಉಳಿದ 60% ಭಾಗ ನಾಗರೀಕ ಹಂಚಿಕೆ. ಅಂತರ ರಾಷ್ಟ್ರೀಯ ಗುಣಮಟ್ಟದ ಸೌಲಭ್ಯ ವ್ಯವಸ್ಥೆ. ಎಲ್ಲಾ ಬಡಾವಣೆಗಳಿಗೂ peripheral ring ರಸ್ತೆ ಇರಬಹುದು. ಕುಡಿಯುವ ನೀರು ಇರಬಹುದು. ಇವೆಲ್ಲಕ್ಕೂ ಒಂದು ಪ್ಲಾನ್ ಅನ್ನು ಸರ್ಕಾರ ಸಿದ್ದಪಡಿದ್ದಾರೆಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇವತ್ತು ನಾಡ ಪ್ರಭು ಕೆಂಪೇಗೌಡರ ಬಡಾವಣೆ ಏನು ಇದೆ. ಅದಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ಅವತ್ತೇ ಆಗಿದೆ. ಅವರು 65.000 ನಿವೇಶನವನ್ನು ಕೊಡುವುದಕ್ಕೆ 4.814 ಎಕರೆ ಏನು ಇದೆ. ಅದಕ್ಕೆ ಅಂದಿನ ಕಾಲದಲ್ಲೆ ಅಗಿರುವಂಥದ್ದು. ಇದು ಏನೂ ಹೊಸ ಯೋಜನೆಯಲ್ಲ. ಮಾನ್ಯ ಕುಮಾರಸ್ವಾಮಿಯುವರ ಹಳೆಯ ಬಜೆಟ್ ಪುಸ್ತಕದಲ್ಲಿರುವುದನ್ನು ತೆಗೆದು ಹೊಸದಾಗಿ ಬಜೆಟ್ ಪುಸ್ತಕದಲ್ಲಿ ಸೇರಿಸಿದ್ದಾರೆಯೇ ಹೊರತು ಹೊಸದೇನು ಅಲ್ಲವೆಂದು ಹೇಳಬೇಕಾಗುತ್ತದೆ. ಇದು ಅಲ್ಲದೇ signal free junction. ನಾಲ್ಕು junction ಮಾಡುವುದಕ್ಕೆ. grade separator ಇರಬಹುದು. ಇಬ್ಬಲೂರು ಜಂಕ್ಷನ್ ಇರಬಹುದು, ನಾಗವಾರ ಜಂಕ್ಷನ್ ಇರಬಹುದು. ಹುಳಿಮಾವು ಜಂಕ್ಷನ್ ಇರಬಹುದು, ಇವೆಲ್ಲಾ ಕಾರ್ಯಕ್ರಮಗಳನ್ನು free trafic ಗೋಸ್ಕರ ರೂಪಿಸಿದ್ದಾರೆ. ಇದು ಅಲ್ಲದೇ 8 junction free ಯೋಜನೆಗಳನ್ನು HSR ಬಡಾವಣೆ ಇರಬಹುದು. ಬೆಳಗುಂದೂರು ಜಂಕ್ಷನ್ ಇರಬಹುದು. ದೇವದುರ್ಗ ಹಳ್ಳಿ. ಕಾಡಬೀಸನಳ್ಳಿ. ಮಹದೇವ ಪುರ. ಕಲ್ಯಾಣ ನಗರ. ವೀರನ ಪಾಳ್ಯ. ಹೆಣ್ಣೂರು ಜಂಕ್ಷನ್. ಈ 8 ಜಂಕ್ಷನ್‌ಗಳಿಗೂ ಕುಮಾರಸ್ವಾಮಿಯವರ ಸರ್ಕಾರ ಅನುಮತಿಯನ್ನು ಕೊಟ್ಟಿತ್ತೆನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದೂ ಅಲ್ಲದೇ 5 ಜಂಕ್ಷನ್‌ಗಳನ್ನು ಪೂರ್ಣಗೊಳಿಸಿದ grade separator ಅನ್ನು Central Silk Board ಹತ್ತಿರ ಒಂದು. ಮಾರತ್‌ಹಳ್ಳಿ. ರಾಮಮೂರ್ತಿ ನಗರ.

ಹೆಬ್ಬಾಳ. ನೆಕ್ಕುಂಡಿ ಇದಲ್ಲದೇ High SPeed corridor ಯೋಜನೆ ವರ್ತೂರು ರಸ್ತೆಯಿಂದ ಬೆಳಗುಂದೂರು ಜಂಕ್ಷನ್ ಸರ್ಜಾಪುರದ ಮಾರ್ಗವಾಗಿ ರಸ್ತೆ Electronic City ಸೇರಬೇಕೋ ಆ ಉದ್ದೇಶದಿಂದ ಆರೂವರೆ ಕಿ.ಮೀ. ರಸ್ತೆಗೆ 60 ಕಿ.ಮೀ. ಅಗಲದ ರಸ್ತೆ ಇರಬಹುದು. ಮತ್ತೆ ಸುಮಾರು 130 ಎಕರೆ ಜಮೀನನ್ನು ಹೈಟೆಕ್ ಸಿಟಿಗಾಗಿ 868 ಎಕರೆ ಜಮೀನನ್ನು PPA ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವ ಉದ್ದೇಶವಿದೆಯೆನ್ನುವ ಬಿ.ಡಿ.ಎ.ದ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಎಂ.ಶ್ರೀನಿವಾಸ್ : ಮುಖ್ಯಮಂತ್ರಿಗಳಾಗಿ 20 ತಿಂಗಳುಗಳಲ್ಲೇ ಇಷ್ಟು ಕೆಲಸಗಳು ಆಗಿಬಿಡುತ್ತದಾ?

ಶ್ರೀ ಹೆಚ್.ಡಿ. ರೇವಣ್ಣ : ನಾನು ಮುಖ್ಯಮಂತ್ರಿಯಾಗಿಲ್ಲ. ನಾನು ಹೇಳುವುದು.

ಶ್ರೀ ಎಂ.ಶ್ರೀನಿವಾಸ್ ; ಆಗ ಇವೆಲ್ಲವನ್ನು ಮಾಡುವಾಗ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಕುಮಾರಸ್ವಾಮಿಯವರೊಬ್ಬರೇ ಮುಖ್ಯಮಂತ್ರಿಗಳಲ್ಲ. ಮಾನ್ಯ ಯಡಿಯೂರಪ್ಪನವರು ಇವರ ಜೊತೆಯಲ್ಲಿದ್ದರು.

(ಗೊಂದಲ)

ಶ್ರೀ ಆರ್. ಧ್ರುವನಾರಾಯಣ : ಅವರು ಬಜೆಟ್ ಬಗ್ಗೆ ಮಾತನಾಡಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆಡಳಿತ ಪಕ್ಷದಲ್ಲಿದ್ದಾರೆ. ನಾನು ವಿರೋಧ ಪಕ್ಷದಲ್ಲಿದ್ದೇನೆ. ನಾನು ವಿರೋಧಪಕ್ಷದ ಒಬ್ಬ ಸಾಮಾನ್ಯ ಸದಸ್ಯನಾಗಿ ಇವತ್ತು ಹೇಳಬೇಕಾಗುತ್ತದೆ. ಏನೆಂದರೆ ನಾನು ಮಾನ್ಯ ಶ್ರೀನಿವಾಸ್‌ರವರಷ್ಟು ಓದಿಲ್ಲ. ಅವರಷ್ಟು ನಾನು ಮಂತ್ರಿಯಾಗಿಲ್ಲ. ಬಿ.ಡಿ.ಎ.ಗೆ ಮೆಂಬರ್ ಆಗಿಲ್ಲ. ಅವರಿಗೆಲ್ಲಾ ಅನುಭವವಿದೆ.

ಶ್ರೀ ಎಂ. ಶ್ರೀನಿವಾಸ್ : ನೀವು ಎಕರೆಗೆ ಒಂದು ಸೈಟ್ ಕೊಟ್ಟಿರುವಂಥದ್ದನ್ನು ಸ್ವಾಗತ ಮಾಡಿದ್ದಾರೆ. ಅದನ್ನು ನಾನು ಹೇಳಿದೆ.

ಶ್ರೀ ಹೆಚ್.ಡಿ.ರೇವಣ್ಣ ; ಮಾನ್ಯ ಅಧ್ಯಕ್ಷರೆ, ಅವರು ಸರ್ಕಾರದ ಪರವಾಗಿ ಬಜೆಟ್ ಮೇಲೆ ಮಾತನಾಡುವುದಕ್ಕೆ ಪೂರ್ಣ ಅಧಿಕಾರವಿದೆ. ಅವರು ಎರಡು ಡಜನ್ ಸಾಕು. ಅವರು ಅಷ್ಟು ಅಭಿವೃದ್ಧಿ ಮಾಡಿದ್ದಾರೆಂದು ಹೇಳುವುದಕ್ಕೆ. ವಿರೋಧ ಪಕ್ಷದ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಈ ಬಗ್ಗೆ ಬೆಳಕು

ಚೆಲ್ಲುವುದಕ್ಕೆ. ಈ ರಾಜ್ಯದ ಜನತೆಗೆ. ಅದು ಬೆಂಗಳೂರು ನಗರದ ಜನತೆಗೆ... ಗೊತ್ತಾಗಲಿ. ಏಕೆಂದರೆ, ನಮ್ಮ ಪಾರ್ಟಿಯಲ್ಲಿದ್ದರೆ ಅವರು ಗೆಲ್ಲುತ್ತಿರಲಿಲ್ಲ. ಹೀಗೆ ಸುಳ್ಳು ಹೇಳಿಕೊಂಡು ಮಾಡಿರುವುದರಿಂದಲೇ ಗೆದ್ದಿರುವುದು ಎನ್ನುವುದನ್ನು ನಾನು ರಾಜ್ಯದ ಜನತೆಗೆ ತಿಳಿಸುತ್ತಿದ್ದೇನೆ. ಆ ಉದ್ದೇಶದಿಂದ ಶ್ರೀನಿವಾಸ್ ಅಣ್ಣಾವರಿಗೆ ಹೇಳುತ್ತಿದ್ದೇನೆ. ಈಗ ಶ್ರೀನಿವಾಸ್ ಅಣ್ಣಾರವರು ಯಡಿಯೂರಪ್ಪನವರಿಗೆ right hand ಆಗಿದ್ದಾರೆ. ಆದರೆ ಈಗ ಇಲ್ಲಿ ಯಡಿಯೂರಪ್ಪನವರೇ ಇಲ್ಲ. ಅವರಿಗೆ interst ಇಲ್ಲ.

ಶ್ರೀ ಎಂ. ಶ್ರೀನಿವಾಸ್ : ಯಡಿಯೂರಪ್ಪನವರ right hand ಅಗದೇ. ಬಿಟ್ಟು ಬಂದಿದ್ದಕ್ಕೆ ನನ್ನನ್ನು ಆರು ವರ್ಷ ಮನೆಯಲ್ಲಿ ಕೂರಿಸಿದ್ದರು.

ಶ್ರೀ ಹೆಚ್.ಡಿ. ರೇವಣ್ಣ ; ಒಂದು ನಿಮಿಷ ಹೇಳುತ್ತೇನೆ ಕೇಳಿ ಶ್ರೀನಿವಾಸ್ ಅಣ್ಣನವರೇ. ಲೀಡರ್‌ಗಳನ್ನು ಕರೆದುಕೊಂಡು ಬರುವುದಕ್ಕೆ ನನ್ನ ಜೀವನದಲ್ಲಿ ನಾನೆಂದೂ ಹೋಗಲಿಲ್ಲ. ನಾನು ಒಂದನ್ನು ಕೇಳುತ್ತೇನೆ.

ಶ್ರೀ ಎಂ. ಶ್ರೀನಿವಾಸ್ : ಯಡಿಯೂರಪ್ಪನವರ ಪರ ಎಂದು ಹೇಳಿದಿರಿ. ಒಂದು ಕಾಲದಲ್ಲಿ ಅಂದರೆ 1983ರಲ್ಲಿ ಹೆಗಡೆಯವರು ಕೈಹಿಡಿದರು. 2008ರಲ್ಲಿ ಯಡಿಯೂರಪ್ಪನವರು ಕೈಹಿಡಿದಿದ್ದಕ್ಕೇ ಈಗ ವಿಧಾನಸಭೆಗೆ ಬಂದಿದ್ದು. ಇಲ್ಲದಿದ್ದರೆ ಮನೆಯಲ್ಲಿರುತ್ತಿದ್ದೆ. 6 ವರ್ಷ ಮನೆಯಲ್ಲಿ ಕುಳಿತಿದ್ದೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಏನು ಹೇಳುತ್ತೇನೆ ಎಂದರೆ ನಾನು ಶ್ರೀನಿವಾಸ್ ಅಣ್ಣನಷ್ಟು ರಾಜ್ಯ ಮಟ್ಟದ ಲೀಡರ್ ಅಲ್ಲ. ನಾನು ಹಾಸನ ಜಿಲ್ಲೆಗೆ ಸೀಮಿತವಾಗಿದ್ದೇನೆ. ಶ್ರೀನಿವಾಸ್ ಅಣ್ಣನವರ ಬೆಂಗಳೂರು ನಗರದ King maker ಇದ್ದ ಹಾಗೆ. ನಾನು ಅವರಷ್ಟು ಬುದ್ಧಿವಂತ ಅಲ್ಲ. ನನಗೆ ಅಷ್ಟು ಗೊತ್ತಿಲ್ಲ. ಬೆಂಗಳೂರು ನಗರದ ಪರಿಚಯವೂ ಇಲ್ಲ. ನಾನು ಹಾಸನ ಜಿಲ್ಲೆಗಷ್ಟೇ ಸೀಮಿತವಾಗಿದ್ದೇನೆ. ಈಗ ನಾನು ವಿರೋಧ ಪಕ್ಷಕ್ಕೆ ಬಂದ ಮೇಲಾದರೂ ಒಂದು ಸ್ವಲ್ಪ ರಾಜ್ಯದ ಬಗ್ಗೆ. ಬೆಂಗಳೂರು ನಗರದ ಬಗ್ಗೆ ಬೆಳಕು ಚೆಲ್ಲಬೇಕಾಯಿತು. ಅದಕ್ಕೋಸ್ಕರ ಶ್ರೀನಿವಾಸ್ ಅಣ್ಣನವರಿಗೆ ಬೆಳಕು ಚೆಲ್ಲುತ್ತಿದ್ದೇನೆ. ಬೆಂಗಳೂರು ನಗರಕ್ಕೆ ಇವರು ಕೊಟ್ಟಿರುವ ಕೊಡುಗೆ ಏನೆಂದರೆ, ಹಿಂದೆ ಇದ್ದಂಥ ಯೋಜನೆಗಳ ಹೊರತಾಗಿ ಹೊಸದೇನೂ ಇಲ್ಲ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ನಗರಕ್ಕೆ ನೀಡಿರುವ ಲೋಕೋಪಯೋಗಿ ರಸ್ತೆಯ ಬಗ್ಗೆಯೂ ನಾವು ಹೇಳಬೇಕಾಗುತ್ತದೆ. ಈಗ ಇಲ್ಲಿ ಲೋಕೋಪಯೋಗಿ ಮಂತ್ರಿಗಳು ಇಲ್ಲ. ರೇವಣ್ಣನವರು 3 ವರ್ಷ 6 ತಿಂಗಳಲ್ಲಿ

ಮಾಡಿರುವ ಕಡತಗಳನ್ನು ಹುಡುಕುವುದಕ್ಕೆ ಅವರು ಹೋಗಿದ್ದಾರೆ. ಅವರಿಗೆ ಬೇಕಾದರೆ ಕಡತವನ್ನು ನಾನು ಕಳುಹಿಸಿ ಕೊಡುತ್ತೇನೆ. ಅವರೇಕೆ ಅಷ್ಟೊಂದು ಹುಡುಕುವುದಕ್ಕೆ ಹೋಗಬೇಕು? ಲೋಕೋಪಯೋಗಿ ಇಲಾಖೆಯಲ್ಲಿ ಬೆಂಗಳೂರು ನಗರಕ್ಕೆ ಏನೇನು ಆಗಿದೆ ಎನ್ನುವುದನ್ನು ನಾನು ಹೇಳಬೇಕಾಗುತ್ತದೆ. ಒಂದು ಕಡೆ ಕೆ.ಇ.ಬಿ.ಗೆ 2.570 ಕೋಟಿಗಳನ್ನು ಬೆಂಗಳೂರು ನಗರಕ್ಕೆ ಇಂಧನ ಇಲಾಖೆಯ ಸಚಿವನಾಗಿ ಕೊಟ್ಟಂಥ ಕೊಡುಗೆಯಾದರೆ. ಇನ್ನೊಂದು ಕಡೆ ಕುಮಾರಸ್ವಾಮಿಯವರು ಕೊಟ್ಟಿರುವದನ್ನೂ ಹೇಳಿದ್ದೇನೆ. ಬೆಂಗಳೂರು ನಗರಕ್ಕೆ ಲೋಕೋಪಯೋಗಿ ಇಲಾಖೆಯಲ್ಲಿ ಕಳೆದ ಹತ್ತಾರು ವರ್ಷಗಳಲ್ಲಿ ಏನಾಗಿತ್ತು. ಇವತ್ತು ಬೆಂಗಳೂರು ನಗರದ ಜನತೆಗೆ ಏನು ಕೊಟ್ಟಿದ್ದಾರೆ ಎನ್ನುವುದನ್ನು ಅವರು ಸದನದಲ್ಲಿ ತಿಳಿಸಲಿ. ನಾನು 3 ವರ್ಷ 6 ತಿಂಗಳಲ್ಲಿ ಏನು ಮಾಡಿದ್ದೇನೆ ಎನ್ನುವುದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು ನಗರದ ಸುತ್ತಮುತ್ತ 46 ರಸ್ತೆಗಳಿಗೆ ಸುಮಾರು 1.004 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇವತ್ತೇನಾದರೂ ಆ ರಸ್ತೆಗಳನ್ನು ಮಾಡಬೇಕಾದರೆ ಒಂದೂವರೆ ಸಾವಿರ ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಟಾರ್ ರೇಟ್ ಇವುಗಳನ್ನೆಲ್ಲ ನಾವು ಲೆಕ್ಕ ಹಾಕಿದರೆ ಇವತ್ತು ಒಂದೂವರೆ ಸಾವಿರ ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಸರ್ಕಾರದ ಕಾಳಜಿ ಏನಿತ್ತು. ನಾವೇನು ಮಾಡಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಲೋಕಾಯುಕ್ತಕ್ಕೂ ಅರ್ಜಿ ಬರೆದಿದ್ದಾರೆ. ಲೋಕಾಯುಕ್ತದಲ್ಲೂ ತನಿಖೆಯಾಗಿ ಏನೂ ಇಲ್ಲ ಎಂದು ಆದರೂ. ಇನ್ನೊಂದು ಸಾರಿ ಹುಡುಕುವುದಕ್ಕೆ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಯವರು ಕಷ್ಟಪಡುತ್ತಿದ್ದಾರೆ. ಅವರು ನನ್ನ ಬಗ್ಗೆ ತನಿಖೆ ಮಾಡುವುದಕ್ಕೆ ಹಗಲು ರಾತ್ರಿ ಕಷ್ಟ ಪಡುತ್ತಿದ್ದಾರೆ. ಮಾಡಲಿ. ನನ್ನದೇನೂ ಅಭ್ಯಂತರವಿಲ್ಲ. ನಾನು, ದೇವೇಗೌಡರು, ಕುಮಾರಸ್ವಾಮಿಯವರು ಹೀಗೆ ನಾವೆಲ್ಲಾ ಸಿ.ಓ.ಡಿ. ಲೋಕಾಯುಕ್ತ, ಹೈಕೋರ್ಟು ಎಲ್ಲವನ್ನು ಎದುರಿಸಿ ಬಂದಿರುವವರು. ನಾವೇನು ಹಿಂದುಗಡೆ ಬಾಗಿಲಿನಿಂದ ಹಾಗೇ ಬಂದಿಲ್ಲ. ಯಾರಾದರೂ ಅಧಿಕಾರಿಗಳಿಗೆ ಹೆದರಿಕೊಂಡು ನಾವು ಕುಳಿತುಕೊಳ್ಳುವುದಾದರೆ ನಾವು ಮನೆ ಸೇರಿಕೊಳ್ಳಬೇಕಾಗುತ್ತದೆ. ಅದನ್ನೂ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಲ್ಕು ಸಂಪರ್ಕ ರಸ್ತೆಗಳನ್ನು 130 ಕೋಟಿ ರೂಪಾಯಿಗಳಲ್ಲಿ ಮಾಡಲಾಗಿದೆಯಲ್ಲ. ಅದನ್ನು ಯಾರ ಕಾಲದಲ್ಲಿ ಮಾಡಿದ್ದು? ಅದಲ್ಲದೇ. ಸುಮಾರು 144 ಕೋಟಿ ರೂಪಾಯಿಗಳಲ್ಲಿ Electronic cityಗೆ 12 ರಸ್ತೆಗಳನ್ನು improvement ಮಾಡಿದ್ದೇವೆ. ಇದನ್ನು ಯಾರು ಮಾಡಿದ್ದು? ಅದೇ ರೀತಿ. ಬೆಂಗಳೂರು

ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 1.100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು ಯಾರು ಸ್ವಾಮಿ? ಇದನ್ನು ಈಗ budjet ಬುಕ್ಕಿನಲ್ಲಿ ಹಾಕಿದ್ದಾರಲ್ಲ. ಇದನ್ನು ಯಾರ ಕಾಲದಲ್ಲಿ ಮಾಡಿದ್ದು. ಇದನ್ನು ನಾನು ಲೋಕೋಪಯೋಗಿ ಇಲಾಖೆಯಿಂದ ಮಾಡಿ. tender ಕರೆಯುವ ಹಂತದಲ್ಲಿದ್ದು. ಇದನ್ನು B.O.T. ಆಧಾರದ ಮೇಲೆ ಇದನ್ನು tender ಕರೆಯುವುದು. ಇದಕ್ಕೆ ರಾಜ್ಯ ಸರ್ಕಾರವೇನು ದುಡ್ಡು ಹಾಕುವುದಿಲ್ಲ. B.O.T. ಆಧಾರದ ಮೇಲೆ ಇದನ್ನು tender ಕರೆಯುವ ಹಂತದಲ್ಲಿದ್ದಾಗ. ರಾಜ್ಯಪಾಲರ ಆಳ್ವಿಕೆಯ ಕಾಲದಲ್ಲಿ ಇದನ್ನು N.H.Authorityಗೆ ಕೊಟ್ಟರು. ಇದಕ್ಕೆ tender ಕರೆದು land acquisition ಎಲ್ಲಾ ಈಗಾಗಲೇ ಆಗಿದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಈ ಸೌಕರ್ಯವನ್ನು ಯಾರು ಮಾಡಿದ್ದು ಸ್ವಾಮಿ? ಹಿಂದೆ ಏಕೆ ಮಾಡಲಿಲ್ಲ? ಇದನ್ನು ರೇವಣ P.W.D. minister ಆಗಿದ್ದಾಗಲೇ ಮಾಡಿದ್ದು ಎನ್ನುವುದನ್ನು ಇವತ್ತು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಅದಲ್ಲದೇ. ಮೈಸೂರು ಬೆಂಗಳೂರು 4 lane ರಸ್ತೆಗೆ ನಾನು ಮಂತ್ರಿಯಾಗಿ ಬರುವುದಕ್ಕೆ 15 ದಿವಸಗಳ ಮುಂಚೆ ಕೆಲಸ ಪ್ರಾರಂಭವಾಗಿತ್ತು. ಎಸ್.ಎಂ.ಕೃಷ್ಣರವರು ಈಗ ಈ ಸದನದಲ್ಲಿ ಇಲ್ಲ. ಅವರನ್ನು ಈ ಸಂದರ್ಭದಲ್ಲಿ ನಾವು ನೆನೆಯಬೇಕಾಗುತ್ತದೆ. ಯಾರ್‍ಯಾರು ಕೆಲಸ ಮಾಡಿದ್ದಾರೆ. ಅವರನ್ನು ನಾವು ನೆನೆಯಬೇಕಾಗುತ್ತದೆ. ಅದನ್ನು ನಾನು ಹಿಂದುಗಡೆ. ಮುಂದುಗಡೆ ಹೇಳುವಂಥ ಪ್ರಮೇಯವಿಲ್ಲ.

ಶ್ರೀ ಎಂ. ಶ್ರೀನಿವಾಸ್ : ಜೆ.ಹೆಚ್. ಪಟೇಲರು ಮುಖಮಂತ್ರಿಯಾಗಿದ್ದಾಗ ಅದಕ್ಕೆ ಪೂಜೆ ಮಾಡಿದ್ದು.

ಶ್ರೀ ಹೆಚ್.ಡಿ. ರೇವಣ್ಣ : ಇವರು ಜೆ.ಹೆಚ್. ಪಟೇಲ್. ವಾಜಪೇಯಿಯವರ ಭಜನೆ ಮಾಡುವುದಿದ್ದರೆ ಹಾರ್ಮೋನಿಯಂ. ತಬಲ ತೆಗೆದುಕೊಡುತ್ತೇವೆ. ಭಜನೆ ಮಾಡಲಿ.

ಶ್ರೀ ಎಂ. ಶ್ರೀನಿವಾಸ್ ; ಜೆ.ಹೆಚ್. ಪಟೇಲರು ನಿಮ್ಮ ಜೊತೆಯಲ್ಲೇ ಇದ್ದವರು. ನೀವು P.W.D minister ಆಗಿದ್ದಾಗ 3 ಕಿ.ಮೀ. ರೋಡ್ ಆಗಬೇಕೆಂದು ನಾನು 2 ತಿಂಗಳು ಸುತ್ತಿದರೂ ನೀವು ಮಾಡಲಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ ; ಅಧ್ಯಕ್ಷರೆ. ಅವರು ಸ್ವಲ್ಪ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆ ಚೇರ್‌ಗೆ plaster ಆದರೂ ಹಾಕಿ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೆ. ರೇವಣ್ಣನವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಲೋಕೋಪಯೋಗಿ ಬಗ್ಗೆ. ಇಂಧನದ

ಬಗ್ಗೆ ಬಹಳ ಸವಿಸ್ತಾರವಾಗಿ ಮಾತನಾಡುತ್ತಿದ್ದಾರೆ. ಆದರೆ ಅವರು ಕೆಲವನ್ನು ಬಿಟ್ಟಿದ್ದಾರೆ. ಅದನ್ನೂ ಅವರು ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ : ನಾನು ಹೇಳುವುದನ್ನು ಕೇಳಿ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ನಾನು ನಿಮ್ಮ ಪರವಾಗಿಯೇ ಮಾತನಾಡುತ್ತಿದ್ದೇನೆ ನಿಮ್ಮನ್ನು ಹೊಗಳುತ್ತಿದ್ದೇನೆ.

ಛೇರ್ಮನ್ (ಯೋಗೀಶ್ ಭಟ್) : ಆಯಿತು. ಚಿಕ್ಕಣ್ಣನವರೇ. ನೀವು ಕುಳಿತುಕೊಳ್ಳಿ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಅವರು ರಸ್ತೆ ಬಗ್ಗೆ. ಬೆಂಗಳೂರಿನ ಬಗ್ಗೆ ಸವಿಸ್ತಾರವಾಗಿ ಮಾತನಾಡುತ್ತಿದ್ದಾರೆ. ಅವರ ಸರ್ಕಾರವಿದ್ದಾಗ ಕುಮಾರಸ್ವಾಮಿಯವರು ಗ್ರಾಮ ವಾಸ್ತವ್ಯವನ್ನು ಮಾಡಿದರು. ಅದನ್ನು ಮಾಡಿ ಎಷ್ಟು improve ಮಾಡಿದರು ಎನ್ನುವುದನ್ನು ದಯಮಾಡಿ ಅವರು ಹೇಳಬೇಕು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಹೇಳುತ್ತೇನೆ.....

(ಗೊಂದಲ)

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ದಯಮಾಡಿ ಅಧ್ಯಕ್ಷರೆ, ಒಂದು ನಿಮಿಷ ಅವಕಾಶ ಕೊಡಿ, ತಾವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಬಡ ಕೂಲಿ ಕಾರ್ಮಿಕರಿಗೆ ತಾವು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ತಾವು ಲೋಕೋಪಯೋಗಿ ಸಚಿವರಾಗಿದ್ದಾಗ. ಇಂಧನ ಸಚಿವರಾಗಿದ್ದಾಗ.....

(ಗೊಂದಲ)

ಶ್ರೀ ಶಿವಲಿಂಗೇಗೌಡ : ಮುಂಗಡ ಪತ್ರದ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ 2007–08ರಲ್ಲಿ ಏನಾಗಿದೆ. 2008–09ರಲ್ಲಿ ಇವರು ಯಾವ ರೀತಿ ಪ್ರಾಧಾನ್ಯತೆ ಕೊಟ್ಟಿದ್ದಾರೆ ಎನ್ನತಕ್ಕಂಥದ್ದನ್ನು ಅವರು ತುಲನೆ ಮಾಡಿ ಮಾತನಾಡುತ್ತಿದ್ದಾರೆ. 2007–08ರಲ್ಲಿ ನಾವು ಯಾವ ರೀತಿ ರಾಜ್ಯದ ಜನತೆಗೆ ಪ್ರಾಧಾನ್ಯತೆ ಕೊಟ್ಟಿದ್ದೆವು. ಈಗ 2008–09ರಲ್ಲಿ ಯಾವ ಯಾವ ಇಲಾಖೆಯಲ್ಲಿ ಏನೇನು ಪ್ರಾಧಾನ್ಯತೆ ಕೊಟ್ಟಿದ್ದಾರೆ ಎನ್ನತಕ್ಕಂಥ ವಿಚಾರದ ಬಗ್ಗೆ example ಅನ್ನು ಕೊಟ್ಟುಕೊಂಡು. ನನ್ನ ಕಾಲದಲ್ಲಿ ಏನು ಮಾಡಿದ್ದೆ. ಇವತ್ತು ಇವರು ಏನು ಭರವಸೆ

ಕೊಡುತ್ತಿದ್ದಾರೆ. ಯಾವ ರೀತಿ ಇದೆ ಎನ್ನತಕ್ಕಂಥ ಒಂದು ಚಿತ್ರಣವನ್ನು ನೀಡುತ್ತಿದ್ದಾರೆ. ಅದನ್ನು ಯಡಿಯೂರಪ್ಪನವರು ಕುಮಾರಸ್ವಾಮಿಯರು ಒಟ್ಟಿಗೆ ಮಾಡಿದರು ಎಂದು ಈ ದೇಶಕ್ಕೆ ಗೊತ್ತು. ಇವತ್ತು ಅವರು ಆಡಳಿತ ಪಕ್ಷದಲ್ಲಿದ್ದಾರೆ. ಹಾಗಾಗಿ. ಇವತ್ತು ಅವರು ಅದರ ಉಚ್ಚಾಟಣೆಯನ್ನು ಸ್ವಲ್ಪ ಮಾಡಬಹುದು. ಅವತ್ತು ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳು. ಯಾರು ಏನೇ ಮಾಡಿದರೂ ಮುಖ್ಯಮಂತ್ರಿ ಈ ಸದನದಲ್ಲಿ supreme ಎನ್ನುವುದು ಎಲ್ಲರಿಗೂ ಗೊತ್ತು. ಯಾರಾದರೂ ಹಣಕಾಸಿನ ಮಂತ್ರಿಯಾಗಿರಬಹುದು ಅಥವಾ ಯಾರು ಏನಾದರೂ ಆಗಿರಬಹುದು. ಆದರೆ ಮುಖ್ಯಮಂತ್ರಿಗಳ ನಿರ್ಣಯ ಇಲ್ಲದೇ ಯಾವುದೂ. ಏನೂ ಆಗುವುದಿಲ್ಲ ಎನ್ನತಕ್ಕಂಥದ್ದನ್ನು ಈ ಸದನದಲ್ಲಿ ಎಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ. ಆವತ್ತು ಮುಖ್ಯಮಂತ್ರಿಗಳಾಗಿದ್ದ ಕುಮಾರಸ್ವಾಮಿಯವರು ಏನೇ ನಿರ್ಣಯ ತೆಗೆದುಕೊಂಡಿದ್ದಾರೋ ಅದನ್ನು ಅವರು ಸವಿಸ್ತಾರವಾಗಿ ಹೇಳುತ್ತಿದ್ದಾರೆ. ಮಾನ್ಯ ಯಡಿಯೂರಪ್ಪನವರ ಸಹಕಾರವೂ ಅದರಲ್ಲಿದೆ. ಇಲ್ಲ ಎಂದು ಯಾರೂ ಹೇಳುವುದಿಲ್ಲ. ಆದ್ದರಿಂದ. ನಾವು ಏನೇನು ಮಾಡಿದ್ದೇವೆ ಎಂದು ಅವರು ಹೇಳುತ್ತಿದ್ದಾರೆ. ಇಲ್ಲಿ ಕುಳಿತುಕೊಂಡು. ರೇವಣ್ಣನವರು ಎಲ್ಲ ಹಾಸನಕ್ಕೆ ಹೊತ್ತುಕೊಂಡು ಹೋದರು. ರೇವಣ್ಣನವರು ತಮ್ಮ ಜಿಲ್ಲೆಗೆ ಹೊತ್ತುಕೊಂಡು ಹೋದರು ಎಂದರೆ ಅದಲ್ಲ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಎರಡು ನಿಮಿಷ ಅವಕಾಶ ಕೊಡಿ ಅಧ್ಯಕ್ಷರೆ ಹೇಳುತ್ತೇನೆ.

ಛೇರ್ಮನ್ : ಸಾಕು ಚಿಕ್ಕಣ್ಣನವರೇ. ರವಿಯವರು ಏನೋ ಹೇಳುತ್ತಾರೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ. ಜೆ.ಹೆಚ್. ಪಟೇಲರು ಒಂದು ಮಠದ ಹೋರಿಯ ಕಥೆ ಹೇಳುತ್ತಿದ್ದರಂತೆ. ಬಿ.ಜೆ.ಪಿ. ಜನತಾದಳ ಸಮ್ಮಿಶ್ರ ಸರ್ಕಾರದ ಸಂದರ್ಭದಲ್ಲಿ ರೇವಣ್ಣನವರು ಆ ಮಠದ ಹೋರಿ ಪಾತ್ರವನ್ನೇ ವಹಿಸಿದ್ದರು. ಮಠದ ಹೋರಿ ಏನು ಮಾಡುತ್ತಿತ್ತು.

ಶ್ರೀ ಹೆಚ್.ಡಿ. ರೇವಣ್ಣ ; ರವಿಯವರೇ. ಒಂದು ನಿಮಿಷ ಕೇಳಿ.

ಶ್ರೀ ಸಿ.ಟಿ. ರವಿ : ಜೆ.ಹೆಚ್. ಪಟೇಲರ ಕಥೆಯನ್ನು ಹೇಳುತ್ತಿದ್ದೇನೆ ನಾನು. ಅದನ್ನು ತಾವು ಕೇಳಲೇ ಇಲ್ಲವಲ್ಲ.

(ಗೊಂದಲ)

ಛೇರ್ಮನ್ : ರವಿಯವರೇ. ಇಲ್ಲಿ ಅದರ ಬಗ್ಗೆ ಚರ್ಚೆ ಬೇಡ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ....... ನನ್ನ ಮಾತನ್ನೇ ಕೇಳುತ್ತಿಲ್ಲವಲ್ಲ ನೀವು.

(ಗೊಂದಲ)

ಶ್ರೀ ಸಿ.ಟಿ. ರವಿ : ಅಧ್ಯಕ್ಷರೆ. ನಾನು ಇನ್ನೂ ಕಥೆಯನ್ನು ಹೇಳೇ ಇಲ್ಲ.

ಛೇರ್ಮನ್ : ಕಥೆ ಬೇಡ ರವಿ. ನೀವು ಹೇಳುವ points ಗೊತ್ತಾಯಿತು. ಕುಳಿತುಕೊಳ್ಳಿ.

ಶ್ರೀ ಸಿ.ಟಿ ರವಿ : ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿಯವರು supreme. ಆದರೆ ಮಠದ ಹೋರಿ ಕೆಲಸ ಮಾಡುವುದಕ್ಕೆ ಬಿಡುತ್ತಿರಲಿಲ್ಲ. ಪರಿಸ್ಥಿತಿ ಹಾಗೆ ಆಗಿತ್ತು.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಮಾತನಾಡುವಾಗ ಅವರು ಹೇಳಿಬಿಡಲಿ....

ಅಧ್ಯಕ್ಷರು : ಅವರು ಹೇಳುತ್ತಾರೆ. ತಾವು ಕುಳಿತುಕೊಳ್ಳಿ

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಅವರು ಇಂಧನ ಸಚಿವರಾಗಿದ್ದಾಗ. ಲೋಕೋಪಯೋಗಿ ಸಚಿವರಾಗಿದ್ದಾಗ ಕರ್ನಾಟಕದಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಮುಖ್ಯಮಂತ್ರಿಗಳ ಮುಖಾಂತರ ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಇಂಧನ ಸಚಿವರಾಗಿದ್ದಾಗ ಕೆ.ಇ.ಬಿ.ಗೆ ಲೈನ್‌ಮೆನ್‌ಗಳನ್ನು ತುಂಬಿಕೊಂಡಿದ್ದಾರೆ. ಯಾವ ಭಾಗದವರನ್ನು ತುಂಬಿಕೊಂಡಿದ್ದಾರೆ ಎನ್ನುವುದನ್ನು ಅವರು ಸ್ಪಷ್ಟವಾಗಿ ಹೇಳಿಬಿಡಲಿ. ಎಷ್ಟು ಜನರಿಗೆ. ಯಾವ ಭಾಗದವರಿಗೆ ಕೊಟ್ಟಿದ್ದಾರೆ ಎನ್ನುವುದನ್ನು ಅವರು ದಯಮಾಡಿ ಹೇಳಲಿ.

ಅಧ್ಯಕ್ಷರು : ಸರಿ. ತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗ ಸರ್ಕಾರವನ್ನು ಪೂರ್ತಿಯಾಗಿ ಅವರ ಕೈಗೆ ಕೊಟ್ಟಿದ್ದೇವೆ. ಅವರ ಇಂಧನ ಸಚಿವರು ಅದನ್ನು ಹೇಳಬೇಕು. ಅವರು ಅವರ ಇಂಧನ ಸಚಿವರನ್ನು ಕೇಳಬೇಕು. ಅದನ್ನು ಬಿಟ್ಟು ನಮ್ಮನ್ನೇ ಕೇಳಿದರೆ ಹೇಗೆ? ವಿರೋಧ ಪಕ್ಷದಲ್ಲಿರುವವರನ್ನೇ ಕೇಳಿದರೆ ಹೇಗೆ?

(ಗೊಂದಲ)

ಛೇರ್ಮನ್ : ಚಿಕ್ಕಣ್ಣನವರೇ ಕುಳಿತುಕೊಳ್ಳಿ ಸಾಕು.

(ಗೊಂದಲ)

ಛೇರ್ಮನ್ : ಈಗ ರೇವಣ್ಣನವರು ಮಾತನಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ. ರೇವಣ್ಣನವರು ಮಾತನಾಡಲಿ.

(ಗೊಂದಲ)

ಛೇರ್ಮನ್ : ರೇವಣ್ಣನವರು ಮಾತನಾಡುತ್ತಿದ್ದಾರೆ ತಾವು ಕುಳಿತುಕೊಳ್ಳಿ. ರೇವಣ್ಣನವರು ಮಾತನಾಡಲಿ. (ಗೊಂದಲ) ಶ್ರೀನಿವಾಸ್ ಕುಳಿತುಕೊಳ್ಳಿ. (ಗೊಂದಲ) ಚಿಕ್ಕನಗೌಡ್ರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ರಮಾನಾಥ ರೈ : ಸದನವನ್ನು ನಿಯಂತ್ರಣಕ್ಕೆ ತರಬೇಕು. ಹೀಗೆ ಎಲ್ಲರೂ ಮಾತನಾಡಿದರೆ ಹೇಗೆ?

ಛೇರ್ಮನ್ : ತಾವೆಲ್ಲ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಿ.ಎ. ನರೇಂದ್ರ ಸ್ವಾಮಿ : ನಾನು ಜವಾಬ್ದಾರಿಯಿಂದ ಮಾತನಾಡುವುದಾದರೆ. ಕಳೆದ ಸಾಲಿನಲ್ಲಿ ನನ್ನ ಕ್ಷೇತ್ರದಲ್ಲಿ...

(ಗೊಂದಲ)

ಛೇರ್ಮನ್ : ಶ್ರೀನಿವಾಸ್. ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ನೀವು ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಟ್ಟಿಲ್ಲ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ನಾನು ಬಿಡಿಎನಲ್ಲಿ 6 ವರ್ಷ ಸದಸ್ಯನಾಗಿದ್ದೆ. ಆಗ in first time 1986 ರಲ್ಲಿ ring road ಆಗಿದೆ. ಸನ್ಮಾನ್ಯ ದೇವೇಗೌಡರವರು ಇದ್ದರು. (ಗೊಂದಲ) ಅವರು ಎಷ್ಟೋ ಸಲ ನಾನು ಮಾಡಿದ್ದನ್ನು ಸ್ವಾಗತ ಮಾಡಿದ್ದಾರೆ. ಅದರ ಬಗ್ಗೆ ನಾನು ಬೆಳಕು ಚೆಲ್ಲುತ್ತೇನೆ.

(ಗೊಂದಲ)

ಛೇರ್ಮನ್ : ನಿಮಗೆ ಅವಕಾಶ ಕೊಟ್ಟಿಲ್ಲ ಕುಳಿತುಕೊಳ್ಳಿ,

ಶ್ರೀ ಎಂ. ಶ್ರೀನಿವಾಸ್ ; ಹಿಂದೆಲ್ಲ ಮಾಡಿದ್ದು ನಾವು. ಮನೆಗೊಂದು ಸೈಟ್ ಕೊಟ್ಟಿದ್ದು ಪ್ರಥಮವಾಗಿ ನಾವೇ ಹೊರತು ಭಾರತ ದೇಶದಲ್ಲಿ ಯಾರೂ ಕೊಟ್ಟಿಲ್ಲ. ನಾನು ಬಿಡಿಎ ಸದಸ್ಯನಾಗಿದ್ದಾಗ ಎಕರೆಗೊಂದು ಸೈಟ್ ಅನ್ನು ರೈತರಿಗೆ ಕೊಟ್ಟಿರುವುದು. ಇದನ್ನು ನಾನು ಸದನಕ್ಕೆ ಹೇಳಬೇಕಾಗಿದೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ನನ್ನ ಕ್ಷೇತ್ರದ ಆಗಿರುವ ಲೋಪದ ಬಗ್ಗೆ ಈಗ ಸಂದರ್ಭ ಬಂದಿರುವುದರಿಂದ ಹೇಳುತ್ತಿದ್ದೇನೆ. ಕಳೆದ ಸಾರಿ gangman ಗಳ ಅನಾಹುತವೇನು ನಡೆದಿದೆ. ಪ್ರತಿ ದಿನ ಸಾವಿರಾರು ಜನ ನನ್ನ ಮುಂದೆ ಆ ನೋವನ್ನು ಹೇಳುತ್ತಿದ್ದಾರೆ. ಕೇವಲ ಹಾಸನ ಜಿಲ್ಲೆಯವರೇ ಅಲ್ಲಿ ನೇಮಕವಾಗಿರುವುದು. ಬಹಳ ಲೋಪವಾಗಿದೆ. ಇದರ ಬಗ್ಗೆ ಸದನ ಗಮನ ಹರಿಸಬೇಕೆಂದು ಈಗ ಸದನದ ಗಮನ ಸೆಳೆಯುತ್ತಿದ್ದೇನೆ.

(ಗೊಂದಲ)

ಛೇರ್ಮನ್ : ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಒಳ್ಳೆಯ ಕೆಲಸ ಮಾಡಿದ್ದನ್ನು ಹೇಳುವುದು ಬೇಡವೇ? ಅವರು ಆತ್ಮಶೋಧನೆ ಮಾಡಿಕೊಂಡು ಹೇಳಲಿ.

(ಗೊಂದಲ)

ಛೇರ್ಮನ್ : ತಾವು ಕುಳಿತುಕೊಳ್ಳಿ. ರೇವಣ್ಣನವರು ಮಾತನಾಡಲಿ. (ಗೊಂದಲ) ಬಾಲಕೃಷ್ಣರವರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗಲೂ ರೇವಣ್ಣನವರು Minister ಎಂದು ನರೇಂದ್ರಸ್ವಾಮಿಯವರು ತಿಳಿದುಕೊಂಡಿದ್ದಾರೆಯೋ ಹೇಗೆ/

ಶ್ರೀ ಹೆಚ್.ಡಿ. ರೇವಣ್ಣ ; ನನಗೆ ಮಾತನಾಡುವುದಕ್ಕೆ ಅವಕಾಶ ಕೊಡದೇ ಹೋದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಈಗ ಏನೋ ಮುಖ್ಯಮಂತ್ರಿಗಳು. ಇಂಧನ ಸಚಿವರಿಗೆ ಏನೋ interest ಬಂದ ಹಾಗಿದೆ. ಇಲ್ಲಿಯವರೆಗೆ interesting ಇರಲಿಲ್ಲ ಸ್ವಾಮಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ನೀವೂ ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ನಮ್ಮ Home Ministej ಇದ್ದರು. ಈಗ ತಾವು ಬಂದಿದ್ದೀರಿ. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನಾನು ಮಾತನಾಡಿದ ಮೇಲೆ ಬಜೆಟ್ ಮೇಲೆ ಆಡಳಿತ ಪಕ್ಷದ ಆ ಸದಸ್ಯರೂ ಮಾತನಾಡಬಹುದು. ಆಗ ರೇವಣ್ಣನವರ ಕಾಲದಲ್ಲಿ ಇಂಧನ ಇಲಾಖೆಯಲ್ಲಿ ಏನೇನು ಮಾಡಿದ್ದಾರೆಂದು ಮಾತನಾಡಬಹುದು. ಹಿಂದಿನ ಭ್ರಷ್ಟಾಚಾರವನ್ನೂ ಹೊರಗೆ ತರುತ್ತೇನೆಂದು ಈಗಾಗಲೇ ಮುಖ್ಯಮಂತ್ರಿಯವರು ದೆಹಲಿಯಲ್ಲಿ ಹೇಳಿದ್ದಾರೆ. ತರಲಿ. ಯಾರು ಬೇಡವೆಂದವರು? 110+ ಇವರೂ ಒಂದು ಕೈ ಎತ್ತಿದ್ದಾರಲ್ಲ. ಜನರು ಪಕ್ಷೇತರರನ್ನಾಗಿ ಚುನಾಯಿಸಿಕೊಟ್ಟ ಮೇಲೆ ನೀವು ಮಂತ್ರಿಗಿರಿಗೆ ಆ ಪಕ್ಷಕ್ಕೆ ಕೈ ಎತ್ತಲಿಲ್ಲವೇ? ನನಗೆ ಮಾತನಾಡುವುದಕ್ಕೆ ಹಕ್ಕಿದೆ. ಮಾತನಾಡುತ್ತೇನೆ ಕುಳಿತುಕೊಳ್ಳಿ. ಆಮೇಲೆ ಮಾತನಾಡೋಣ. ತಾಕತ್ತಿದ್ದರೆ ಭ್ರಷ್ಟಾಚಾರದ ಬಗ್ಗೆ enquiry ಮಾಡಿಸುವುದಕ್ಕೆ ಮುಖ್ಯಮಂತ್ರಿಯವರಿಗೆ ಹೇಳಿ. (ಗೊಂದಲ) ನಾವು ಹೆದರಿಕೊಂಡು ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ರೇವಣ್ಣನವರೆ. ನನಗೆ address ಮಾಡಿ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ ; ಮಂತ್ರಿಗಳಿಗೆ ಹೇಳಿ. ಅವರ ಮಂತ್ರಿಗಳು ಬೇಕಾದರೆ ಉತ್ತರ ಕೊಡಲಿ. ಬೇಕಾದರೆ ಯಾವುದಾದರೂ ತನಿಖೆ ಮಾಡಲಿ. ನಾವೆಲ್ಲ ಸಿದ್ಧವಿದ್ದೇವೆ. ನಾವೇನೂ ಹೆದರಿಕೊಂಡು ಯಾರ ಮನೆಯ ಮುಂದೆಯೂ ಅರ್ಜಿ ಹಿಡಿದುಕೊಂಡು ಹೋಗಿಲ್ಲ.

ಅಧ್ಯಕ್ಷರು : ರೇವಣ್ಣನವರೆ. ನನಗೆ address ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ ; ನಾನು ಇನ್ನೇನು ಹೇಳಿದೆ? ನಾನು 36 ತಿಂಗಳ ಕಾಲ ಇಂಧನ ಇಲಾಖೆ. ಲೋಕೋಪಯೋಗಿ ಇಲಾಖೆ. ಕೆಎಂಎಫ್‌ನಲ್ಲಿ ಅಧಿಕಾರದಲ್ಲಿದ್ದೆ. ನಾನು ಹಿಡಿದುಕೊಂಡಿದ್ದೇನೆಯೇ? ತನಿಖೆ ಮಾಡುವುದಾದರೆ ಮಾಡಲಿ. ಬೇಕಾದರೆ ಲೋಕೋಪಯೋಗಿ ಇಲಾಖೆಯಲ್ಲಿ ಏನೇನು ಮಾಡಿದ್ದೇನೆಂದು ಒಂದು ಪುಸ್ತಕವನ್ನು ನಾನು ಕಳುಹಿಸಿಕೊಡುತ್ತೇನೆ. ಅದರಲ್ಲಿ 5 ವರ್ಷಗಳದ್ದು. ಹಿಂದಿನ ಸರ್ಕಾರದ್ದೂ ಇದೆ. ನನ್ನದೂ ಇದೆ. ಏಕೆಂದರೆ. ಅವರು ಕಾಗದಪತ್ರ ಹುಡುಕುವುದು ಬೇಡ. ಪುಸ್ತಕದಲ್ಲಿ ಎಲ್ಲವನ್ನೂ ನಾನು print ಮಾಡಿಸಿದ್ದೇನೆ.

ಬೇಕಾದರೆ. ತಮಗೆ ಕಳುಹಿಸಿಕೊಡುತ್ತೇನೆ. ಇದನ್ನು ನೀವು ಇಟ್ಟುಕೊಂಡರೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ವಿ. ಮುನಿಯಪ್ಪ ; ಹೊಳೆನರಸೀಪುರದಲ್ಲಿ ಎಷ್ಟು ಖರ್ಚು ಮಾಡಿದ್ದಾರೆ ಎನ್ನುವುದನ್ನು ಹೇಳಲಿ.

ಶ್ರೀ ಹೆಚ್.ಡಿ. ರೇವಣ್ಣ ; ಮುನಿಯಪ್ಪನವರೆ. ಹೊಳೆನರಸೀಪುರದ್ದು ಸೇರಿಸಿ. ಬೇಕಾದರೆ. ಮುನಿಯಪ್ಪನವರು ಹೇಳಿದ ಹಾಗೆ. ನನ್ನ ಮೇಲೆ ಅಷ್ಟೊಂದು ಪ್ರೇಮವಿದ್ದರೆ. ಹೊಳೆನರಸೀಪುರದ್ದೂ ಸೇರಿಸಿ ಮಾಡಲಿ. ಏಕೆಂದರೆ. ಅವರು ಕಾಗದಪತ್ರ ಹುಡುಕುವುದು ಬೇಡ.

(ಗೊಂದಲ)

ಶ್ರೀ ಆರ್. ಧ್ರುವನಾರಾಯಣ : ಅವರು ದಯಮಾಡಿ ಒಪ್ಪಿಕೊಳ್ಳಬೇಕು. ಯಾವುದೇ ಕೆಲಸವಿದ್ದರೂ ಅದನ್ನು ಹಾಸನಕ್ಕೆ ಹಾಕಿಕೊಳ್ಳುವುದು. ಅವರ ಕ್ಷೇತ್ರಕ್ಕೆ ಹಾಕಸಿಕೊಳ್ಳುವುದು ಇದೆ. (ಗೊಂದಲ) ಇದನ್ನು ನೀವು ಒಪ್ಪಿಕೊಳ್ಳಬೇಕು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ ; ಹಿಂದೆ INDUSTRIES MINISTER ಇದ್ದರಲ್ಲ ಪಾಪ ಅವರು ಪುಸ್ತಕದಲ್ಲಿ...

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ದು : ಬಾಲಕೃಷ್ಣರವರೇ ಆ ಪುಸ್ತಕದಲ್ಲಿ ಕಳೆದು ಹೋಗಿದ್ದಾರೆ. ಅದನ್ನು ಹೇಳಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ : ನಮ್ಮದೆಲ್ಲ ಅಚ್ಚು ಹಾಕಿಸಿದರೆ ಆ ಪುಸ್ತಕ ಸಾಲುವುದಿಲ್ಲ. ದೊಡ್ಡ ಪುಸ್ತಕವಾಗುತ್ತದೆ.

(ಗೊಂದಲ)

ಅಧ್ಯಕ್ಷರು : ತಾವು ನೇರವಾಗಿ ಈ ಪೀಠಕ್ಕೆ address ಮಾಡಿ. ಶಾಸಕರಿಗೆ ಏಕೆ ನೇರವಾಗಿ ಹೇಳುವುದಕ್ಕೆ ಹೋಗುತ್ತೀರಿ?

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಇಂಧನ. ಲೋಕೋಪಯೋಗಿ ಇಲಾಖೆಗಳಿರಬಹುದು. ರಾಜ್ಯದ ಜನರ ಹಿತದೃಷ್ಟಿಯಿಂದ ನಾನು ಸದನದ ಗಮನಕ್ಕೆ ತರುತ್ತಿದ್ದೇವೆ. ಈಗ ಇಂಧನ ಇಲಾಖೆಯದ್ದೇ ತೆಗೆದುಕೊಳ್ಳೋಣ. ಬೆಂಗಳೂರು ನಗರಕ್ಕೆ ಸಂಬಂಧಪಟ್ಟಹಾಗೆ ಈ ಸರ್ಕಾರ ಈ ಬಜೆಟ್‌ನಲ್ಲಿ ಹೇಳಿರುವುದೇನೆಂದು ಎಲ್ಲ ಸವಿಸ್ತಾರವಾಗಿ ಗಮನಕ್ಕೆ ತರುತ್ತೇನೆ. 1800 ಕೋಟಿ ರೂಪಾಯಿಗಳು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಚುನಾವಣಾ ದೃಷ್ಟಿಯಿಂದ ಕೇವಲ 300 ಕೋಟಿ ರೂಪಾಯಿಗಳು ಕೊಟ್ಟಿರುವುದನ್ನು ಬಿಟ್ಟರೆ ಹೊಸದಾಗಿ ನೀವು 10 ರೂ. ಸಹ ಕೊಟ್ಟಿಲ್ಲ. ಈ ಸರ್ಕಾರ ಹಳೆಯದಿರುವುದನ್ನೇ ಮುಂದುವರಿಸಿಕೊಂಡು ಹೋಗಿದ್ದಾರೆ ಅನ್ನುವುದು ಬಿಟ್ಟರೆ ಬೇರೇನಿಲ್ಲ. ಹಾಗಾಗಿ. ಪೂರ್ಣವಾಗಿ. ವಿವರವಾಗಿ ಹೇಳಿಕೆ ಕೊಟ್ಟಿದ್ದೇವೆ. ಇದಲ್ಲದೆ. ಇವತ್ತು ಇಂಧನ ಇಲಾಖೆಯ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಎಂ. ಶ್ರೀನಿವಾಸ್ : ನಾವು clarification ಹೇಳಬಾರದೇ? 7 CMCಗೆ 700 ಕೋಟಿ ರೂಪಾಯಿಗಳು ಕೊಟ್ಟರು. ನೀರಾವರಿಗೆ ಅಂದರೆ ಬೋರ್‌ವೆಲ್‌ಗೆ 100 ಕೋಟಿ ರೂಪಾಯಿಗಳು ಕೊಟ್ಟಿದ್ದಾರೆ. ಅದನ್ನು ಹೇಳಬೇಕಲ್ಲವೆ?

ಶ್ರೀ ಹೆಚ್.ಡಿ. ರೇವಣ್ಣ : ಶ್ರೀನಿವಾಸ್‌ರವರೆ. 7 CMC ಗಳಿಗೆ 700 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಅದು ಸರ್ಕಾರದ ಹಣವಲ್ಲ. ಅದು ಬಿಡಿಎ route ನಿಂದ ಬಂದಿರುವುದು. ನೀವು ಸುಮ್ಮನೆ ಏಕೆ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು ; ಶ್ರೀನಿವಾಸ್‌ರವರೆ. please ಕುಳಿತುಕೊಳ್ಳಿ. ಅವರು complete ಮಾಡಲಿ. ನೀವು ಮಾತನಾಡಿ. ಅವರು yield ಆಗಿಲ್ಲ. ಆಮೇಲೆ ನೀವು ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಸರ್ಕಾರ ಉತ್ತರ ಕೊಡಲಿ. ಶ್ರೀನಿವಾಸ್‌ರವರೆ. ನೀವೇಕೆ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು : ಶ್ರೀನಿವಾಸ್‌ರವರೆ. please ಸುಮ್ಮನಿರಿ.

ಶ್ರೀ ಎಂ. ಶ್ರೀನಿವಾಸ್ : ಬೋರ್‌ವೆಲ್‌ಗೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಶ್ರೀನಿವಾಸ್ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ವಿರೋಧ ಪಕ್ಷದ ಸದಸ್ಯರು ಏನು ಮಾತನಾಡುತ್ತಾರೆನ್ನುವುದನ್ನು ಆಡಳಿತ ಪಕ್ಷದ ಸದಸ್ಯರು ಗುರುತು ಹಾಕಿಕೊಳ್ಳಬೇಕು. ಅವರು ಬಜೆಟ್ ಮೇಲೆ ಮಾತನಾಡುವಾಗ ಸ್ವಾಮಿ ಇಂತಿಂಥ ಸುಳ್ಳನ್ನು ಹೇಳಿದ್ದೀರಿ. ನಾವು ಬಜೆಟ್‌ನಲ್ಲಿ ಈ ರೀತಿ ಹೇಳಿದ್ದೇವೆ. ನೀವು ಸುಳ್ಳು ಭಾಷಣ ಮಾಡಿದ್ದೀರಿ ಎಂದು ಹೇಳಲಿ. ನಮ್ಮದೇನು ಅಭ್ಯಂತರವಿಲ್ಲ. ಉದಾಹರಣೆಗೆ ಹೇಳುವುದಾದರೆ. 2005–06ರಲ್ಲಿ KPTCL ಗೆ ಸಹಾಯಧನ ಕೊಡಬೇಕಾಗಿತ್ತು. 5 ಕಂಪನಿಯ ವ್ಯಾಪ್ತಿಯಲ್ಲಿ ಕೆಲಸ ಮಾಡುವುದಕ್ಕೆ ಸಹಾಯಧನ ಕೊಡಬೇಕಾಗಿತ್ತು. ಆ ವರ್ಷ 1587 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 1586.88 ಕೋ.ರೂ. ನಿಗದಿಪಡಿಸಿತ್ತು. 1587 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇ ರೀತಿ 2006–07ರಲ್ಲಿ 1800 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. 1779 ಕೋಟಿ ರೂಪಾಯಿಗಳನ್ನು ಸಹಾಯಧನವನ್ನು ಕೊಟ್ಟಿದ್ದಾರೆ. 2007–08ರಲ್ಲಿ 1800 ಕೋಟಿ ರೂಪಾಯಿಗಳನ್ನು ಇಡಲಾಗಿತ್ತು. ಅದರಲ್ಲಿ subsidy 1400 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಇನ್ನು. IP Set ಗೆ Subsidy ಹಣ ಕೊಟ್ಟಿರುವುದರ ಬಗ್ಗೆ ಹೇಳುವುದಾದರೆ. ಅತಿ ಸಣ್ಣ ರೈತರಿಗೆ ಒಂದು ಯೂನಿಟ್‌ಗೆ 40 ಪೈಸೆ. ದೊಡ್ಡ ರೈತರಿಗೆ 1 ರೂ. per unit ಎಂದು ನಾವು ಇಟ್ಟಿದ್ದೆವು. ಯಾರೂ ಇವತ್ತಿನವರೆಗೂ IP Setನ ಹಣ ಕಟ್ಟಿಲ್ಲ. ಒಬ್ಬರು ಯಾರಾದರೂ ಹಣ ಕಟ್ಟಿರುವುದಿದ್ದರೆ ಅದನ್ನು ಹೇಳುತ್ತೇನೆ. ಇವತ್ತು ರಾಜ್ಯದಲ್ಲಿ IP Set Company Wise ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು BESCOM ನಲ್ಲಿ 6 ಲಕ್ಷದ 15 ಸಾವಿರದ 774 IP Set ಗಳಿವೆ. ಮಂಗಳೂರು ಕಂಪನಿಯಲ್ಲಿ 80 ಸಾವಿರದ 696 IP Set ಗಳಿವೆ. ಚಾಮುಂಡೇಶ್ವರಿ ಕಂಪನಿಯಲ್ಲಿ ಒಂದು ಲಕ್ಷದ 98 ಸಾವಿರ IP Set ಗಳಿವೆ. ಹುಬ್ಬಳ್ಳಿ ಕಂಪನಿಯಲ್ಲಿ 4 ಲಕ್ಷದ 66 ಸಾವಿರ 816 IP Set ಗಳಿವೆ. GESCOM ನಲ್ಲಿ 2 ಲಕ್ಷದ 41 ಸಾವಿರದ 352 IP Set ಗಳಿವೆ. ಇದರಲ್ಲಿ ಇಲ್ಲಿಯವರೆಗೆ ಸುಮಾರು 11 ಲಕ್ಷ ಮಿಲಿಯನ್ ಯೂನಿಟ್ ವಿದ್ಯುತ್ IP Set ಗಳಿಗೆ ಖರ್ಚಾಗುತ್ತದೆ. ಈ 17 ಲಕ್ಷ IP Set ಗಳಿಗೆ ಇಷ್ಟು ಮಿಲಿಯನ್ ಯೂನಿಟ್ ವಿದ್ಯುತ್ ಖರ್ಚಾಗುತ್ತಿದೆ. ಈ 17 ಲಕ್ಷ IP Set ಗಳಲ್ಲಿ ಇವತ್ತು ಮೀಟರ್ ಹಾಕಿಸಿರುವುದು ಕೇವಲ 26%. ಇನ್ನೂ 74% ನಷ್ಟು ಮೀಟರ್ ಹಾಕಿಸಿಲ್ಲ.

ಇದರಲ್ಲಿ BESCOM ನಲ್ಲಿ 7.52 meter ಹಾಕಿಸಿದ್ದಾರೆ. ಅದೇ ರೀತಿ MESCOM ನಲ್ಲಿ 92% ಹಾಕಿಸಿದ್ದಾರೆ. ಇವತ್ತು ಆ ಜನರನ್ನು ನಾನು appreciate ಮಾಡುತ್ತೇನೆ. ಏಕೆಂದರೆ. ಹಿಂದೆ ಮುಂದೆ ಹೇಳುವಂಥದ್ದು ಅಲ್ಲ. ಅದೇ ರೀತಿ ಚಾಮುಂಡೇಶ್ವರಿ ಕಂಪನಿಯಲ್ಲಿ 19.25 % ಮೀಟರ್ ಹಾಕಿಸಿರುವುದು ಇದೆ. HESCOM ನಲ್ಲಿ 36.2% meter ಹಾಕಿಸಿದ್ದಾರೆ. ಅದೇ ರೀತಿಯಲ್ಲಿ GESCOM ನಲ್ಲಿ 13.25% meter ಹಾಕಿಸಿದ್ದಾರೆ. ಇವತ್ತು meter ಹಾಕಿಸಿರುವುದು ಎಷ್ಟಿದೆ. meter ಇಲ್ಲದಿರುವುದು ಎಷ್ಟಿದೆ ಎಂದರೆ. ಸುಮಾರು 4.53.975 ಜನ meter ಹಾಕಿಸಿದ್ದಾರೆ. 12.56.420 ಜನ ಇನ್ನೂ meter ಹಾಕಿಸಿಲ್ಲ. IP Set ಇರುವವರು ಒಟ್ಟು 17.10.000 ಜನ ಇದ್ದಾರೆ. ಇದನ್ನು ಸನ್ಮಾನ್ಯ ಇಂಧನ ಸಚಿವರು 15 ಲಕ್ಷಕ್ಕೆ limit ಮಾಡಿದ್ದಾರೆ. ಬಾಕಿ 2 ಲಕ್ಷದ ಚಿಲ್ಲರೆ Income Tax ಕಟ್ಟುವವರು ಎನ್ನುತ್ತಾರೆ. ಅವರು ಎಷ್ಟಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಅದನ್ನು ಇಂಧನ ಸಚಿವರೇ ತಿಳಿಸಬೇಕಾಗುತ್ತದೆ. ಇದಲ್ಲದೆ ಇವತ್ತು ಇಂಧನ ಇಲಾಖೆಯ ಬಾಕಿ ಬಗ್ಗೆ ಹೇಳುವುದಾದರೆ. ಭಾಗ್ಯಜ್ಯೋತಿಯಿಂದ ಸುಮಾರು 143 ಕೋಟಿ ರೂ. ಬರಬೇಕು. IP Set ನಿಂದ ಸುಮಾರು 2670 ಕೋಟಿ ರೂ. ಬಾಕಿ ಬರಬೇಕು. ಅದೇ ರೀತಿ ನಮ್ಮ ಕೆಲವು GTS and UDD ಯಿಂದ 1108 ಕೋಟಿ ರೂ. ಬಾಕಿ ಬರಬೇಕು ಮತ್ತು other ನಿಂದ 854 ಕೋಟಿ ರೂ. ಬರಬೇಕು. ಸುಮಾರು ಒಟ್ಟು 4775 ಕೋಟಿ ರೂ. ಬರಬೇಕಾಗಿದೆ. ಇಲ್ಲಿಯವರೆಗೆ. KPTCL ನ ಐದೂ ಕಂಪನಿಗಳಿಂದ 4775 ಕೋಟಿ ಹಣ ಬಾಕಿ ಇದೆ ಎನ್ನುವುದನ್ನು ತಮ್ಮ ಗಮನಕ್ಕ ತರುತ್ತಿದ್ದೇನೆ. ಕಳೆದ ಮೂರು ವರ್ಷಗಳಲ್ಲಿ KPTCL ನಲ್ಲಿ ಖರ್ಚು ಮಾಡಿರುವುದು ಏನೆಂಬುದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಏಕೆಂದರೆ. ನಾವು ಕೆಲಸ ಮಾಡದೆ ಸುಮ್ಮನೆ ಕುಳಿತಿದ್ದೆವು ಎನ್ನುವ ಭಾವನೆ ಬರಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೇವಣ್ಣನವರೆ. ಟೀಕೆ ಮಾಡುವುದು ಬಿಟ್ಟು ಬೇರೆ ಹೇಳುತ್ತಿದ್ದೀರಲ್ಲಾ. ಈ ಸರ್ಕಾರ ಏನು ಮಾಡಿದೆ. ಏನು ಮಾಡಿಲ್ಲವೆಂಬುದನ್ನು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಟೀಕೆಯನ್ನೂ ಮಾಡುತ್ತೇನೆ. ಮೊದಲು ನಾನು ಮಾಡಿರುವುದು ಏನು ಎಂಬುದನ್ನು ಹೇಳಿ ನಂತರ ಟೀಕೆ ಮಾಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಏನು ಮಾಡಿದ್ದಾರೆ. ಏನು ಮಾಡಿಲ್ಲವೆನ್ನುವ ಬಗ್ಗೆ ಸರ್ಕಾರ ಉತ್ತರ ಕೊಡುವಾಗ ಹೇಳುತ್ತದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ ; ಆಗಲೇ ರೇವಣ್ಣನವರು ನಿಮ್ಮ ರಕ್ಷಣೆ ಕೇಳಿದರು. ಆಗ ಯಾರೂ ಅವರ ರಕ್ಷಣೆಗೆ ಬರಲಿಲ್ಲ. ಈಗ ಅವರಿಗೆ ಮಂತ್ರಿ ತರಹ ನೀವು ಮಾತನಾಡುತ್ತೀರಿ ಎಂದು ಹೇಳಿದರೆ ಹೇಗೆ? ರೇವಣ್ಣನವರೆ. ನೀವು ಮಾತನಾಡುವುದು ಸರಿ ಇದೆ. ಯಾರಿಗೂ ನೀವೇನೂ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ.

ಶ್ರೀ ಸಿದ್ದರಾಮಯ್ಯ : ರೇವಣ್ಣನವರೇ. ನೀವು ಈ ತರಹ ಹೇಳಿದರೆ ಹೇಗೆ? ಈಗ KPTCL ಎಲ್ಲ ಸರಿಯಾಗಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ : ಅದು ಸರಿಯಿಲ್ಲವೆನ್ನುವುದಕ್ಕೆ ಇದನ್ನೆಲ್ಲ ಹೇಳಿ ನಂತರ ಹೇಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರು ಮಾಡಿರುವುದನ್ನು ಅವರು ಮಾಡಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆಂದು ಹೇಳುತ್ತಿರುವುದು.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ಕುಮಾರಸ್ವಾಮಿಯವರನ್ನು free ಆಗಿ ಬಿಟ್ಟಿದ್ದರೆ ಅವರು ಆಡಳಿತ ಪಕ್ಷದ ಕಡೆಗೆ ಕುಳಿತುಕೊಳ್ಳುತ್ತಿದ್ದರು.

ಶ್ರೀ ಹೆಚ್.ಡಿ. ರೇವಣ್ಣ : ಈಗ ಅದೇನೂ ಬೇಡ. ನಾವೇನೂ ಅಲ್ಲಿ ಕುಳಿತುಕೊಳ್ಳುವುದು ಬೇಡ. ನಾವು ಇಲ್ಲಿಯೇ ಕುಳಿತುಕೊಳ್ಳುತ್ತೇವೆ. ನೀವು ಅದೇನು ಕಡಿದು ಕಟ್ಟಿಹಾಕುತ್ತೀರೋ ಹಾಕಿ. ನಾವು 5 ವರ್ಷ ನೋಡುತ್ತೇವೆ.

ಶ್ರೀ ಎಂ. ಶ್ರೀನಿವಾಸ್ : ನಾವು ಕಡಿದು ಕಟ್ಟೆ ಹಾಕಲಿಕ್ಕೆ ಜನ ನಮ್ಮನ್ನು ಆರಿಸಿ ಕಳುಹಿಸಿರುವುದು.

ಶ್ರೀ ಹೆಚ್.ಡಿ. ರೇವಣ್ಣ ; ಶ್ರೀನಿವಾಸ್‌ರವರು 6 ವರ್ಷ free ಆಗಿ ಮನೆಯಲ್ಲಿದ್ದರು. ಈಗ ಅವರು ಈ ಸದನಕ್ಕೆ ಬಂದಿದ್ದಾರೆ. ಈಗ ಯಡಯೂರಪ್ಪನವರಿಗೆ right hand ಆಗಿ ನಿಂತಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ : ನಾನು ಆಗಲೇ ಹೇಳಿದೆನಲ್ಲ. 2008ರಲ್ಲಿ ಅಂದರೆ ಈಗ ಇಲ್ಲಿ ನಾನು ಕುಳಿತುಕೊಳ್ಳಬೇಕಾದರೆ ಮಾನ್ಯ ಯಡಿಯೂರಪ್ಪನವರೇ ಕಾರಣ. ಶ್ರೀರಾಮ ಕಾಡಿಗೆ ವನವಾಸಕ್ಕೆ ಹೋದ ಹಾಗೆ ನಾನು ಕಳೆದ 6 ವರ್ಷ ವನವಾಸದಲ್ಲಿದ್ದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಶ್ರೀನಿವಾಸ್‌ರವರು ಹೇಳುವುದು ನೋಡಿದರೆ ಅವರಿಗೆ ರೇವಣ್ಣನವರ ಮೇಲೆ ಬಹಳ ಬೇಸರ ಇರುವ ಹಾಗೆ ಕಾಣಿಸುತ್ತದೆ. ರೇವಣ್ಣನವರು ನಿಮಗೆ ಅಧಿಕಾರ ಕೊಡುವುದಕ್ಕೆ ಯಾವತ್ತು ಅಡ್ಡ ಬಂದಿದ್ದಾರೆ ಹೇಳಿ? ನೀವ್ಯಾಕೆ ಬಿಜೆಪಿಯಿಂದ ಓಕೆ ಆಗಿದ್ದವರು ಬಿಜೆಪಿ ಬಿಟ್ಟು ಜೆಡಿಎಸ್‌ಗೆ ಹೋದಿರಿ? ಸುಮ್ಮನೆ ಅಲ್ಲಿಯೇ ಇರಬೇಕಾಗಿತ್ತು.

ಅಧ್ಯಕ್ಷರು : ಈ ರೀತಿ ನೀವು ಪರಸ್ಪರ ಮಾತನಾಡುವ ಹಾಗಿಲ್ಲ. ಶಿವಲಿಂಗೇಗೌಡರೆ. ಕುಳಿತುಕೊಳ್ಳಿ. (ಗೊಂದಲ) ಶ್ರೀನಿವಾಸ್‌ರವರೆ please ಕುಳಿತುಕೊಳ್ಳಿ. (ಗೊಂದಲ) please ಕುಳಿತುಕೊಳ್ಳಿ. (ಗೊಂದಲ) ನೀವು ಪರಸ್ಪರ ಈ ರೀತಿ ಮಾತನಾಡುವ ಹಾಗಿಲ್ಲ (ಗೊಂದಲ) please sit down. (ಗೊಂದಲ) ನೀವು ಈ ರೀತಿ ಪರಸ್ಪರ ಮಾತನಾಡುವ ಹಾಗಿಲ್ಲ. (ಗೊಂದಲ) ಶ್ರೀನಿವಾಸ್. please ಕುಳಿತುಕೊಳ್ಳಿ. (ಗೊಂದಲ) please. please. sit down. (ಗೊಂದಲ) ನೋಡಿ ನಾನು ಎಚ್ಚರಿಕೆ ಕೊಡುತ್ತಿದ್ದೇನೆ. (ಗೊಂದಲ) ರೇವಣ್ಣನವರೆ. ಮುಂದುವರೆಸಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಿದ್ದರಾಮಯ್ಯ ಮತ್ತು ಮಾನ್ಯ ಖರ್ಗೆಯವರು. ನಾನು ಸರ್ಕಾರವನ್ನು ಹೊಗಳುತ್ತಿದ್ದೇನೆಂದು ಹೇಳಿದರು. ಆ ರೀತಿ ಭಾವನೆ ಬರುವುದು ಬೇಡ. ಕಳೆದ ಸರ್ಕಾರದಲ್ಲಿ ನಾನೇನು ಕೆಲಸ ಮಾಡಲಿಲ್ಲವೆಂದು ಹೇಳಿದರಲ್ಲಾ. ಅದಕ್ಕೋಸ್ಕರ ಹೇಳಿದೆ. ಏಕೆಂದರೆ. ಅದನ್ನು ನಾನು ಸದನದ ಗಮನಕ್ಕಾಗಿಯಾದರೂ ಹೇಳಬೇಕಲ್ಲವೇ? ಉದಾಹರಣೆಗೆ ಹೇಳುವುದಾದರೆ. ಕಳೆದ 10 ವರ್ಷಗಳಲ್ಲಿ ಹೈದರಾಬಾದ್-ಕರ್ನಾಟಕದಲ್ಲಿ ಎಷ್ಟು ವಿದ್ಯುತ್ ಉಪ ಕೇಂದ್ರಗಳನ್ನು ತೆರೆದರು? ಅದಕ್ಕೆ ನಾವೇನು ಮಾಡಿದೆವು ಎನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. 2005-06ರಲ್ಲಿ ನಾನೇನು ತಪ್ಪು ಮಾಡಿದ್ದೆ. ಈ ಸರ್ಕಾರ 9 ತಿಂಗಳಿನಿಂದೀಚೆಗೆ ಏನು ಮಾಡಿದೆ? ಒಂದೇ ಒಂದು Sub Station award ಮಾಡುವುದಕ್ಕಾಗಿಲ್ಲ. ಈ 9 ತಿಂಗಳಲ್ಲಿ ನಾನು ಅಧಿಕಾರದಿಂದ ಇಳಿದ ಮೇಲೆ ಒಂದೇ ಒಂದು sub station award ಮಾಡುವುದಕ್ಕಾಗಿಲ್ಲ. ಹೇಳಿ ನೋಡೋಣ? ಹಾಗಾದರೆ. ನಿಮಗೆ

ಪುರುಸೊತ್ತಿಲ್ಲ. ಯಾವ ಪಾರ್ಟಿಯವರನ್ನಾದರೂ ಎಳೆಯುವುದಕ್ಕೆ ನಿಂತಿದ್ದೀರಿ. ಮತ್ತೇಕೆ ಕರೆಂಟ್ ಅಭಾವ ಎಂದು ಹೇಳುವುದಕ್ಕೆ ಹೋಗುತ್ತೀರಿ? 2 ತಿಂಗಳಾಗಲಿ. 6 ತಿಂಗಳಾಗಲಿ ಸರ್ಕಾರ ಸರ್ಕಾರವೇ. ಉದಾಹರಣೆಗೆ ಹೇಳುವುದಾದರೆ. ನಾನು ಅಧಿಕಾರದಲ್ಲಿದ್ದಾಗ 476 station ಮಾಡಿದ್ದೆ. ಅದರಲ್ಲಿ 216 station complete ಮಾಡಿದ್ದೇನೆ. ಅದು ಸುಮಾರು 3624 ಕೋಟಿ ರೂ. ಆಗ ಮಾನ್ಯ ಯಡಿಯೂರಪ್ಪನವರೇ ಹಣಕಾಸಿನ ಮಂತ್ರಿಗಳಾಗಿದ್ದರು. ಇದು ಅವರು ಹಣ ಕೊಟ್ಟಿರುವುದಿಲ್ಲ. ಇದು ಕೇಂದ್ರ ಸರ್ಕಾರದಿಂದ ನಾನು ತಂದಿರುವ ಹಣ ಎಂದು ಹೇಳಬೇಕಾಗುತ್ತದೆ. 476 station ಗೆ ಇವತ್ತು ಒಟ್ಟು ಎಷ್ಟು ಹಣವನ್ನು ನಾವು ವಿನಿಯೋಗ ಮಾಡಿರುವುದೆನ್ನುವುದನ್ನು ಸಭೆಯ ಗಮನಕ್ಕೆ ತರಬೇಕಾಗುತ್ತದೆ. 3674 ಕೋಟಿ ರೂ. 216 station ಗೆ ಇದ್ದರೆ. ನಮ್ಮ ಕಾಲದಲ್ಲಿ 6000 ಚಿಲ್ಲರೆ ಕೋಟಿ ರೂ.ಗಳನ್ನು ನಾವು ಹೊಸ sub station ಗಳನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದಿಂದ ಹಣ ತಂದಿದ್ದೇವೆ. ರಾಜ್ಯ ಸರ್ಕಾರದ ಹಣಕಾಸು ಇಲಾಖೆಯಿಂದ ಏನಾದರೂ 10 ರೂ.ಗಳನ್ನಾದರೂ ಕೊಟ್ಟಿದ್ದಾರೆಯೇ ಹೇಳಲಿ. ಅದಲ್ಲದೆ 29 ಜಿಲ್ಲೆಗಳಿಗೆ ರಾಜೀವ್‌ಗಾಂಧಿ ಯೋಜನೆಗೆ 1200 ಕೋಟಿ ರೂ.ಗಳನ್ನು ತೆಗೆದುಕೊಂಡು ಬಂದೆ. ಸುಮಾರು 60 ಲಕ್ಷದ BPL ಪಟ್ಟಿಯಲ್ಲಿರುವ ಬಡ ಯೋಜನೆಗಳಿಗೆಂದು ಹಣ ತಂದೆ. ಯಾರಾದರೂ ಏನಾದರೂ ಹಣ ಕೊಟ್ಟಿದ್ದರೆ ಹೇಳಲಿ. ಇದು ರಾಜ್ಯ ಸರ್ಕಾರದ ಹಣವೇ? ನಾವೇನೂ ಮಾಡಲಿಲ್ಲ. 3 ವರ್ಷ 6 ತಿಂಗಳು ನಾನು ಇಂಧನ ಸಚಿವನಾಗಿ ಮಜಾ ಮಾಡಿದೆ ಎಂದು ಹೇಳಿದರಲ್ಲಾ. ಆ ಉದ್ದೇಶಕ್ಕಾಗಿ ನಾನು ಹೇಳುತ್ತಿದ್ದೇನೆ. ನಾನು ಹೊಗಳಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದು 2 ತಿಂಗಳಾಯಿತು. ಯಾವುದಾದರೂ ಒಂದು sub station ಮಾಡಿದ್ದಾರೆಯೇ?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ರೇವಣ್ಣನವರೆ, ಮಜಾ ಮಾಡಿದ್ದಾರೆಂದು ಯಾರು ಹೇಳಿದ್ದು.

ಶ್ರೀ ಹೆಚ್.ಡಿ. ರೇವಣ್ಣ : ಮೊನ್ನೆ ನೀವು ಇರಲಿಲ್ಲ. ಅವರು ಹೇಳಿದ್ದಾರೆ. ಡಿ.ಕೆ. ಶಿವಕುಮಾರ್‌ರವರು ಇದ್ದಿದ್ದರೆ ನಾನು ಹೇಳುತ್ತಿದ್ದೆ. ಅವರು ಇಲ್ಲದಿದ್ದಾಗ ಹೇಳಿದರೇ ಏನು ಮಾಡಲಿ?

ಶ್ರೀ ಡಿ.ಕೆ. ಶಿವಕುಮಾರ್ : ಅವರು ಹೇಳುವಾಗಲೆಲ್ಲ ನಿಮ್ಮನ್ನು ಹೊಗಳಿಯೇ ಮಾತನಾಡಿದ್ದಾರೆ. ನೀವೇಕೆ ಗಾಬರಿ ಮಾಡಿಕೊಳ್ಳುತ್ತಿದ್ದೀರಿ?

ಶ್ರೀ ಹೆಚ್.ಡಿ. ರೇವಣ್ಣ ; ಇಲ್ಲ ಸರ್. ಮೊನ್ನೆ ಅವರು ಹೇಳಿದರು ಸರ್.

ಶ್ರೀ ಉಮೇಶ್ ವಿ. ಕತ್ತಿ : ರೇವಣ್ಣನವರು ಏನು ಮಾಡಿದ್ದಾರೋ. ಬಿಟ್ಟಿದ್ದಾರೋ ಅದು ಬೇರೆ ವಿಷಯ. ಆದರೆ. ಅವರು ಮಜಾ ಮಾಡುವುದಕ್ಕಂತೂ ಸಾಧ್ಯವಿಲ್ಲ. ಅದಂತೂ ಹೇಳಬಹುದು.

ಶ್ರೀ ಹೆಚ್.ಡಿ. ರೇವಣ್ಣ : ಅದಿರಲಿ. ಆವತ್ತು ನಾನು ಒಟ್ಟು ಎಷ್ಟು ಖರ್ಚು ಮಾಡಿದ್ದೇವೆನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಸುಮಾರು 6000 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಿದ್ದೇವೆ. Taansmission ನಲ್ಲಿ ಏನು ಮಾಡಿದ್ದೇವೆನುವುದನ್ನು ಹೇಳುತ್ತೇನೆ. 3073 ಕೋಟಿ ರೂ.ಗಳನ್ನು Transmission ನಲ್ಲಿ ಖರ್ಚು ಮಾಡಿದ್ದೇವೆ. ಹಿಂದಿನ ಸರ್ಕಾರ ಏನೂ ಮಾಡಿಲ್ಲ. ಈಗ ನಾವು ಬಂದ ಮೇಲೆ ಇಂಧನ ಇಲಾಖೆ 10 HP ವರೆಗೆ ರೈತರಿಗೆ ಉಚಿತ ಕರೆಂಟ್ ಕೊಡುತ್ತೇವೆಂದು ಬಜೆಟ್ ಪುಸ್ತಕದಲ್ಲಿ ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ : ನೀವು ಮಾಡಿದ್ದೀರೋ ಇಲ್ಲವೋ ನಮಗೆ ಗೊತ್ತಿಲ್ಲ. ಈಗ ನಾವು ಅದನ್ನೆಲ್ಲಾ ಮಾಡಿದೆವು ಮಾಡಿದೆವು ಎಂದು ಹೇಳಿಕೊಂಡರೆ ಅದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ನಂತರ ನೀವು ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕಾಗುತ್ತದೆಯೇ ಅವರು ಸರ್ಕಾರದಲ್ಲಿರುವವರು. ಈಗೇನು ಉತ್ತರ ಕೊಡುತ್ತಾರೋ ಗೊತ್ತಿಲ್ಲ. ನೀವು ಮಂತ್ರಿಯಾಗಿದ್ದಾಗ ಇದನ್ನು ಚರ್ಚೆಗೆ ಇಟ್ಟು ಚರ್ಚೆ ಮಾಡಿ ಎಲ್ಲರಿಗೂ ಹೇಳಿ ಕೇಂದ್ರ ಸರ್ಕಾರಕ್ಕೆ ಶಹಭಾಷ್‌ಗಿರಿ ಕೊಟ್ಟು ಅವರಿಗೆ ಥ್ಯಾಂಕ್ಸ್ ಹೇಳಿದ್ದರೆ ಸರಿಹೋಗುತ್ತಿತ್ತು. ಈಗ ಅವೆಲ್ಲವನ್ನು ಹೇಳಿದರೆ ಏನು ಪ್ರಯೋಜನ?

ಶ್ರೀ ಹೆಚ್.ಡಿ. ರೇವಣ್ಣ : ಚುನಾವಣೆ ಮುಂಚೆ ಹೇಳಬೇಕಾಗಿತ್ತು. ಯಾಕೋ ಮಾನ್ಯ ಸಿದ್ದರಾಮಯ್ಯನವರು ಅದನ್ನು ಅಜೆಂಡಾದಲ್ಲಿ ಸೇರಿಸಲಿಲ್ಲ.

ಶ್ರೀ ಸಿದ್ದರಾಮಯ್ಯ : ಅದನ್ನು ಚರ್ಚೆಗೆ ತೆಗೆದುಕೊಳ್ಳೋಣ. ಮೂರುವರೆ ವರ್ಷದಿಂದಲೂ.

ಶ್ರೀ ಹೆಚ್.ಡಿ. ರೇವಣ್ಣ : ಆಗ ನಿಮಗೆ ಪುರುಸೊತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಯಾವಾಗಲೂ ಚರ್ಚೆ ಮಾಡೋಣ ಎಂದು ಹೇಳಿದರೇ ಹೊರತು ಒಂದು ದಿವಸವೂ ಚರ್ಚೆ ಮಾಡಲೇ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಏನು ಹೇಳುತ್ತೇನೆಂದರೆ, ಅವರು ಹೇಗೆ ಸಂಕಲ್ಪ ಬುಕ್ ಮಾಡಿದರೋ ಅದೇ ರೀತಿ ನೀವು ಬುಕ್ ಮಾಡಿಸಬಹುದಾಗಿತ್ತು. ನಾನೇನು ಬೇಡ ಎಂದಿದ್ದನೇ? ಮಾನ್ಯ ಈಶ್ವರಪ್ಪನವರು ಈಗ ಇಂಧನ ಸಚಿವರಾಗಿ ಎರಡು ತಿಂಗಳಾಯಿತು. ಅವರು ಬಹಳ ಒಳ್ಳೆಯವರು. ಅವರ ಬಗ್ಗೆ ನನಗೇನು ಒಳಗೊಂದು ಹೊರಗೊಂದು ಇಲ್ಲ. ಅವರ ಬಗ್ಗೆ ನನಗೆ ಅಭಿಮಾನವಿದೆ. ಅವರಿಗೆ ಈಗ ಏನಾಗಿದೆ ಎಂದರೆ, ಈಗ ಅವರು ಒಂದು ಹೇಳಿಕೆಯಲ್ಲಿ ಐದು ಸಾವಿರ ಮೆ.ವ್ಯಾ. ವಿದ್ಯುತ್‌ನ್ನು ತರುತ್ತೇವೆಂದು ಹೇಳಿದ್ದಾರೆ. ಮತ್ತು ಅದರ ಜೊತೆಗೆ ಈ ಪುಸ್ತಕದಲ್ಲಿ ಒಂದು ಸಾವಿರ ಮೆ.ವ್ಯಾ. ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತೇವೆಂದು ಹೇಳಿದ್ದಾರೆ. ಹಾಗಾದರೆ ಇವರು ಇದಕ್ಕೆಲ್ಲಿಂದ ಹಣ ತರುತ್ತಾರೆ. ಯಾವ ಮೂಲದಲ್ಲಿ ಇದೆ ಎಂದಾದರೂ ಹೇಳಬೇಕಲ್ಲವೇ? ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಎಷ್ಟು ಹಣ ಬೇಕಾಗುತ್ತದೆ? ಯಾವ ಮೂಲದಿಂದ ಹಣ ತರುತ್ತಿದ್ದೀರಿ? ಇದನ್ನು ಎಲ್ಲಿಯೂ ಹೇಳಿಲ್ಲವಲ್ಲ? ನಿನ್ನೆಯೂ ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ತಿಂಗಳು 20% ಮುಂದಿನ ತಿಂಗಳು 25% ಮಾಡುತ್ತೇವೆಂದು ಹೇಳಿದರು. ಇವತ್ತು ಐದು ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಹೊಸ ಯೋಜನೆ ಹಾಕಿಕೊಂಡಿದ್ದೇವೆಂದು ಹೇಳುತ್ತಾರೆ. ಅದೇ ರೀತಿ ಛತ್ತೀಸ್‌ಘಡ್‌ನಿಂದ ಎರಡು ಸಾವಿರ ಈಗ ನಾಳೆ ಅಥವಾ ನಾಡಿದ್ದರಲ್ಲಿ ಒಂದು ಸಾವಿರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ತಾವು ಅದನ್ನೆಲ್ಲಾ ಹುಡುಕುವುದು ಬೇಡ. ಛತ್ತೀಸ್‌ಘಡ್‌ಕ್ಕೂ ಹೋಗಬೇಡಿ. ಹೊಸ ಯೋಜನೆಗೂ ಹೋಗಬೇಡಿ. ನಾವು ಇದ್ದಾಗ ಉದಾಹರಣೆಗೆ ಹೇಳುವುದಾದರೆ. ಸುಮಾರು ಐದು ಸಾವಿರ ಮೆ.ವ್ಯಾ. ವಿದ್ಯುತ್‌ಗೆ 25 ರಿಂದ 30 ಸಾವಿರ ಕೋಟಿ ಹಣವನ್ನು ಯಾವ ರೀತಿಯಾಗಿ ಮಾಡಬೇಕೆಂದು ಕೆಪಿಸಿಎಲ್ ಸಭೆಯಲ್ಲಿ ತೀರ್ಮಾನ ಮಾಡಿದ್ದೇವೆ. ದಯಮಾಡಿ ಆ ಕಡತವನ್ನು ತೆಗೆದು ನೋಡಿ. ತಾವೇನು ಐದು ಸಾವಿರ ಮೆ.ವ್ಯಾ. ಎಂದು ಘೋಷಣೆ ಮಾಡಿದ್ದೀರಲ್ಲ. ಇದೇನು ತಮ್ಮ ಹೊಸ ಯೋಜನೆಯಲ್ಲ. ಉದಾಹರಣೆಗೆ ಹೇಳುವುದಾದರೆ. ಬಳ್ಳಾರಿಯಲ್ಲಿ ಜಾಗ ಇದೆ. ಬಳ್ಳಾರಿ ಸೆಕೆಂಡ್ ಯೂನಿಟ್ ಏನು ಇದೆ. ಅದು ನಮ್ಮ ಕಾಲದಲ್ಲ ಮಾಡಿದ್ದು. ಅದರ ಎದುರುಗಡೆ ಸುಮಾರು ಆರು ಸಾವಿರ ಕೋಟಿ ರೂಪಾಯಿಗೆ 500 ಮೆ.ವ್ಯಾನ ಎರಡು–ಮೂರು ಘಟಕ ಹಾಕುವುದಕ್ಕೆ ಕೆಪಿಸಿಎಲ್ ಸಭೆಯಲ್ಲಿ ತೀರ್ಮಾನಿಸಿದ್ದೇವೆ. ಅದೇ ರೀತಿ ರಾಯಚೂರಿನಲ್ಲಿ ಜಮೀನು ಎಲ್ಲಾ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಿಂದ

ಎಲ್ಲಾ ಕೊಟ್ಟುಬಿಟ್ಟಿದ್ದೇವೆ. ಅಲ್ಲಿ ಒಂದು ಸಾವಿರ ಮೆ.ವ್ಯಾ. ವಿದ್ಯುತ್‌ನ್ನು ಉತ್ಪಾದಿಸಬಹುದು. ಇದಕ್ಕೆ ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿಗಳಾಗುತ್ತವೆ. ನಾಲ್ಕು ಮತ್ತು ಆರು ಎಲ್ಲಾ ಸೇರಿ ಹತ್ತು ಸಾವಿರ ಕೋಟಿ ರೂಪಾಯಿ ಆಯಿತಲ್ಲವೆ? ಹೀಗಾಗಿ ಹೊಸದಾಗಿ ತಾವೇನು ಮಾಡಬೇಡಿ. ಈಗಾಗಲೇ ಕೆಪಿಸಿಎಲ್‌ನಲ್ಲಿ ಏನು ನಿರ್ಣಯವಾಗಿದೆ. ಅದನ್ನು ತೆಗೆದು ನೋಡಿ. ಅದೇ ರೀತಿ ಬಿಜಾಪುರದ ಕೂಡಗಿಯಲ್ಲಿ ಮೂರು ಸಾವಿರ ಮೆ.ವ್ಯಾ. ಉತ್ಪಾದನೆ ಮಾಡುವುದಕ್ಕೆ ಯೋಜನೆ ನಾವು ಮಾಡಿದ್ದೆವು. ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಯಾವುದು ಕೇಳಿದರೂ ನೀವೇ ಹೇಳಿ ಎಂದು ಹೇಳುತ್ತೀರಿ. ಗೊಬ್ಬರಕ್ಕೆ ಐದುನೂರು ಕೋಟಿ ರೂಪಾಯಿ ಕೊಡುತ್ತೇನೆ. ತೆಗೆದುಕೊಂಡು ಬನ್ನಿ ಎಂದು ಹೇಳುತ್ತೀರಿ. ಕರೆಂಟ್‌ಗೆ ದುಡ್ಡು ಕೊಡುತ್ತೇನೆ. ನೀವೇ ಎಲ್ಲಿದೆ ಹುಡುಕಿಕೊಂಡು ತನ್ನಿ ಎಂದು ಹೇಳುತ್ತೀರಿ. ನಾನು ಅದಕ್ಕೆ ಏನು ಹೇಳುತ್ತೇನೆಂದರೆ. ಈ ರೀತಿಯಾಗಿ ಹಿಂದೆ ಮಾಡಿರುವುದು ಇದೆ ಸ್ವಾಮಿ. ತಾವು ಬೇಕಾದರೆ ಹುಡುಕಿ ಕಡತ ಇಲ್ಲದೇ ಹೋದರೆ ನಾನು ತಮಗೆ ಒಂದು ಸೆಟ್ ಕಳುಹಿಸಿ ಕೊಡುತ್ತೇನೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದಲ್ಲದೇ ಗುಲ್ಬರ್ಗಾದ ಯಾದಗಿರಿಯಲ್ಲಿ ಸುಮಾರು ಎರಡು ಸಾವಿರ ಮೆ.ವ್ಯಾ. ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಎಂಟು ಸಾವಿರ ಕೋಟಿಯ ಪ್ರಾಜೆಕ್ಟ್ ರಿಪೋರ್ಟ್ ಎಲ್ಲಾ ರಡಿ ಇದೆ. ಅದೇ ರೀತಿಯಾಗಿ ಬಳ್ಳಾರಿಯಲ್ಲಿ ಎರಡನೇ ಹಂತ ಡಿಸೆಂಬರ್‌ನಲ್ಲಿ ಆ ಕೆಲಸ ಮುಗಿಯಬೇಕಾಗಿತ್ತು. ಏಕೆ ಆಗಿಲ್ಲ? ಸರ್ಕಾರ ಒಂದು ಎರಡು ತಿಂಗಳಾಯಿತು. ಅದನ್ನು ಓಪನ್ ಮಾಡುವುದಕ್ಕೆ ಯಾರಿಗೋಸ್ಕರ ಕಾಯುತ್ತಿದ್ದೀರಿ? ಒಂದು ಕಡೆ ಕರೆಂಟ್ ಇಲ್ಲವೆಂದು ಹೇಳುತ್ತೀರಿ. ಇನ್ನೊಂದು ಕಡೆ ನೀವು ಓಪನ್ ಮಾಡುವುದಕ್ಕಾಗಿ ಯಾರು ಬರುತ್ತಾರೆಂದು ಕಾಯುತ್ತಿದ್ದೀರಿ. ಓಪನ್ ಬೇಕಾದರೆ ಆಮೇಲೆ ಮಾಡಿಕೊಳ್ಳಿ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ತಕ್ಷಣವೇ ಅದನ್ನು ಮಾಡಿ, ಉದಾಹರಣೆಗೆ ಹೇಳುವುದಾದರೆ, ನಿಮ್ಮ ಹತ್ತಿರ ಕರೆಂಟ್ ಏನು ಇದೆ ಸ್ವಾಮಿ. ಇನ್ನು ಹತ್ತಿಪ್ಪತ್ತು - ಮೂವತ್ತು ದಿವಸಕ್ಕೆ ಹೈಡಲ್‌ದು ಇದೆ. ಕಲ್ಲಿದ್ದಲು ನಾಲ್ಕೈದು ದಿವಸಕ್ಕೆ ಇದೆಯೋ ನನಗೆ ಗೊತ್ತಿಲ್ಲ. ನಿನ್ನೆಯಿಂದ ಸ್ಟಾಕ್ ಬರುತ್ತಿದೆ ಎಂದು ತಾವು ಮೊನ್ನೆ ಹೇಳಿದಿರಿ. ಸರ್ಕಾರ ಇವೆಲ್ಲಾ ಮಾಡದೇ ಹೋದರೆ. ಉದಾಹರಣೆಗೆ ಇವತ್ತು ಗೊಬ್ಬರಕ್ಕೆ ಬರ ಬಂದಿದೆ. ಅದೇ ರೀತಿ ಇಂಧನಕ್ಕೂ ಬರ ಬಂದು ನಾಳೆ ಈ ರಾಜ್ಯವನ್ನು ಕತ್ತಲಿನಲ್ಲಿ ಮುಳುಗಿಸುವಂತಹ ಕಾಲ ಬರುತ್ತದೆ. ಹೀಗಾಗಿ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದಕ್ಕೆ ತಾವು ಅವಕಾಶ ಕೊಡಬೇಡಿ. ಹಿಂದೆ ನಾನು ಹೇಳಿದೆ. ಮಾನ್ಯ ಉಪ ಮುಖ್ಯಮಂತ್ರಿಗಳೇ ಕ್ಯಾಬಿನೆಟ್‌ನಲ್ಲಿ ನಿರ್ಣಯ ಮಾಡಿದರು. ಮಾನ್ಯ

ಈಶ್ವರಪ್ಪನವರು ಇದ್ದರು. ಇನ್ನೊಂದು ಇಪ್ಪತ್ತೈದು ವರ್ಷಕ್ಕೆ ರಾಜ್ಯವನ್ನು ಕತ್ತಲಿನಲ್ಲಿ ಮುಳುಗಿಸುವುದು ಬೇಡ ಎನ್ನುವ ದೃಷ್ಟಿಯಲ್ಲಿ ಹೇಳಿದೆ. ನೀವು ಅಧ್ಯಕ್ಷತೆಯನ್ನು ವಹಿಸಿಕೊಳ್ಳಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ. ಅವರು ಬೇಡ ಎಂದು ಮುಂದಿನ ಎರಡು ಕ್ಯಾಬಿನೆಟ್ ಆದ ತಕ್ಷಣ ಬೇಡಪ್ಪಾ ನನಗೆ ಇದರ ಸಹವಾಸ ಊರೆಲ್ಲಾ ನಾನೇಕೆ ಬಯ್ಯೆಸಿಕೊಳ್ಳಬೇಕೆಂದು ಅವರು ಹೇಳಿದರು. ಈಗ ಏನಾಯಿತು. ಈ ಪುಸ್ತಕದಲ್ಲಿ ಯಾವಾಗ ನೋಡಿದರೂ ಒಂದು ಸಾವಿರ ಮೆ.ವ್ಯಾ. ರೆಡಿ ಇದೆ. ಪಾರ್ಸಲ್ ಬರುತ್ತಿದೆ. ಎಂದು ಹೇಳುವುದರ ಬದಲು ಇದನ್ನು ಮಾಡಿ ಎಂದು ನಾನು ಸದನದ ಗಮನಕ್ಕ ತರುತ್ತಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಹಿಂದಿನ ಕೈಗಾರಿಕೆಯ ಮಂತ್ರಿಗಳಿಗೆ ಈಗ ಅಬಕಾರಿಯ ಖಾತೆ ಕೊಟ್ಟಿದ್ದಾರೆ. ಈಗ ಅವರು ಕೈಗಾರಿಕೆಯಿಂದ ಅಬಕಾರಿಗೆ ಹೋಗಿದ್ದಾರೆ. ಅದಕ್ಕೆ ನಮಗೆ ಸಂತೋಷ. ಏಕೆಂದರೆ, ಅವರು ಕೈಗಾರಿಕೆಯಲ್ಲಿ ಏನೇನು ಕೆಲಸ ಮಾಡಬೇಕೋ ಅದೆಲ್ಲಾ ಸಾಕಷ್ಟು ಅವರ ಕಾಲದಲ್ಲಿ ಈ ರಾಜ್ಯದ ಬೆಳವಣಿಗೆ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಶ್ರೀ ಬಿ.ರಮಾನಾಥ ರೈ : ಕೈಗಾರಿಕೆ ಬೆಳವಣಿಗೆ ಆಗದಿದ್ದರೂ ಅವರಂತೂ ಬೆಳವಣಿಗೆ ಆಗಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ನೀವು ಆಗಿದ್ದಿರಿ.

ಶ್ರೀ ಬಿ.ರಮಾನಾಥ ರೈ : ನಮ್ಮ ಬಗ್ಗೆ ಮಾತನಾಡಬೇಕಾದರೆ ತಾವು ಸಾವಿರ ಸಲ ಯೋಚನೆ ಮಾಡಬೇಕಾಗುತ್ತದೆ. ಗೊತ್ತಾಯಿತೆ?

ಶ್ರೀ ಕಟ್ಟ ಸುಬ್ರಹ್ಮಣ್ಯ ನಾಯ್ಡು : ಒಂದು ಲಕ್ಷ ಇದೆ.

(ಗೊಂದಲ)

ಅಧ್ಯಕ್ಷರು ; ಈಗ ಅದೆಲ್ಲ ಏಕೆ ಮಾತನಾಡುತ್ತೀರಿ ಬಿಡಿ. ನೀವು ಮುಂದುವರಿಸಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ರವಿಯವರೇ. ನೀವು ರೇವಣ್ಣನವರನ್ನು ಬಯ್ಯುವುದಕ್ಕೆ ನಿಮ್ಮನ್ನು ಕಾರ್ಯದರ್ಶಿಯನ್ನಾಗಿ ಮಾಡಿರುವುದು. ಇಲ್ಲದಿದ್ದರೆ ನಿಮ್ಮನ್ನು ಯಾರು ಕಾರ್ಯದರ್ಶಿಯಾಗಿ ಇಟ್ಟುಕೊಳ್ಳುತ್ತಾರೆ. ರೇವಣ್ಣನವರನ್ನು ಬಯ್ಯದೇ ಹೋದರೆ ನಿಮ್ಮನ್ನು ಯಾರು ಕಾರ್ಯದರ್ಶಿಯಾಗಿ ಇಟ್ಟುಕೊಳ್ಳುತ್ತಾರೆ. ನೀವು ಬೇಕಾದರೆ ಅವರನ್ನು ಚಿಕ್ಕಮಗಳೂರಿಗೆ ವಕ್ತಾರರನ್ನಾಗಿ ಮಾಡಿಕೊಳ್ಳಿ ವಿಧಾನ ಸಭೆಗೆ ಮಾನ್ಯ

ಸಭಾಧ್ಯಕ್ಷರು ಇದ್ದಾರೆ. ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳನ್ನು ರವಿಯವರು ಹೊಗಳಲಿ. ಅದಕ್ಕೆ ನಾವೇನು ಬೇಡ ಎನ್ನುವುದಿಲ್ಲ. ಒಳ್ಳೆಯ ಕೆಲಸ ಮಾಡಿದ್ದನ್ನು ಒಳ್ಳೆಯದು ಎಂದು ಹೇಳೋಣ. ಕೆಟ್ಟ ಕೆಲಸ ಮಾಡಿದ್ದರೆ ಕೆಟ್ಟದ್ದು ಎಂದು ಏಕೆ ಹೇಳಬಾರದು? ಉದಾಹರಣೆಗೆ ಹೇಳುವುದಾದರೆ. ಈ ಸರ್ಕಾರ ಹಿಂದುಳಿದ ವರ್ಗಕ್ಕೆ ಏನು ಮಾಡಿದೆ ಎಂದು ತಿಳಿಸಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಕೈಗಾರಿಕೆಯ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ ; ಕೈಗಾರಿಕೆಯ ಬಗ್ಗೆ ಸ್ವಲ್ಪ ಹುಡುಕಿ ಹೇಳಬೇಕು. ಏಕೆಂದರೆ ಅವರು ಏಕೋ ಸ್ವಲ್ಪ ನೋಡುತ್ತೇನೆಂದರಲ್ಲ. ರಮಾನಾಥ ರೈ ಕಡೆಗೆ ನೋಡಿದರು ಅವರು ಇವರನ್ನು ನೋಡಿದರಲ್ಲ ಅದಕ್ಕ ಆಮೇಲೆ ಹೇಳೋಣ ಎಂದು ಸುಮ್ಮನಾದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ನಾವು ಅವರು ಪಾಲುದಾರರಾಗಿ ಕೆಲಸ ಮಾಡಿದ್ದೆವು. ಅವರು ನಾವು ಒಟ್ಟಿಗೆ ಸೇರಿ ಮಾಡಿದ್ದರಿಂದ ಅಭಿವೃದ್ಧಿಯಾಗಿದೆ. ಹೀಗಾಗಿ ಅವರು ಅದರ ಬಗ್ಗೆ ಮಾತನಾಡುವುದಿಲ್ಲ. ತಮಗೆ ಗೊತ್ತಿದೆ ಸಾರ್. ತಮಗೆ ಗೊತ್ತಿಲ್ಲದೆ ಯಾವುದೂ ನಡೆದಿಲ್ಲ. ಅವರಿಗೂ ಗೊತ್ತಿದೆ.. ನಿಮಗೆ ಐದು ವರ್ಷ ಗೊತ್ತಿರಲಿಲ್ಲ.. ರೇವಣ್ಣನವರೇ ಒಳ್ಳೆಯದಾಗಿದೆ ಎಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ ; ಓ.ಕೆ. ಅಣ್ಣಾ. ನೀವು ನಮ್ಮ ಅಣ್ಣನವರು. ಏನು ಹೇಳುತ್ತಾರೆ ಅದನ್ನು ನಾವು ಕೇಳುತ್ತೇವೆ. ನಮ್ಮ ಕೈಗಾರಿಕೆಯ ಸಚಿವರು ಇದ್ದರು. ಅವರ ಕಾಲದಲ್ಲಿ ಒಳ್ಳೊಳ್ಳೆಯ ಕೆಲಸ ಮಾಡಿದ್ದಾರೆ. ಅದನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಏಕೆಂದರೆ. ಕಳೆದ ಸಾಲಿನ ವರದಿಯ ಪ್ರಕಾರ. ಈಗ ಅವರು ಬೆಂಗಳೂರಿಗೆ ನೀರು ಕುಡಿಸುತ್ತಿದ್ದಾರೆ. ರಾಜ್ಯದ ಜನತೆಗೆ ಬೀರು ಕೊಡುತ್ತಿದ್ದಾರೆ. ಏಕೆಂದರೆ. ಇವರು ಬೀರು ಕೊಡುವುದು ಅವರು ನೀರು ಕೊಡುವುದು. ಏಕೆಂದರೆ. ಅವರಿಗೆ ಈಗ ನೀರು. ಬೀರು ಎರಡು ಅವರ ಹತ್ತಿರ ಇದೆ. ಅವರು ಕೈಗಾರಿಕೆ ಬಿಟ್ಟು ಬಿಟ್ಟಿದ್ದಾರೆ. ಬೇಡ. ಈ ಕೈಗಾರಿಕೆಯ ಸಹವಾಸ ಬೇಡ. ಕೈಗಾರಿಕೆಯಲ್ಲಿದ್ದರೆ ಕರೆಂಟ್ ಹೊಡೆಯುತ್ತದೆಂದು ಇಲ್ಲಿಗೆ ಬಂದಿದ್ದಾರೆ. ನೀರಿಗೆ ಯಾವ ಕರೆಂಟ್ ಹೊಡೆಯಲ್ಲ ಅಲ್ಲವೆ ಸಾರ್? ಬೀರಿಗೂ ಕಿಕ್ ಹೊಡೆಯುತ್ತದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ ; ರೇವಣ್ಣನವರಿಗೆ ಕಿಕ್ ಹೊಡೆಯುವುದು ಗೊತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ ; ನಾನು ಒಂದೇ ಒಂದು ಪ್ರಶ್ನೆ ಈ ಸರ್ಕಾರಕ್ಕೆ ಕೇಳುತ್ತೇನೆ. KIADB ನಲ್ಲಿ ಕಾಯ್ದೆ 28 ರ ಪ್ರಾಥಾಮಿಕ ಅನ್ವಯದ ಪ್ರಕಾರ

ಸುಮಾರು 21 ಸಾವಿರ ಎಕರೆ ಜಮೀನು ಅಕ್ವೈರ್ ಮಾಡಿದವರಲ್ಲ. ಅದರಲ್ಲಿ ಅಂತಿಮವಾಗಿ 14 ಸಾವಿರ ಎಕರೆಗೆ ನೀವು ಅಂತಿಮವಾಗಿ ನೋಟೀಸ್ ಕೊಟ್ಟಿದ್ದೀರಿ. ಆ ಅಂತಿಮ ನೋಟೀಸ್‌ನಲ್ಲಿ ಎಷ್ಟು ಎಕರೆ ಬಿಡುಗಡೆ ಮಾಡಿದಿರಿ? ಯಾರ್‍ಯಾರದು ಬಿಡುಗಡೆ ಮಾಡಿದಿರಿ? ಇದರ ಬಗ್ಗೆ ಹೇಳುತ್ತೀರಾ? ಯಾರ್‍ಯಾರು ರಾಜಕಾರಣಿಗಳು ಇದ್ದಾರೆ? ಕುಮಾರಸ್ವಾಮಿಯವರದು ಬಿಡುಗಡೆ ಮಾಡಿದಿರೋ. ರೇವಣ್ಣನವರದು ಬಿಡುಗಡೆ ಮಾಡಿದಿರೋ. ಯಾರದು ಬಿಡುಗಡೆ ಮಾಡಿದ್ದೇವೆಂದು ಹೇಳಿ.

ಶ್ರೀ ಸಿದ್ದರಾಮಯ್ಯ : ಯಾರ್‍ಯಾರದು ಬಿಡುಗಡೆ ಮಾಡಿದ್ದಾರೆನ್ನುವ ಹೆಸರುಗಳನ್ನು ಹೇಳಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ ; ನಾನು ಈ ದಿವಸ ಮಂತ್ರಿಯಾಗಿಲ್ಲ. ನನಗೆ ಎರಡು ನಿಮಿಷ ಅವಕಾಶ ಕೊಡಿ ನಾನು ಹೇಳುತ್ತೇನೆ. ಅದನ್ನು ಅವರು ಹೇಳಲಿ ಎಂದು ನಾನು ಹೇಳುವುದು. ಕೈಗಾರಿಕೆಯ ಬಗ್ಗೆ 2006–2007ರ ವಾರ್ಷಿಕ ವರದಿ ಈಗ ಬಂದಿದೆಯಲ್ಲವೇ? ಅದು ಮಾನ್ಯ ಸಿದ್ದರಾಮಯ್ಯನವರು ಮೀಟಿಂಗ್‌ನಲ್ಲಿ ಹೇಳಿದ ಮೆಲೆ ಮೊನ್ನೆಯಿಂದ ಎಲ್ಲಾ ಇಷ್ಟೊಂದು ಪುಸ್ತಕಗಳು ಬಂದಿವೆ. ನಾವು ಇವುಗಳನ್ನು ಕಾರಿನಲ್ಲಿ ತುಂಬಿಕೊಂಡು ಬರಬೇಕು. ಕಾರಿನಲ್ಲಿ ಜಾಗವಿಲ್ಲ. ಏಕೆಂದರೆ. ತಾವೇ ಮೊನ್ನೆ ಮೀಟಿಂಗ್‌ನಲ್ಲಿ ವಾರ್ಷಿಕ ವರದಿ ಎಲ್ಲಾ ಕಳುಹಿಸಬೇಕೆಂದು ಹೇಳಿದ್ದಕ್ಕೆ ಅವರು ಎಲ್ಲಾ ಕಳುಹಿಸಿಕೊಟ್ಟಿದ್ದಾರೆ. ನೀವು ಹೇಳಿದ ಮೇಲೆ. ಈಗ ವಾರ್ಷಿಕ ವರದಿಗಳು ಒಂದೊಂದು ಇಲಾಖೆಯ ವತಿಯಿಂದ ಬಂದಿವೆ. ಅದಕ್ಕೋಸ್ಕರ ಸರ್ಕಾರದ ಗಮನಕ್ಕೆ ನಾನು ಏನು ತರುತ್ತಿದ್ದೇನೆಂದರೆ. ನಾನು ವಿರೋಧ ಪಕ್ಷದ ಸದಸ್ಯನಾಗಿ ಹೇಳುತ್ತಿದ್ದೇನೆ. 14 ಸಾವಿರ ಎಕರೆ ಜಮೀನಿಗೆ ತಾವು ಅಂತಿಮವಾಗಿ ನೋಟೀಸ್ ಕೊಟ್ಟಿದ್ದೀರಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಹಿಂದೆ ಆಗಿರತಕ್ಕಂಥ ಲೋಪಗಳ ಬಗ್ಗೆ ಮಾನ್ಯ ರೇವಣ್ಣನವರು ಬಹಳ ಚೆನ್ನಾಗಿ ಹೇಳುತ್ತಿದ್ದಾರೆ. ಈ ವಿಷಯಗಳನ್ನು ಹೇಳಿ ನಮಗೆಲ್ಲಾ ಕುತೂಹಲ ಕೆರಳಿಸಿದ್ದಾರೆ. 24 ಸಾವಿರ ಎಕರೆ ಜಮೀನಿಗೆ ನೋಟೀಸ್ ಕೊಟ್ಟು ಅದರಲ್ಲಿ ಎಷ್ಟೋ ಎಕರೆ ಬಿಟ್ಟಿದ್ದಾರೆಂದು ಮತ್ತು ಅದರಲ್ಲಿ ಏನೋ ಆಗಿದೆ ಎಂದು ಮತ್ತು ಅದನ್ನು ಏಕೆ ಬಿಟ್ಟಿರಿ. ಯಾರಿಗೆ ಬಿಟ್ಟಿರಿ. ಯಾರದು ಬಿಟ್ಟರು ಇದೆಲ್ಲಾ ನನಗೆ ಗೊತ್ತಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ. ನಾನು ಕೇಳುವುದೇನೆಂದರೆ. ಯಾರು ಬಿಟ್ಟರೆಂದು ಮತ್ತು ಯಾರಿಗೆ ಎಷ್ಟು ಬಿಟ್ಟರು ಎನ್ನತಕ್ಕಂಥ ಮಾಹಿತಿ ನಿಮ್ಮಲ್ಲಿ ಇದ್ದರೆ ದಯವಿಟ್ಟು ಕೊಟ್ಟರೆ ಒಳ್ಳೆಯದು. ಮಾನ್ಯ ರೇವಣ್ಣನವರೆ.

ನೀವು ಸರ್ಕಾರದಲ್ಲಿದ್ದವರು. ಆದ್ದರಿಂದ. ನಿಮಗೆಲ್ಲಾ ಗೊತ್ತಿರುತ್ತದೆ. ಗೊತ್ತಿಲ್ಲದೆ ಇವೆಲ್ಲವನ್ನು ಹೇಳುವುದಕ್ಕೆ ಆಗುತ್ತದೆಯೇ? ಅರ್ಧಂಬರ್ಧ ಹೇಳಿ ಏಕೆ ಬಿಡುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್ : ಒಂದು ಲಕ್ಷ. ಎರಡು ಲಕ್ಷ ಎಕರೆ ಅಕ್ವೈರ್ ಮಾಡಿದ್ದಾರೆಂದು ನಾವು ಆರೋಪ ಮಾಡುತ್ತಿದ್ದೆವು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ ; ನಿಮ್ಮ ಆರೋಪವೇ ಬೇರೆ ಬಿಡಿ. ನೀವು ಸ್ಯಾಟಲೈಟ್ ಟೌನ್ ಮತ್ತು ರಿಂಗ್‌ರೋಡ್‌ಗೆ ಸಂಬಂಧಪಟ್ಟಂತೆ ಆರೋಪ ಮಾಡುತ್ತಿದ್ದೀರಿ. ಈ ಆರೋಪಗಳನ್ನು ನೀವೇನು ಆಗ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಬಾಲಕೃಷ್ಣರವರೆ. ತಾವೇಕೆ ಮಧ್ಯದಲ್ಲಿ ಮಾತನಾಡುತ್ತೀರಿ? ನೀನೇನು ಮಂತ್ರಿಯಾಗಿದ್ದೆಯಾ?

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ. ಮಾನ್ಯ ರೇವಣ್ಣನವರು ಅಂಕಿ-ಅಂಶಗಳನ್ನು ಇಟ್ಟುಕೊಂಡು ಮಾತನಾಡುತ್ತಿದ್ದಾರೆ. ಅಂದರೆ. ಇಷ್ಟು ಎಕರೆಯನ್ನು ಆಕ್ವೈರ್ ಮಾಡಿದ್ದರು. ಅದರಲ್ಲಿ ಇಷ್ಟು ಎಕರೆ ಡೀ-ನೋಟಿಫೈ ಆಗಿದೆ ಎಂದು ಮತ್ತು 28(1) ಸಕ್ಷೆನ್‌ಗಳ ಬಗ್ಗೆ ಕೋಟ್ ಮಾಡಿ ಹೇಳುತ್ತಿದ್ದಾರೆ. He is well aware of the facts. ಈ ರೀತಿ ಇರತಕ್ಕಂಥ ಸಂದರ್ಭದಲ್ಲಿ ನೀವೂ ಕೂಡ ಇಷ್ಟು ದಿವಸಗಳ ಕಾಲ ಸರ್ಕಾರವನ್ನು ನಡೆಸಿ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಆದ್ದರಿಂದ. ಇದನ್ನು ಅವರು ಅಥವಾ ನೀವೇ ಮಾಡಿದ್ದೀರೋ ಗೊತ್ತಿಲ್ಲ. It was a Government led by Mr. Kumara Swamy. ಇದರಲ್ಲಿ ಯಾವುದೇ ಅನುಮಾನವಿಲ್ಲ. you are a part and parcel of the system and the Government. ಆದ್ದರಿಂದ. ನಿಮ್ಮ coalition partner ರವರು ಇದನ್ನು ಮಾಡಿದರು ಎಂಬ ಅನುಮಾನ ಇದ್ದರೆ ಮತ್ತು ಅವರು ಇದರಲ್ಲಿ ಭಾಗಿಯಾಗಿದ್ದಾರೆಂದರೆ ಮತ್ತು ಇದರ ಲೀಡರ್‌ಶಿಪ್‌ನಲ್ಲಿ ಅಗಿದ್ದರೆ ಎಂದರೆ. ಮತ್ತು ನೀವು ಇಂತಿಂಥವರಿಗೆ ಸಹಾಯ ಮಾಡಿದ್ದೀರೆಂದು ಮತ್ತು ಇಂತಿಂಥವರಿಗೆ ಬಿಟ್ಟಿದ್ದೀರಿ ಎಂದು ಮತ್ತು ನಾನು ಇಷ್ಟು ಬಿಡಿಸಿಕೊಂಡಿದ್ದೇನೆಂಬುದನ್ನು ಮತ್ತು ಬೇರೆಯವರ ಇಷ್ಟು ಬಿಡಿಸಿಕೊಂಡಿದ್ದಾರೆಂದು ಮತ್ತು ಇಲ್ಲಿ ಶಿವಕುಮಾರ್ ಮತ್ತು ಮಾನ್ಯ ಸಿದ್ದರಾಮಯ್ಯನವರ ಜಮೀನು ಇತ್ತೆಂಬುದರ ಬಗ್ಗೆ ಬೆಳಕು ಚೆಲ್ಲಿ. ಈ ರಾಜ್ಯದ ಜನತೆಗೂ ಸಹ ಗೊತ್ತಾಗಲಿ. ಏಕೆಂದರೆ. ಅವರು ಇವೆಲ್ಲವನ್ನು ಮುಚ್ಚಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ.

ಶ್ರೀ ಹೆಚ್.ಡಿ ರೇವಣ್ಣ ; ಮಾನ್ಯ ಅಧ್ಯಕ್ಷರೆ. ಮಾನ್ಯ ಸಿದ್ದರಾಮಯ್ಯ ಸಾಹೇಬರು ಹಿರಿಯರಿದ್ದಾರೆ. ಅವರಷ್ಟು ನನಗೆ ಅನುಭವ ಇಲ್ಲ. ಏಕೆಂದರೆ. ಅವರು 6 ಬಜೆಟ್ ಮಂಡನೆ ಮಾಡಿದ್ದಾರೆ. ಆದರೆ. ನಾನು ಯಾವುದೇ ಬಜೆಟ್‌ನ್ನು ಮಂಡನೆ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಅವರು ಬುದ್ಧಿವಂತರಿದ್ದಾರೆ ಮತ್ತು ಆರು ಬಜೆಟ್ ಮಂಡನೆ ಎಂಬುದು ಬೇಡ. ನಾವೇನೂ ಈಗ ಈ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ಈ ವಿಷಯವನ್ನು ನೀವೆ ಪ್ರಸ್ತಾಪ ಮಾಡಿದ್ದೀರಿ. ನೀವು ಮಾತನಾಡುವಾಗ ಈ ವಿಷಯವೆಲ್ಲವನ್ನು ಹೇಳಿದ್ದೀರಿ. ಎಷ್ಟು ಎಕರೆ ಜಮೀನಿಗೆ ನೋಟೀಸ್ ಕೊಟ್ಟಿದ್ದೆವು. ಇದರಲ್ಲಿ 4(1)ನಲ್ಲಿ ಇಷ್ಟು ಕೊಡಲಾಗಿತ್ತು. ಆನಂತರ 6(1)ನಲ್ಲಿ ಇಷ್ಟು ಕೊಟ್ಟಿದೆ ಮತ್ತೆ ಡೀ–ನೋಟಿಫಿಕೇಷನ್ ಇಟ್ಟು ಮಾಡಿದ್ದೀರಿ ಎಂದು ಹೇಳಿದ್ದೀರಿ. ಪರವಾಗಿಲ್ಲ. ಆದರೆ ಸರ್ಕಾರ ಎಂದರೆ, all ministers are collectively responsible. Government ಅಂದರೆ it has a collective responsibility. ಯಾರ್ಯಾರು ಮಿನಿಸ್ಟರ್ ಆಗಿರುತ್ತಾರೆಯೋ ಅಂದರೆ, ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರಿಗೆ ಇದ್ದಂಥ ಇಲಾಖೆ ಬಗ್ಗೆ ಮಾತ್ರ ಅವರು ನೋಡಿರುತ್ತಾರೆ. But. what ever are the decisions taken in the cabinet. ಈ ಡಿಸಿಷನ್ ಎಲ್ಲರಿಗೂ ಬೈಂಡಿಗ್ ಆಗಿರುತ್ತದೆ. ಮತ್ತೆ collective reponsibility ಆಗಿರುತ್ತದೆ. ಆ ಕ್ಯಾಬಿನೆಟ್‌ನಲ್ಲಿ you are also a minister. ಇದೆಲ್ಲಾ ಕ್ಯಾಬಿನೆಟ್ ಮುಂದೆ ಬರುತ್ತದೆ. ಮತ್ತು ಇದಕ್ಕೆ ಸಂಬಂಧಪಟ್ಟಂಥ ಪ್ರತಿಯೊಂದು ಫ್ಯಾಕ್ಟ್‌ಗಳು ನಿಮಗೆ ಗೊತ್ತಿದೆ. ಆದ್ದರಿಂದ. ದಯವಿಟ್ಟು ಹೇಳಬೇಕು. ಇದೆಲ್ಲ ನಮಗೆ ಗೊತ್ತಿಲ್ಲ. ನಾವು ಆಗ ಹೇಳುತ್ತಿದ್ದೆವು. ಆದರೆ. ನಾವು ಆ ರೀತಿ ಮಾಡಿಲ್ಲವೆಂದು ಉತ್ತರ ಕೊಡುತ್ತಿದ್ದೀರಿ. ಮತ್ತೆ ನಾವೇನು ಆಪಾದನೆ ಮಾಡಿಲ್ಲವೆಂದು ಮತ್ತೆ ಯಾರಿಗೂ ನಾವು ಫೇವರ್ ಮಾಡಿಲ್ಲ. ಅದರಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲವೆಂದು ಹೇಳುತ್ತಿದ್ದೀರಿ. ಆದ್ದರಿಂದ why can't you demand? ಇದೆನ್ನೆಲ್ಲಾ ತಾವು ಹೇಳಬೇಕು. ಇಲ್ಲದಿದ್ದರೆ, ಇದನ್ನು ಪರಿಶೀಲನೆ ಮಾಡುವುದಕ್ಕೋಸ್ಕರ ಒಂದು ಹೌಸ್ ಕಮಿಟಿಯನ್ನು ಮಾಡುವುದಕ್ಕೆ ಡಿಮ್ಯಾಂಡ್ ಮಾಡೋಣವೇ? ಮಾನ್ಯ ರೇವಣ್ಣನವರೆ, ತಾವೇನು ಹೇಳುತ್ತೀರಿ? ಯಾವತ್ತಿಂದ ಬೇಕಾದರೆ ಆಗಲಿ. ಬೇಕಾದರೆ 10–20 ವರ್ಷಗಳ ಹಿಂದಿನಿಂದ ಬೇಕಾದರೆ ತನಿಖೆಯಾಗಲಿ. ಯಾರು ಯಾರಿಗೆ ಫೇವರ್ ಮಾಡಿದ್ದಾರೆಂದು ಮತ್ತು ಯಾರಿಗೆ ಅನುಕೂಲವಾಗಿದೆ ಎನ್ನತಕ್ಕಂಥದ್ದು ಎಲ್ಲರಿಗೂ ಸಹ ಗೊತ್ತಾಗಬೇಕಲ್ಲವೇ? ಆ ಕಾರಣದಿಂದ ನಾನು ಹೇಳುತ್ತಿದ್ದೇನೆ. ನೀವು ಈಗ ಹೇಳುತ್ತಿರುವುದು ಸರಿ ಇದೆ. ಆದರೆ. ಅರ್ಧಂಬರ್ಧ ಹೇಳಿ ಬಿಟ್ಟಿರಿಲ್ಲ ಎಂಬುದು ನಮ್ಮ ಅನಿಸಿಕೆ? ಬೇರೇನು ಇಲ್ಲ. ಎಲ್ಲವನ್ನು ಕರೆಕ್ಟ್ ಆಗಿ ಹೇಳಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಾನು ಮಾತನಾಡುವಾಗ ಎಲ್ಲರೂ ಮಧ್ಯದಲ್ಲಿ ಮಾತನಾಡಿದರೆ ನಾನು ಮಾತನಾಡುವುದಕ್ಕೆ ಕಷ್ಟವಾಗುತ್ತದೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ಮಾತನಾಡುವಾಗ ಮಧ್ಯದಲ್ಲಿ ಯೀಲ್ಡ್ ಆಗಬಾರದು. ತಾವು ಯೀಲ್ಡ್ ಆದರೆ ನಾನು ಪರ್ಮಿಷನ್ ಕೊಡೋಲೇ ಬೇಕಾಗುತ್ತದೆ. ನೀವು ಯೀಲ್ಡ್ ಆಗದಿದ್ದರೆ ನಾನು ಪರ್ಮಿಷನ್ ಕೊಡುವುದಿಲ್ಲ. ತಾವು ಕುಳಿತುಕೊಳ್ಳಬಾರದು.

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ನಮ್ಮ ನಾಯಕರು ಮತ್ತು ಹಿರಿಯ ಸದಸ್ಯರು. ಅವರು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಾಗ ಗೌರವ ಕೊಡಬೇಕೋ ಅಥವಾ ಬೇಡವೋ? ಅವರು ಎದ್ದು ನಿಂತುಕೊಂಡಾಗ ನಾನು ಕುಳಿತುಕೊಳ್ಳಬೇಕು.

ಶ್ರೀ ಎ. ಮಂಜು ; ಮೊದಲು ಮಾತನಾಡುವುದಕ್ಕೆ ಬಿಡುತ್ತಿರಲಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಮಂಜುರವರೆ, ಮಾನ್ಯ ಸಿದ್ದರಾಮಯ್ಯನವರನ್ನು ಎರಡು ವರ್ಷಗಳಿಂದ ನೋಡುತ್ತಿದ್ದೀರಿ. ಆದರೆ. ಅವರು ಎಲ್ಲಿಯೇ ಇದ್ದರೂ ಕೂಡ ಅವರು ನಮ್ಮ ನಾಯಕರಾಗಿರುತ್ತಾರೆ. ನೀವೇಕೆ ತಲೆ ಕೆಡಿಸಿಕೊಳ್ಳುತ್ತೀರಿ ಸುಮ್ಮನಿರಿ.

ಶ್ರೀ ಎ. ಮಂಜು : ಮಾನ್ಯ ರೇವಣ್ಣನವರು ಹೇಳುವುದನ್ನು ನೋಡಿದರೆ. ಯಾಕೋ ಅವರು ಅನುಮಾನದಿಂದ ಹೇಳುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಸಿದ್ದರಾಮಯ್ಯನವರ ಮೇಲೆ ನಿಮಗೆ ಅನುಮಾನ ಇದೆಯೇ ಹೇಳಿ? ಅನುಮಾನ ಇದ್ದರೆ ಅಮೇಲೆ ಪ್ರತ್ಯೇಕವಾಗಿ ಕುಳಿತುಕೊಂಡು ಮಾತನಾಡಿ ಅನುಮಾನವನ್ನು ಬಗೆಹರಿಸಿಕೊಳ್ಳೋಣ. ಈಗ ನಮ್ಮ ಹತ್ತಿರ ಯಾರೂ ಇಲ್ಲ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, conclude ಮಾಡುತ್ತೀರಾ? ಇದೇನು ಪ್ರಸ್ತಾವನೆಯೇ ಅಥವಾ ಮುಗಿಸುತ್ತಿದ್ದೀರಾ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ. ನಾನು ಇನ್ನು ಪ್ರಸ್ತಾವನೆಯಲ್ಲಿಯೇ ಇದ್ದೇನೆ. ಇನ್ನು ಮುಖ್ಯ ಚರ್ಚೆಯನ್ನು ಪ್ರಾರಂಭ ಮಾಡಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ದಯಮಾಡಿ ಊಟ ಆದ ಮೇಲೆ ಮುಂದುವರೆಸಿದರೆ ಒಳ್ಳೆಯದು.

ಅಧ್ಯಕ್ಷರು : ತಾವು ಇನ್ನು ಪ್ರಸ್ತಾವನೆಯಲ್ಲಿಯೇ ಇದ್ದೀರಿ. ಮುಖ್ಯ ವಿಷಯಕ್ಕೆ ಇನ್ನೂ ಬಂದಿಲ್ಲ. ಮುಖ್ಯ ವಿಷಯಕ್ಕೆ ಯಾವಾಗ ಬರುತ್ತೀರಿ ಹೇಳಿ?

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಅಧ್ಯಕ್ಷರೆ, ಹಿಂದಿನ ವಿಷಯದ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆಂದು ಮಾನ್ಯ ಸಿದ್ದರಾಮಯ್ಯನವರು ಹೇಳಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳೋಣ. ಅವರು ಆರು ಸಾರಿ ಹಣಕಾಸಿನ ಮಂತ್ರಿಗಳಾಗಿ ಬಜೆಟ್‌ನ್ನು ಮಂಡನೆ ಮಾಡಿ ಈ ರಾಜ್ಯದ ಜನಪ್ರಿಯ ನಾಯಕರಾಗಿದ್ದಾರೆ. ಅದರ ಬಗ್ಗೆ ನಾನು ಚಕಾರ ಎತ್ತುವುದಿಲ್ಲ. ಆದರೆ. ಯಾರೇ ತಪ್ಪುಮಾಡಲಿ ಅಂದರೆ. ರೇವಣ್ಣ ತಪ್ಪು ಮಾಡಲಿ. ಮಾನ್ಯ ಕುಮಾರಸ್ವಾಮಿ ತಪ್ಪು ಮಾಡಲಿ ಅಥವಾ ಯಾವುದೇ ಸರ್ಕಾರ ತಪ್ಪು ಮಾಡಲಿ ಈ ರಾಜ್ಯದ 5 ಕೋಟಿ ಜನರ ಹಿತದೃಷ್ಟಿಯಿಂದ ಮಾತನಾಡುವುದಕ್ಕೆ ನಾವೇನು ಹೆದರಬೇಕಾಗಿಲ್ಲ. ನಾನು ಸರ್ಕಾರದಲ್ಲಿದ್ದಾಗ ಏಕೆ ಮಾತನಾಡಿಲ್ಲವೆಂದು ಈಗ ಏಕೆ ಮಾತನಾಡುತ್ತಿದ್ದೀನೆಂದರೆ ನಾನು ಸರ್ಕಾರದಲ್ಲಿದ್ದಾಗ ನನಗೆ ಎಲ್ಲಾ ಇಲಾಖೆಗಳು ಬರುವುದಿಲ್ಲ. ತಾವು ನನಗೆ ಎಲ್ಲಾ ಇಲಾಖೆಗಳ ವಾರ್ಷಿಕ ವರದಿಗಳನ್ನು ತರಿಸಿಕೊಟ್ಟಿದ್ದೀರಿ. ಇದರಲ್ಲಿ ನಗರಾಭಿವೃದ್ಧಿ ಮತ್ತೆ ಇತರೆ ಇಲಾಖೆಗಳ ವರದಿಗಳ ಒಂದು ಹೊರೆ ನಮಗೆ ಬಂದಿದೆ. ಇದುವರೆಗೂ ಈ ರೀತಿಯಾಗಿ ಬರುತ್ತಿತ್ತೇನೊ ನನಗೆ ಗೊತ್ತಿಲ್ಲ. ಇದರಲ್ಲಿ ಬಂದಿರತಕ್ಕಂಥ ಮಾಹಿತಿಯನ್ನು ತೆಗೆದುಕೊಂಡು ಇಲ್ಲಿ ಹೇಳುತ್ತಿದ್ದೇನೆ. 14 ಸಾವಿರ ಎಕರೆ ಜಮೀನು ಅಕ್ವೈರ್ ಆಗಿದೆ. ಇದರಲ್ಲಿ 3500 ಎಕರೆ ಜಮೀನನ್ನು ಯಾರ್‍ಯಾರಿಗೆ ಬಿಟ್ಟಿದ್ದೀರಿ ಎಂಬುದನ್ನು ಹೇಳಿ? ಏಕೆಂದರೆ. ಇದರಲ್ಲಿ ರೇವಣ್ಣನದು ಬಿಟ್ಟಿದ್ದೀರಾ? ಏಕೆಂದರೆ. ರಾಜ್ಯದ ಜನತೆಗೆ ಒಂದು ಮೆಸೇಜ್ ಹೋಗಬೇಕಾಗುತ್ತದೆ. ಈ ಒಂದು ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಆದ್ದರಿಂದ. ಹಿಂದೆ ರೇವಣ್ಣನದು ಅಥವಾ ಇನ್ಯಾರದಾದರೂ ಬಿಟ್ಟಿದ್ದರೆ ಈ ಸಭೆಗೆ ತಿಳಿಸಲೆಂದು ಹೇಳುತ್ತಿದ್ದೇನೆ. ನಾನು ಇದನ್ನು ಹೇಳುತ್ತಿರಲಿಲ್ಲ. ಹಿಂದಿನ ದಿನಗಳಲ್ಲಿ ಆಗಬಾರದೆಲ್ಲಾ ಆಗಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕೋಸ್ಕರ ಕೆಲವು ಮಾಹಿತಿಗಳೆಲ್ಲವನ್ನು ಕೊಡಬೇಕಲ್ಲವೇ? ಈ ವಿಷಯಗಳ ಬಗ್ಗೆ ಹೇಳದೆ ಇದ್ದರೆ ನಾಳೆ ಬೆಳಿಗ್ಗೆ ಅವರು ತನಿಖೆ ಮಾಡುವುದಕ್ಕೋಸ್ಕರ ರೆಕಾರ್ಡ್‌ಗಳನ್ನು ಅವರ ಪ್ರಧಾನ ಕಾರ್ಯದರ್ಶಿಯವರು ಮತ್ತು ಕಾರ್ಯದರ್ಶಿಯವರು ಹುಡುಕುವುದಕ್ಕೆ ತೊಂದರೆಯಾಗುತ್ತದೆ. ಈ ಎಲ್ಲಾ ಮಾಹಿತಿಯನ್ನು ಕೊಟ್ಟರೆ ಬೇಗ ತನಿಖೆಯನ್ನು ಪ್ರಾರಂಭ ಮಾಡಬಹುದಾಗಿದೆ ಎಂಬ ಉದ್ದೇಶದಿಂದ ನಾನು ಹೇಳುತ್ತಿದ್ದೇನೆಯೇ ಹೊರತು ಈ ಸರ್ಕಾರ ಅದು–ಇದು ಎಂದು ನಾನು ಹೇಳುತ್ತಿಲ್ಲ. ಆ ಮಂತ್ರಿಮಂಡಲದಲ್ಲಿದ್ದೆ. ಈ

ಮಂತ್ರಿಮಂಡಲದಲ್ಲಿದ್ದೆ ಎನ್ನತಕ್ಕಂಥದ್ದಲ್ಲ. ಎಲ್ಲಿಂದಾದರೂ ಅಥವಾ ಯಾವುದಾದರೂ ತನಿಖೆ ಮಾಡಲಿ ನಾನು ಬೇಡವೆಂದು ಹೇಳುವುದಿಲ್ಲ. ನಾನು ಇದರ ಬಗ್ಗೆ ಪೀಠಿಕೆ ಹಾಕುವುದಕ್ಕೆ ದಯವಿಟ್ಟು ಬಿಡಿ.

ಅಧ್ಯಕ್ಷರು : ತಾವು ಇನ್ನೂ ಪೀಠಿಕೆಯಲ್ಲಿಯೇ ಇದ್ದೀರಾ?

ಶ್ರೀ ಡಿ.ಕೆ. ಶಿವಕುಮಾರ್ : ನಾನು ಮಾನ್ಯ ರೇವಣ್ಣನವರ ಚರ್ಚೆಗೆ ಸಹಾಯ ಮಾಡುತ್ತೇನೆ. ಈಗ ನಿಮ್ಮ ಚರ್ಚೆಗೆ ಏನಾದರೂ ತೂಕ ಬಂದು ಇಡೀ ಪ್ರೆಸ್ ಮತ್ತು ಮೀಡಿಯಾ ಹಾಗೂ ಸರ್ಕಾರ ಏನಾದರು ಅದಕ್ಕೆ ಅಟೆನ್ಷನ್ ಡ್ರಾ ಮಾಡಬೇಕಾದರೆ ನೀವು ಕೆಲವು ವ್ಯಕ್ತಿಗಳ ಹೆಸರುಗಳನ್ನು ಹೇಳಬೇಕಾಗುತ್ತದೆ. ನೀವು ಹೆಸರುಗಳನ್ನು ಹೇಳಿದಾಗ ಸರ್ಕಾರಕ್ಕೂ ಕಿವಿ ನೇರವಾಗುತ್ತದೆ. ಮತ್ತೆ ಚರ್ಚೆಗೆ strength ಬರುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಶಿವಕುಮಾರ್‌ರವರೆ. ನಿಮ್ಮ ಹೆಸರು ಯಾವುದೂ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ನನ್ನದೆಲ್ಲಾ ಆಗಿಹೋಯಿತು. ನನ್ನ ಹೆಸರನ್ನು ಈಗಾಗಲೇ ಎಳೆದು ಎಳೆದು ಆಯಿತು. ಮತ್ತೆ ಮಾನ್ಯ ರಾಮಸ್ವಾಮಿಯವರ ಕಮಿಟಿ ಕಳುಹಿಸಲಾಗಿತ್ತು. ಮತ್ತೆ ಅಧಿಕಾರಿಗಳನ್ನು ಹಾಗೂ ಡಿ.ಸಿ.ಯವರನ್ನು ಕಳುಹಿಸಿದ್ದೂ ಆಯಿತು. ನನ್ನ ಕೇಸ್ ಎಲ್ಲಾ ಮುಗಿದು ಹೋಯಿತು.

ಶ್ರೀ ಹೆಚ್.ಡಿ. ರೇವಣ್ಣ ; ನಾವು ನೀವು ಒಟ್ಟಿಗೆ ಇಲ್ಲಿ ಕುಳಿತಿದ್ದೇವೆ. ಆದ್ದರಿಂದ ಈಗ ಅದು ಇರಲಿ ಬಿಡಿ. ಮಾನ್ಯ ಅಧ್ಯಕ್ಷರೆ. ನಾನು ಈ ವಿಷಯದ ಬಗ್ಗೆ ಬೆಳಕು ಚೆಲ್ಲಬೇಕೆಂಬ ಸಂದರ್ಭದಲ್ಲಿ ಯಾರೂ ಕೂಡ ಮಧ್ಯದಲ್ಲಿ ಬರಬಾರದೆಂದು ಸನ್ಮಾನ್ಯ ಸದಸ್ಯರಲ್ಲಿ ಹೇಳಿರತಕ್ಕಂಥದ್ದಕ್ಕೆ ನಾನು ಇಂಧನ ಇಲಾಖೆ ಬಗ್ಗೆ ಮಾತನಾಡುವಾಗ ಸವಿಸ್ತಾರವಾಗಿ ಹೇಳಿದ್ದೇನೆ. ಕೈಗಾರಿಕೆಯಲ್ಲಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಇಟ್ಟಿದ್ದೀರಿ. ಏಕೆಂದರೆ. ಕೆ.ಐ.ಎ.ಡಿ.ಬಿ. ಯಲ್ಲಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಬಂಡವಾಳ ಇದೆ. ಈ ಬಂಡವಾಳ ಯಾವುದು? ಇದು ಯಾವ ಮೂಲದಿಂದ ಬಂದಿರತಕ್ಕಂಥ ಬಂಡವಾಳ? ಸಾವಿರ ಕೋಟಿ ರೂಪಾಯಿ ಬಂಡವಾಳ ಇಡುವುದಕ್ಕೆ ಸರ್ಕಾರ ಏನಾದರೂ ಅನುದಾನ ಕೊಟ್ಟಿದೆಯೇ? ಅಥವಾ ಯಾವುದಾದರೂ ಜಮೀನು ಮಾರಾಟ ಮಾರುವುದರಿಂದ ಬಂದಿದೆಯೇ? 21 ಸಾವಿರ ಎಕರೆಯಲ್ಲಿ 14 ಸಾವಿರ ಎಕರೆಗೆ ಅಂತಿಮ ನೋಟಿಫಿಕೇಷನ್ ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ದಯಮಾಡಿ

ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕೆಂದು ಹೇಳುತ್ತೇನೆ. ಮತ್ತೆ ಇದಲ್ಲದೆ ಕೆ.ಐ.ಎ.ಡಿ.ಬಿ. ಯಲ್ಲಿ ಇನ್ನು 4 (1) ಅಧಿಸೂಚನೆ ಆಗಿರುವಾಗಲೆ ಸುಮಾರು 20 ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡಿದ್ದಾರೆ. ಉದ್ಯೋಗ ಮಿತ್ರದಲ್ಲಿ ಇಟ್ಟು ಎಲ್ಲರಿಗೂ distribution 20 ಸಾವಿರ ಎಕರೆ ಆಗಿ ಹೋಗಿದೆ. 20 ಸಾವಿರ ಎಕರೆಯಲ್ಲಿ industry ಹಾಕುತ್ತೇವೆಂದು ವಿದ್ಯಾರ್ಥಿಗಳಿಗೆ 10 ಲಕ್ಷ ಉದ್ಯೋಗ ಕೊಡುತ್ತಾರೋ 15 ಲಕ್ಷ ಜನ ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸುತ್ತಾರೋ ಈ ಸರ್ಕಾರ ಗೊತ್ತಿಲ್ಲ. ಆ 20 ಸಾವಿರ ಎಕರೆ ಜಮೀನನ್ನು ಉದ್ಯೋಗ ಮಿತ್ರದಲ್ಲಿ advance ಆಗಿ ತೆಗೆದುಕೊಂಡಿದ್ದಾರಲ್ಲಾ. ಒಂದು ಸಾವಿರ ಎಕರೆ ಜಮೀನನ್ನು ಒಂದು ಸಾವಿರ ಕೋಟಿ ರೂ.ಗಳ ಹಣವನ್ನು KIADB ಗೆ ಬಂದಿದೆಯಲ್ಲಾ. ನೀವು ಅವರಿಗೆ ಎಷ್ಟು ದಿವಸದಲ್ಲಿ ನಿವೇಶನವನ್ನು ಕೊಡುತ್ತೀರಿ? ಅವರು ಹಾಗೆ ಸುಮ್ಮನೆ advance ಆಗಿ ಇಟ್ಟುಕೊಂಡು Industries ಹಾಕುತ್ತೇವೆಂದು ಹೇಳಿದ್ದೀರಿ. ದಯಮಾಡಿ ಅದರಿಂದ ಏನಾದರೂ ಆಗಿದೆಯಾ ತಿಳಿಸಿ. ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. 20 ಸಾವಿರ ಎಕರೆ ಜಮೀನು ನೀವು Industries 4(1) ಅಧಿಸೂಚನೆ ಆಗುವ ಹಂತದಲ್ಲಿಯೇ ಇನ್ನು 6(1) ಅಧಿಸೂಚನೆ ಆಗಿಲ್ಲಾ. award ಆಗಿಲ್ಲ. ಸುಮಾರು 1000 ಕೋಟಿ ರೂ.ಗಳ ಹಣವನ್ನು ಕಟ್ಟಿಸಿಕೊಂಡಿದ್ದೀರಿ. ಅವರಿಗೆ ಎಷ್ಟು ದಿವಸದಲ್ಲಿ ಸೈಟ್‌ನ್ನು ಕೊಡುತ್ತೀರಿ. ಸೈಟ್ ಕೊಟ್ಟು ನಮ್ಮ ರಾಜ್ಯದಲ್ಲಿರುವ ನಿರುದ್ಯೋಗಿ ವಿದ್ಯಾವಂತರಿಗೆ ಒಳ್ಳೆಯ ಕೈಗಾರಿಕೆಗಳನ್ನು ಹಾಕುವುದರಿಂದ 10. 20 ಲಕ್ಷ ಜನರಿಗೆ ಉದ್ಯೋಗವನ್ನು ಸೃಷ್ಟಿ ಮಾಡುತ್ತಾರೋ ಏನೋ ಗೊತ್ತಿಲ್ಲ. ಅದನ್ನು ತಾವು ಉತ್ತರದಲ್ಲಿ ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. Denotification ಮಾಡುವಾಗ ಯಾವ್ಯಾವ ರೀತಿ ಮಾಡುತ್ತಾರೆ. ಅದನ್ನು ದಯಮಾಡಿ ಹೇಳಿ ಆ Denotification ಮಾಡಬೇಕಾದರೆ 4(1) ಅಧಿಸೂಚನೆ ಮಾಡಿ 28 (1) ಅಧಿಸೂಚನೆಯಲ್ಲಿ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಎಷ್ಟು ಜಮೀನನ್ನು ಇವತ್ತು Industry Department ನಲ್ಲಿ ಬಿಡುಗಡೆ ಮಾಡಿದ್ದೀರಿ. ಇದರ ಹಿಂದೆ ಯಾರಿದ್ದಾರೆ. ಅದನ್ನು ರಾಜ್ಯದ ಜನತೆಗೆ ತಿಳಿಸಿ ಎಂದು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಏಕೆಂದರೆ ಈ ಸರ್ಕಾರ ಬಂದ ಮೇಲೆ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ಒಂದು ದೃಢ ನಿಲುವನ್ನು ತೆಗೆದುಕೊಂಡಿದೆ. ಆದ್ದರಿಂದ ಇದರಲ್ಲಿ ನಾನು ಕೇಳುತ್ತಿದ್ದೇನೆ. ಇದು ಅಲ್ಲದೇ ನನ್ನ ಇಲಾಖೆಯಲ್ಲಿಯೂ ಅಷ್ಟೆ. ಲೋಕೋಪಯೋಗಿ ಇಲಾಖೆಯಲ್ಲಿ ಹಿಂದಿನ ಸಾಲಿನಲ್ಲಿ ಕಳೆದ ಐದು ವರ್ಷದಲ್ಲಿ

25th July 2008

ಯಾವಾಗ ಏನೇನಾಗಿದೆ ಎನ್ನುವುದರ ಬಗ್ಗೆ ನಾನು 3 ವರ್ಷ 6 ತಿಂಗಳ ಬಗ್ಗೆ ಅವರಿಗೆ ಏನಾದರೂ ಮಾಹಿತಿ ಬೇಕಾದರೆ ಈ ಪುಸ್ತಕದಲ್ಲಿ ಎಲ್ಲಾ ಇದೆ. ಬೇಕಾದರೆ ಸ್ಪೀಕರ್ ಸಾಹೇಬರಿಗೆ ಒಂದು ಪ್ರತಿ ಕಳುಹಿಸಿ ಕೊಡುತ್ತೇನೆ. ನಾನು ಬರೆಸಿರುವುದು ಅಲ್ಲ. ಅವರಿಗೆ ಸ್ವಲ್ಪ ದಾಖಲೆಯನ್ನು ಕೊಡದೇ ಹೋದರೆ enquiry ಬೇಗ ಆಗುವುದಿಲ್ಲ. ಮತ್ತೆ ಲೋಕಸಭೆ ಚುನಾವಣೆ ಬರುತ್ತಿದೆ. ಅಷ್ಟರೊಳಗೆ ಆದರೂ ನಮಗೆ report ಬರಬೇಕಲ್ಲವೇ? ಸುಮ್ಮನೆ ಭ್ರಷ್ಟಾಚಾರ ಮಾಡಿದ್ದೇವೆನ್ನುವುದು ಸಾರ್ವಜನಿಕವಾಗಿ ಆಗುವುದು ಬೇಡ. ಲೋಕಸಭೆ ಚುನಾವಣೆಯಲ್ಲಿ 27 ಕ್ಕೆ 27 ನ್ನು ಬಿ.ಜೆ.ಪಿ. ಮುಖಂಡರು ಗೆಲ್ಲುವಂಥ ಈ ಸನ್ನಿವೇಶದಲ್ಲಿ ಇವತ್ತು ಆ ಮಟ್ಟದಲ್ಲಿ ನಡೆಯುತ್ತಿದೆ. ಈ ಬಜೆಟ್ ಬುಕ್‌ನಲ್ಲಿ ಎಲ್ಲವನ್ನು ನೋಡಿ. ಅದಕ್ಕೋಸ್ಕರ enquiry ಹೆದರಿಸುವುದು. ನಾವು ಇಲ್ಲಿ ಮಾತನಾಡಿ ಬಿಟ್ಟರೆ ನಾಳೆ ಬೆಳಿಗ್ಗೆ ಇನ್ನೊಂದು enquiry ಮಾಡುತ್ತಾರೆ. ಅದರ ಬದಲಾಗಿ ನಾನೇ ಕೊಡುತ್ತೇನೆ ಸ್ವಾಮಿ. ಯಾವುದಕ್ಕೆ ಮಾಡುತ್ತೀರಿ ಮಾಡಿ. ಇಂಧನ ಇಲಾಖೆಯುದ್ದು ಬೇಕಾದರೆ ಮಾಡಿ. ಲೋಕೋಪಯೋಗಿ ಇಲಾಖೆಯ ಬಗ್ಗೆ ಬೇಕಾದರೆ ಮಾಡಿ. ಕೆ.ಎಂ.ಎಫ್ ಬೇಕಾದರೆ ಮಾಡಿ. ನನ್ನದೇನೂ ಅಭ್ಯಂತರವಿಲ್ಲ. ಉದಾಹರಣೆಗೆ ಹೇಳಬೇಕಾದರೆ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಬಗ್ಗೆ ನಾವೇನು ಮಾಡಿದ್ದೇವೆ. ಜಮೀನು acquire ಆಗಿಲ್ಲವೆಂದು ಹೇಳುತ್ತೀರಿ. ಜಮೀನು acquire ಆಗದೇ ಕಂಟ್ರಾಕ್ಟರ್‌ಗೆ 31 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆಂದು ಹೇಳುತ್ತಾರೆ. ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಉದ್ದೇಶವೇನು? ಅದರಿಂದ ನನಗೇನು ಬೇರೆ ಉದ್ದೇಶವಿಲ್ಲ. ಇದು ಮಂಡ್ಯ. ಮೈಸೂರು. ಬೆಂಗಳೂರು ನಗರ ಇರಬಹುದು. ಇದನ್ನು ಮುಂದೆ ಮೈಸೂರಿನಲ್ಲಿ ಮಾಡಬೇಕೆಂದು ಇತ್ತು. ಇದೊಂದೆ ಯೂನಿವರ್ಸಿಟಿ ಅಲ್ಲ. ಅದರ ಜೊತೆಗೆ ಆಸ್ಪತ್ರೆ ಇರಬಹುದು. ಅದು ನೀರಾವರಿ ಇಲ್ಲದಿರುವ ಭಾಗ. ರಾಮನಗರ ಈಗಿನ ಮಾಗಡಿ ಕೆಂಪೇಗೌಡರು ಇದ್ದಂಥ ಜಿಲ್ಲೆ ಅದು. ಅದು ಮೂರು ಮುಖ್ಯಮಂತ್ರಿಗಳನ್ನು ಕೊಟ್ಟಂಥ ಜಿಲ್ಲೆ. ಇವತ್ತು ನಾವು ಈ ವಿಧಾನಸೌಧದಲ್ಲಿ ಎಲ್ಲರೂ ಕುಳಿತು ಮಾತನಾಡಬೇಕಾದರೆ ಮಾನ್ಯ ಕೆಂಗಲ್ ಹನುಮಂತಯ್ಯನವರು ಇವತ್ತು ಇಲ್ಲ. ಅವರು ವಿಧಾನಸೌಧ ಕಟ್ಟಿದಂಥ ಜಿಲ್ಲೆ. ಇವತ್ತು ಅದೊಂದು ಜಿಲ್ಲಾ ಕೇಂದ್ರವಾಗಿದೆ. ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಮಾಡಿದ್ದಾರೆ. ಆ ಜಿಲ್ಲೆಯಲ್ಲಿ ಇವತ್ತು ಭಾರಿ ಅವ್ಯವಹಾರ ನಡೆದಿದೆ. ಏನು ಅವ್ಯವಹಾರ ನಡೆದಿದೆ. ಮಾಡಲಿ ತನಿಖೆ ನಾನು ಬೇಡವೆಂದು ಹಿಡಿದುಕೊಂಡಿದ್ದೇನೆಯೇ? ಒಬ್ಬ Chief Engineer ಮತ್ತು Superintendent Engineer ಇನ್ನು 4 ಜನರನ್ನು ಸಸ್ಪೆಂಡ್ ಮಾಡಿಕೊಳ್ಳಲಿ. ಮಾನ್ಯ ಬಸವರಾಜ

ಬೊಮ್ಮಾಯಿಯವರು 136 ಜನರನ್ನು ಸಸ್ಪೆಂಡ್ ಮಾಡುತ್ತೇವೆಂದು ಹೇಳಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಬೇಕಾದರೆ 50 ಜನರನ್ನು ಮಾಡಲಿ. including ರೇವಣ್ಣನನ್ನು ಸೇರಿಸಿ ಮಾಡಲಿ. ನಾನೇನು ಬೇಡವೆನ್ನುವುದಿಲ್ಲ. ಏಕೆಂದರೆ ಇವತ್ತು ಜಮೀನನ್ನು ಕೊಡದೇ ರಾಜ್ಯದ ಜನತೆಗೆ ಮತ್ತು ಪತ್ರಿಕೆ ಮುಖೇನ ಯಾರು ಕಂಟ್ರಾಕ್ಟರ್‌ಗೆ 36 ಕೋಟಿ advance ಹಣವನ್ನು ಕೊಡಿಸಿದ್ದಾರೆ ಇಂಜಿನಿಯರ್‌ಗಳು. ಅದಕ್ಕಾಗಿ ಆ ಇಂಜಿನೀಯರ್‌ಗಳನ್ನು ಸಸ್ಪೆಂಡ್ ಮಾಡಿದ್ದೇವೆಂದು ಹೇಳುತ್ತಾರೆ. ಇವತ್ತು ಜಮೀನು ಯಾವಾಗ ಕೊಟ್ಟಿದ್ದಾರೆ. ಏನು 4(1) ಅಧಿಸೂಚನೆ ಯಾವತ್ತು ಆಯಿತು. 6(1) ಅಧಿಸೂಚನೆ ಯಾವತ್ತು ಆಯಿತು. 28(1) ಅಧಿಸೂಚನೆ ಯಾವತ್ತು ಆಯಿತು. ಯಾವಾಗ ಆರೋಗ್ಯ ಇಲಾಖೆಗೆ handover ಆಯಿತು. PWD ಇಲಾಖೆಗೆ ಯಾವ ರೀತಿ handover ಆಯಿತು. ಅದರ ಬಗ್ಗೆ ಬೇಕಾದರೆ ದಾಖಲಾತಿಗಳ ಸವಿಸ್ತಾರವಾದ ಮಾಹಿತಿಯನ್ನು ಕಳುಹಿಸಿ ಕೊಡುತ್ತೇನೆ. ಸದನದಲ್ಲಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಸಭಾಧ್ಯಕ್ಷರೆ ಆ ರಾಜೀವ್‌ಗಾಂಧಿ ಹೆಲ್ತ್ ಯೂನಿವರ್ಸಿಟಿಯ ಬಗ್ಗೆ ಅವಕಾಶ ಕೊಡುತ್ತೇವೆಂದರೆ ನಾನು ಯಾವ ರೀತಿಯಾದರೂ ಚರ್ಚೆ ಮಾಡುವುದಕ್ಕೆ ರೆಡಿ ಇದ್ದೇನೆ. one hour ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಇದರ ಬಗ್ಗೆ ರಾಜ್ಯದ ಜನತೆಗೆ ಒಂದು ತಪ್ಪು message ಹೋಗಬಾರದು. ನಮಗೆ ಒಂದು ಅಲ್ಲಿ ಯೂನಿವರ್ಸಿಟಿ ಆಗಬೇಕು. ಆ ಭಾಗದ ಜನರಿಗೆ ಹಾಸ್ಪಿಟಲ್ ಆಗಬೇಕು. ಕಾರ್ಯಕ್ರಮ ಆಗಬೇಕು ಅಷ್ಟೇ ನನ್ನ ಉದ್ದೇಶ. ತನಿಖೆ ಮಾಡಿದರೆ ರೇವಣ್ಣ ತಪ್ಪು ಮಾಡಿದ್ದಾನೋ. ಮಾನ್ಯ ಕುಮಾರಸ್ವಾಮಿಯವರು ತಪ್ಪು ಮಾಡಿದ್ದಾರೋ. ಇಂಜಿನಿಯರ್ ತಪ್ಪು ಮಾಡಿದ್ದಾರೋ ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಿ. ಅದರಿಂದ ಆ ಭಾಗದ ಜನತೆಗೆ ಅನ್ಯಾಯವಾಗಬಾರದು. ನಾನು ಹೇಳುವುದು. ಇವತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಒಂದು department ಮಾತ್ರವೇ ಬರುವುದಿಲ್ಲ. ಮೊದಲು ಆರೋಗ್ಯ ಇಲಾಖೆಯಿಂದ proposal ಮಾಡಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟು ಏನೇನು ಮಾಡಬೇಕು ಎನ್ನುವುದರ ಬಗ್ಗೆ ತಮ್ಮ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ 310 ಕೋಟಿ ರೂ.ಗಳಿಗೆ ದಿನಾಂಕ: 15–3–2007 ರಲ್ಲಿ ಒಂದು estimate ಮಾಡಿ ಕಳುಹಿಸಿದ್ದಾರೆ ಸ್ವಾಮಿ. ಟೆಂಡರ್ ಆಗಿದೆ. ಆಮೇಲೆ ಆರೋಗ್ಯ ಇಲಾಖೆಯ ಸಂಬಂಧಪಟ್ಟ ಕಾರ್ಯದರ್ಶಿಗಳೇ 264 ಎಕರೆ ಜಮೀನನ್ನು Rajive Health University ಗೆ. 71 ಎಕರೆ ಜಮೀನು. Medical Education ಗೆ 147 ಎಕರೆ ಜಮೀನನ್ನು acquire ಮಾಡಿರುವುದು. PWD Departnent ಗೆ

ಹಸ್ತಾಂತರವಾಗಿರುವುದು. KIADB ಗೆ ಹಸ್ತಾಂತರವಾಗಿರುವುದು. ಆರೋಗ್ಯ ಇಲಾಖೆಯ ನಿರ್ದೇಶಕರು ಇದನ್ನು ತೆಗೆದುಕೊಂಡಿರುವ ಬಗ್ಗೆ ಬೇಕಾದರೆ ಸದನದ ಮುಂದೆ ದಾಖಲಾತಿಗಳನ್ನು ಕೊಡುತ್ತೇನೆ. ತಾವು ತೆಗೆದುಕೊಳ್ಳಿ. ಜಮೀನು ಇಲ್ಲದೆ 31 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆಂದು ಹೇಳುತ್ತೀರಿ. ಇವತ್ತು ಏನಾಗಿದೆ ಎಂದರೆ. ಯಾರೋ ಕಂಟ್ರಾಕ್ಟರ್ ರಕ್ಷಣೆ ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತು ಸೀಮೆಂಟ್ ಮತ್ತು steel cement, ಜಾಸ್ತಿಯಾಯಿತು. ಆ ಕಂಟ್ರಾಕ್ಟರ್ ಕದ್ದು ಹೋಗಲಿ ಎನ್ನುವ ದೃಷ್ಟಿಯಿಂದ ತಾವು ಏನಾದರೂ ಮಾಡುತ್ತೀರೋ ಏನೋ? ಹಿಂದುಗಡೆ backing ಮಾಡಲು ಅಂದರೆ ಕಂಟ್ರಾಕ್ಟರ್‌ಗೆ ಸಹಾಯ ಮಾಡಬೇಕು ಎನ್ನುವ ದ್ರೃಷ್ಟಿಯಿಂದ ಮಾಡುತ್ತೀರೋ ಏನೋ ನನಗೆ ಗೊತ್ತಿಲ್ಲ. ಯಾವ ಉದ್ದೇಶದಿಂದ ಇದನ್ನು ಮಾಡುತ್ತಿದ್ದೀರಿ? ತಪ್ಪು ಯಾರದ್ದು ಇದೆ. ಇವತ್ತು ಜಮೀನು handover ಆಗಿದೆ. ಹೋಗಲಿ, ಯಾರಾದರೂ ರೈತರು 10 ರೂ.ಗಳ ಲಂಚವನ್ನು ಕೊಟ್ಟಿದ್ದಾರೆಯೇ? ಅದು ತನಿಖೆಯಾಗಲಿ. ರೈತರಿಂದ ಯಾರಾದರೂ 5 ರೂ.ಗಳ ಲಂಚವನ್ನು ತೆಗೆದುಕೊಂಡು ಆ ಜಮೀನನ್ನು acquire ಮಾಡಿದ್ದರೆ. ಹಿಂದೆ ನಮ್ಮವರೇ Industry Minister ಇದ್ದರು. ಅವರೇನಾದರೂ ದುಡ್ಡುಗಿಡ್ಡು ತೆಗೆದುಕೊಂಡಿದ್ದಾರೋ ಅಥವಾ ರೇವಣ್ಣನವರು ತೆಗೆದುಕೊಂಡಿದ್ದಾರೋ ನೋಡೋಣ. ಇವತ್ತು ಆ ಭಾಗದ 41 ಜನ ರೈತರು Industry Department ಬರೆದು ಕೊಡುತ್ತಾರೆ. ನಮ್ಮದೇನೂ ತಕರಾರು ಇಲ್ಲ. ದುಡ್ಡು ಕೊಡಿ ಎಂದು ಅವರನ್ನು ನಾಳೆ ಬನ್ನಿ. ನಾಡಿದ್ದು ಬನ್ನಿ. ಆಚೆ ನಾಡಿದ್ದು ಬನ್ನಿ ಎಂದು ಹೇಳುತ್ತಾರೆ. ಯಾರೋ 10–12 ಜನ ಕೋರ್ಟಿಗೆ ಹೋಗುತ್ತಾರೆಂದರೆ ಅದರಿಂದ ಒಂದು project ನಿಲ್ಲಿಸುತ್ತೀರೆಂದರೆ ಅರ್ಥ ಏನು? ಆಮೇಲೆ ಬರೆದುಕೊಟ್ಟ ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದು ಕೊಡುತ್ತಾರೆ. Industry department ಗೆ ಕೊಡುತ್ತಾರೆ. ಇದನ್ನು ಎಲ್ಲಾ ಕೊಟ್ಟಮೇಲೆ ಮಾರನೇ ಬೆಳಿಗ್ಗೆ revoke ಮಾಡುತ್ತಾರೆ. 33 ಕೋಟಿ ರೂ.ಗಳು ಸರ್ಕಾರಕ್ಕೆ ಬಂದಿವೆಯೋ ಇಲ್ಲವೋ ಕೇಳಿ. ಬ್ಯಾಂಕ್ ಗ್ಯಾರಂಟಿ ಇಲ್ಲದೆ ಕೊಟ್ಟಿದ್ದೇವಾ? ಕಂಟ್ರಾಕ್ಟರ್ ಕೆಲಸ ಪ್ರಾರಂಭ ಮಾಡುವುದಕ್ಕೆ ಹೋದಾಗ stay ಇತ್ತೇ ಹೊರತು. ಕಂಟ್ರಾಕ್ಟರ್‌ಗೆ ಕೊಟ್ಟ ದಿವಸ ಏನಾದರೂ ಬೇರೆ department ನಿಂದ ಪಾರ್ಟಿ ಮಾಡಿದ್ದಾರಾ? ಒಂದು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ ಸ್ವಾಮಿ. ಇದೊಂದು ಪ್ರತಿಷ್ಠಿತ ಪ್ರಾಜೆಕ್ಟ್ ಅದರಲ್ಲಿ ಲೋಪ ಏನಾಗಿದೆ ಎನ್ನುವುದು ಆಗಲಿ. ಮಾನ್ಯ ಉಪಮುಖ್ಯಮಂತ್ರಿಗಳು ಕೂಡ ಆವತ್ತು ಬಂದು ಅಡಿಗಲ್ಲು ಹಾಕಿದ್ದಾರೆ. ಅಂತಹ ಪ್ರಾಜೆಕ್ಟ್‌ಗೆ ಇವತ್ತು ಅದನ್ನು ನಿಲ್ಲಿಸುತ್ತೇವೆಂದು ಹೊರಟರೆ ಹೇಗೆ?

ಬೇಡವೆಂದರೆ ಒಂದು ಕೆಲಸವನ್ನು ಮಾಡಿ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದನ್ನು ಸ್ಪಷ್ಟವಾಗಿ ಹೇಳಬೇಕು. ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್ : ಅದನ್ನು ನೀವು ಚೇಂಜ್ ಮಾಡುವುದಿಲ್ಲವೆಂದು ಹೇಳಿದ್ದೀರಲ್ಲವೇ? you are on record. ರಾಮನಗರದಲ್ಲಿಯೇ Rajive Gandhi Health University ಇರುತ್ತದೆಂದು ತಾವು ಹೇಳಿದ್ದೀರಿ. ಇವರು change ಮಾಡುತ್ತಾರೆಂದು ಗಲಾಟೆಯಾದ ಮೇಲೆ ಹೇಳಿದ್ದಾರೆ. ನೀವು ತಿರುಗಿ ಮತ್ತೆ ಏಕೆ ಗಾಬರಿ ಮಾಡಿಕೊಳ್ಳುತ್ತೀರಿ?

ಶ್ರೀ ಹೆಚ್.ಡಿ. ರೇವಣ್ಣ ; ನಾನು ಗಾಬರಿ ಮಾಡಿಕೊಳ್ಳುತ್ತಿಲ್ಲ. ಯಾವಾಗ ಕೆಲಸವನ್ನು ಪ್ರಾರಂಭ ಮಾಡುತೀರಿ.?

ಶ್ರೀ ಹೆಚ್.ಸಿ. ಬಾಲಕೃಷ್ಣ : ಈ ಬಜೆಟ್‌ನಲ್ಲಿ ಕೂಡ ಅದಕ್ಕೆ ಹಣವನ್ನು ಇಟ್ಟಿಲ್ಲ. ಅದರ ಬಗ್ಗೆ ಚರ್ಚೆ ಕೂಡ ಆಗಿಲ್ಲ. ಅದಕ್ಕೆ ಹಣವನ್ನು ಕೊಡುತ್ತೀರಾ?

ಶ್ರೀ ಡಿ.ಕೆ. ಶಿವಕುಮಾರ್ : It is already sanctioned by this House.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅದಕ್ಕೆ ದುಡ್ಡು ಎಷ್ಟು ಕೊಟ್ಟಿದ್ದೇವೆಂದು ಹೇಳಬೇಕಲ್ಲವೇ?

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಆಚಾರ್ಯರವರು ಒಂದು bill move ಮಾಡಿ ಬೆಂಗಳೂರಿನಲ್ಲಿ ಇತ್ತು. ಅದನ್ನು ರಾಮನಗರಕ್ಕೆ shift ಮಾಡಬೇಕು ಎನ್ನುವುದನ್ನು ಈ ಮನೆಯಲ್ಲಿ ಬಿಲ್ ಪಾಸಾಗಿ ಹೋಗಿದೆ. ಇದು It is an on going project. how can it come to the budget.

ಶ್ರೀ ಹೆಚ್.ಸಿ. ಬಾಲಕೃಷ್ಣ : ಬಜೆಟ್‌ನಲ್ಲಿ ಬೇಡ ಸ್ವಾಮಿ. ಯಾವಾಗ ಪ್ರಾರಂಭ ಮಾಡುತ್ತಾರೆ. ಅದಕ್ಕೆ ಎಷ್ಟು ದುಡ್ಡು ಬಿಡುಗಡೆಯಾಗಿದೆ. on going ಅಂದರೆ ಬಿಡುಗಡೆಯಾಗಿರುವ ಹಣ ಎಷ್ಟು? ಇನ್ನು ಮುಂದೆ ಬಿಡುಗಡೆ ಮಾಡಬೇಕಾಗಿರುವುದು ಎಷ್ಟು ಎನ್ನುವುದನ್ನು ಈ ಸದನದಲ್ಲಿ ಹೇಳಬೇಕಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ clarification ಕೊಟ್ಟರೆ ಇಲ್ಲಿ ಅನುಕೂಲವಾಗುತ್ತದೆ.

ಅಧ್ಯಕ್ಷರು : ಒಮ್ಮೆಲೇ ಅವರು ಉತ್ತರವನ್ನು ಕೊಡುತ್ತಾರೆ. ಎಲ್ಲದಕ್ಕೂ ಒಂದೊಂದಕ್ಕೂ ಉತ್ತರವನ್ನು ಕಳುಹಿಸಬೇಕೆ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಇದು ಬಹಳ ಮಹತ್ವವಾದಂತಹ ವಿಷಯವಾಗಿದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ರೇವಣ್ಣನವರು ಈಗ ಮುಗಿಸಲಿ. ಮಾನ್ಯ ಬಾಲಕೃಷ್ಣರವರೆ. ತಾವು ಬಜೆಟ್ ಮೇಲೆ ಮಾತನಾಡುವುದಿದ್ದರೆ ಹೇಳಿ. ಈಗ ಮಾನ್ಯ ರೇವಣ್ಣನವರು ಮಾತನಾಡುತ್ತಿದ್ದಾರೆ. ಅವರು ಕಂಪ್ಲೀಟ್ ಮಾಡಲಿ. ನಂತರ ಉತ್ತರವನ್ನು ಕೊಡುತ್ತಾರೆ. ಇಲ್ಲಾ. ಪ್ರತಿಯೊಂದಕ್ಕೂ ಉತ್ತರವನ್ನು ಹೇಳಬೇಕೆ?

ಶ್ರೀ ಹೆಚ್.ಡಿ. ರೇವಣ್ಣ : ಕಳೆದ ಸಾರಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೇ ಬಜೆಟ್ ಪುಸ್ತಕದಲ್ಲಿ ರಾಮನಗರವನ್ನು ಆರೋಗ್ಯ ನಗರವನ್ನಾಗಿ ಮಾಡುತ್ತೇನೆಂದು ಹೇಳಿದ್ದಾರೆ. ಮತ್ತೆ ಈ ವರ್ಷ 43 ಕೋಟಿ ರೂಪಾಯಿಗಳನ್ನು ರಾಜ್ಯಪಾಲರ ಆಡಳಿತದಲ್ಲಿ ಕೊಟ್ಟಿದ್ದಾರೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ. ತಾವು ಇನ್ನು ಎಷ್ಟು ಹೊತ್ತು ಮಾತನಾಡುವವರಿದ್ದೀರಿ?

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಇನ್ನು one hour ಬೇಕು ಸಾರ್.

ಅಧ್ಯಕ್ಷರು : ತಾವು ಮುಗಿಸಿದ ಮೇಲೆ ನಾವು ಊಟಕ್ಕೆ ಹೋಗೋಣವೆಂದು ನಾವು ವಿಚಾರ ಮಾಡಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ ; ತಾವು ಬೆಳಕನ್ನು ಚೆಲ್ಲಬೇಕೆಂದು ಕೇಳುತ್ತೀರಿ. ಬೇಡ ಬಿಡಿ ಎಂದರೆ ಕ್ಲೋಸ್ ಮಾಡಿ ಎಂದರೆ ನಿಲ್ಲಿಸುತ್ತೇನೆ. ಇದರಲ್ಲಿ ನನ್ನದೇನೂ ಇಲ್ಲ.

ಅಧ್ಯಕ್ಷರು : ತಾವು ಭಾಷಣ ಮಾಡುವುದಕ್ಕೆ ಪ್ರಾರಂಭಿಸಿ ಒಂದೂವರೆ ತಾಸು ಆಯಿತು.

ಶ್ರೀ ಹೆಚ್.ಡಿ. ರೇವಣ್ಣ : ಈಗ ತಾವು ಬೆಳಕು ಚೆಲ್ಲಿ ಅಂದರೆ ಮಾತನಾಡುತ್ತೇನೆ.

ಅಧ್ಯಕ್ಷರು : ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದೂವರೆ ತಾಸು ಆಯಿತು. ತಾವು ಮುಖ್ಯವಾದ ವಿಷಯಕ್ಕೆ ಬನ್ನಿ.

ಶ್ರೀ ಹೆಚ್.ಡಿ. ರೇವಣ್ಣ ; ಇನ್ನು ತಾವು one hour ಕೊಡಿ. ಬಾಕಿ ಇರುವುದನ್ನು ಕಟ್ ಮಾಡಿ ಸಾರ್. ನಿನ್ನೆ ದಿನ ತಾವು ಪ್ರಶ್ನೋತ್ತರವನ್ನು ಕಟ್

ಮಾಡಿದ್ದೀರಿ. ನಾನು ತಲೆಕೆಡಿಸಿಕೊಂಡೆನೇ? ಈಗ ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಈಗ ಮಾನ್ಯ ಶ್ರೀನಿವಾಸಣ್ಣನವರು ಹೇಳುತ್ತಿದ್ದಾರೆ. ಈಗ one hourನಲ್ಲಿ ಅರ್ಧ ಗಂಟೆ disturbance ಆಯಿತು.

ಅಧ್ಯಕ್ಷರು : ತಾವು ಸೋಮವಾರ ದಿವಸ ಭಾಷಣವನ್ನು ಮುಂದುವರಿಸಬಹುದು. ಅದಕ್ಕಾಗಿ ನಾನು ಕೇಳುತ್ತಿದ್ದೇನೆ. ಇನ್ನು 10 ನಿಮಿಷದಲ್ಲಿ ತಾವು ಮುಗಿಸಿ. ಇವತ್ತೇ ಮುಗಿಸುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ ; ಇಲ್ಲಾ ಸಾರ್. ಇನ್ನು one hour ಬೇಕು ಸಾರ್. ಕೆಲವು important ವಿಷಯ ಇದೆ. ಬೇಕಾದರೆ ಸೋಮವಾರ one hour ಕೊಡಿ ಸಾರ್. ನನಗೆ ಸಾಕು ಅಷ್ಟೇ.

ಅಧ್ಯಕ್ಷರು : ಇನ್ನು 10–15 ನಿಮಿಷದಲ್ಲಿ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ ; ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಬಗ್ಗೆ ಹೇಳುತ್ತೇನೆ. ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಗಳೆ. ಇದಕ್ಕಾಗಿ 43 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ರಾಮನಗರವನ್ನು ಆರೋಗ್ಯನಗರವನ್ನಾಗಿ ಮಾಡುತ್ತೇವೆಂದು ಬಜೆಟ್ ಪುಸ್ತಕದಲ್ಲಿ ಹೇಳಿದ್ದಾರೆ. ಈ ವರ್ಷ ಸನ್ಮಾನ್ಯ ರಾಜ್ಯಪಾಲರು ಕೇಂದ್ರಸರ್ಕಾರದ ಪಾರ್ಲಿಮೆಂಟ್ ಮುಂದೆ ಈ ವರ್ಷ 43 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಆ ಜಮೀನುದಾರರಿಗೆ Industries Department ನಿಂದ. ಆರೋಗ್ಯ ಇಲಾಖೆಯಿಂದ ದುಡ್ಡು release ಮಾಡಿ ಎಂದು ಹೋಗಿದೆ. ಕಡತ ಹಣಕಾಸು ಇಲಾಖೆಯಿಂದ pending ಇಟ್ಟುಕೊಂಡಿದ್ದಾರೆ. 43 ಕೋಟಿ ರೂಪಾಯಿಗಳನ್ನು ಯಾವಾಗ release ಮಾಡುತ್ತೀರೆಂದು ದಯಮಾಡಿ ಆ ಬಗ್ಗೆ ಉತ್ತರವನ್ನು ಕೊಡಬೇಕೆಂದು ಹೇಳಿ ನಾನು ಮಾನ್ಯ ಸಭಾಧ್ಯಕ್ಷರ ಮುಖೇನ ಕೇಳುತ್ತಿದ್ದೇನೆ. ಮತ್ತೆ ಇದು ಅಲ್ಲದೆಯೇ ಕೇಂದ್ರ ಸರ್ಕಾರದಿಂದ 80 ಕೋಟಿ ರೂಪಾಯಿಗಳು ಬರುತ್ತಿದೆ. ಒಟ್ಟು 43+43 ಕೋಟಿ ರೂಪಾಯ. ಹೋದ ವರ್ಷ 43 ಕೋಟಿ ರೂಪಾಯಿಗಳು ಮತ್ತು ಈ ವರ್ಷ 43 ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರದಿಂದ 80 ಕೋಟಿ ರೂಪಾಯಿಗಳು ಬರುತ್ತಿದೆ. ಇದನ್ನು ಕೂಡಲೇ ಬಿಡುಗಡೆ ಮಾಡಬೇಕು. ಬೇಕಾದರೆ ಈ ತನಿಖೆಯನ್ನು ಏನಾದರೂ ಮಾಡಿಕೊಳ್ಳಲಿ. ಇದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಏಕೆಂದರೆ ಸಾರ್ವಜನಿಕರಿಗೆ ತಪ್ಪು ಅಭಿಪ್ರಾಯಗಳು ಹೋಗಬಾರದು. ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್‌ಗಳು, ಪಾಪ, ಅವರು ಏನೂ ಮಾಡಿಲ್ಲ. ಈ ಬಗ್ಗೆ ಬೇಕಾದರೆ ತನಿಖೆಯನ್ನು ಮಾಡಿಕೊಳ್ಳಲಿ. ಈ ಬಗ್ಗೆ

ಸದನದ ತನಿಖೆಯನ್ನು ಬೇಕಾದರೂ ಮಾಡಲಿ. ಅದಕ್ಕೂ ಅಭ್ಯಂತರವಿಲ್ಲ. ಎರಡೂ ಸದನದ ಸದಸ್ಯರುಗಳನ್ನು ಸೇರಿಸಿಕೊಂಡು ಬೇಕಾದರೆ ಸದನದ ತನಿಖೆಯನ್ನು ಮಾಡಲಿ. ಅದರಲ್ಲಿ ಏನಾದರೂ ಅವ್ಯವಹಾರಗಳನ್ನು ಆಗಿದ್ದರೆ ಅದನ್ನು ಬಹಿರಂಗಪಡಿಸಲಿ. ಇದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಯಾರ್ಯಾರು ತಪ್ಪು ಮಾಡಿದ್ದಾರೆ. ಏಕೆಂದರೆ ನಾನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡುವುದಕ್ಕೆ separate ಆಗಿ ಅರ್ಧಗಂಟೆ ಟೈಮ್ ಕೊಡಬೇಕು. ಆಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು ; ಮಾನ್ಯ ರೇವಣ್ಣನವರೆ. ತಾವು ಸೋಮವಾರ ಮುಂದುವರಿಸುವಿರಂತೆ.

ಶ್ರೀ ಹೆಚ್.ಡಿ. ರೇವಣ್ಣ ; ತಾವು ಸೋಮವಾರ ಮಾತನಾಡುವುದಕ್ಕೆ ಅವಕಾಶವನ್ನು ಕೊಡತ್ತೀರಾ?

ಅಧ್ಯಕ್ಷರು : ಇನ್ನು 10 ನಿಮಿಷದಲ್ಲಿ ಮುಗಿಸುವುದಾದರೆ ಮುಗಿಸಿ.

ಶ್ರೀ ಹೆಚ್.ಡಿ ರೇವಣ್ಣ : ಸಾರ್ ಇನ್ನು one hour ಬೇಕು.

ಅಧ್ಯಕ್ಷರು : one hour ಬೇಡ. ಬಹಳ ಸದಸ್ಯರುಗಳು ಮಾತನಾಡುವವರು ಇದ್ದಾರೆ. ತಾವು ನಿಯಂತ್ರಣವನ್ನು ಮಾಡಿಕೊಂಡು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಇನ್ನು half on hourನಲ್ಲಿ ಮುಗಿಸಿಕೊಡುತ್ತೇನೆ ಸಾರ್.

ಅಧ್ಯಕ್ಷರು ; ಇವತ್ತೇ ತಾವು ಮುಗಿಸುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ ; ಇವತ್ತೇ ಮುಗಿಸುತ್ತೇನೆ. ನಿಮಗೆ ಏತಕ್ಕಾಗಿ ತೊಂದರೆಯನ್ನು ಕೊಡುವುದು.

ಅಧ್ಯಕ್ಷರು : ಒಂದು 10 ನಿಮಿಷದಲ್ಲಿ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ ; ನಿನ್ನೆ ಹಾಲಿನ ದರ ಬಗ್ಗೆ ಏನು 2.00 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕರ್ನಾಟಕದ ಹಾಲು ಉತ್ಪಾದಕರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ನಿನ್ನೆ ಸನ್ಮಾನ್ಯ ಮುನಿಯಪ್ಪನವರು ಹೇಳಿದರು.